JANAAGRAHA

# ನನ್ನ ನಗರ ನನ್ನ ಜವಾಬ್ದಾರಿ

## ಸಕ್ರಿಯ ನಾಗರಿಕತ್ವದ ಕೈಪಿಡಿ

ಕರ್ನಾಟಕ ರಾಜ್ಯ ಆವೃತ್ತಿ





JANAAGRAHA

# ನನ್ನ ನಗರ ನನ್ನ ಜವಾಬ್ದಾರಿ

## ಸಕ್ರಿಯ ನಾಗರಿಕತ್ವದ ಕೈಪಿಡಿ

# ಮುನ್ನುಡಿ





सत्यमेव जयते

**ಶ್ರೀ ಹರ್ದೀಪ್ ಸಿಂಗ್ ಪುರಿ**

ಮಾನ್ಯ ವಸತಿ ಮತ್ತು ನಗರ ವ್ಯವಹಾರಗಳ ಸಚಿವರು,
ಭಾರತ ಸರ್ಕಾರ

'ನನ್ನ ನಗರ ನನ್ನ ಜವಾಬ್ದಾರಿ - ಸಕ್ರಿಯ ನಾಗರಿತ್ವದ ಕೈಪಿಡಿ' ನಾಗರಿಕ ಸಮಾಜ, ಆಸಕ್ತ ನಾಗರಿಕರು ಮತ್ತು ತಮ್ಮ ನಗರಗಳ ಅಭಿವೃದ್ಧಿಗೆ ಹೆಚ್ಚಿನ ಕೊಡುಗೆ ನೀಡಲು ಬಯಸುವ ಸಾರ್ವಜನಿಕರ-ಉತ್ಸಾಹದ ಪ್ರಯತ್ನಗಳಿಗೆ ಸಮಯೋಚಿತ ಸಂಪನ್ಮೂಲವಾಗಿದೆ.

ಈ 'ಅಮೃತ್ ಕಾಲ'ದ ಅವಧಿಯಲ್ಲಿ, ಭಾರತದ ನಗರ ಪ್ರದೇಶಗಳು ಅಭಿವೃದ್ಧಿಗೆ ಅದರ ನಗರ ಪ್ರದೇಶಗಳು ಪ್ರಮುಖವಾಗಿವೆ. ಮುಂದಿರುವ ಕಾರ್ಯದ ಪ್ರಮಾಣ ಮತ್ತು ನಮ್ಮ ನಗರಗಳ ಬಳಕೆಯಾಗದ ಸಾಮರ್ಥ್ಯವನ್ನು ಗುರುತಿಸಿದ ಗೌರವಾನ್ವಿತ ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಅವರು ವಿಶ್ವದಲ್ಲಿ ಎಲ್ಲಿಯೂ ಕೈಗೊಳದೆ ಇರುವ ಒಂದು ಅತಿದೊಡ್ಡ ಯೋಜನಾಬದ್ಧ ನಗರೀಕರಣ ಕಾರ್ಯಕ್ರಮವನ್ನು ಅನಾವರಣಗೊಳಿಸಿದ್ದಾರೆ. ಈ ಕಾರ್ಯಕ್ರಮದ ಕೇಂದ್ರ ಸಿದ್ಧಾಂತವು - ನಮ್ಮ ನಗರಗಳ ಮತ್ತು ನಾಗರಿಕರ ಯೋಗಕ್ಷೇಮವನ್ನು ಬಲಪಡಿಸುವ ಸಲುವಾಗಿ ಸಕ್ರಿಯ ನಾಗರಿಕತ್ವವನ್ನು ಪೋಷಿಸಲು ಒತ್ತು ನೀಡುವುದು ಮತ್ತು ನಮ್ಮ ನಗರಗಳನ್ನು ನಿಜವಾಗಿಯೂ ಫಲದಾಯಕವನ್ನಾಗಿ ಮಾಡಿ ಸ್ಪಂದನಾಶೀಲ ಜೀವನ ಹಾಗು ಕೆಲಸವನ್ನು ಮಾಡಲು ಉತ್ತಮ ಗುಣಮಟ್ಟದ ಸ್ಥಳವನ್ನಾಗಿ ಪರಿವರ್ತಿಸುವುದಾಗಿದೆ.

2014ರ ಮೊದಲು ಸರಕಾರದ ಕಾರ್ಯಚಟುವಟಿಕೆಗೆ ಅನ್ಯವಾಗಿರುವ *'ಜನ್ ಬಾಗಿಧಾರಿ'* ಎಂಬ ಪರಿಕಲ್ಪನೆಯು, ಈಗ ನಗರ ಪ್ರದೇಶಗಳ ಪ್ರಮುಖ ಸರ್ಕಾರಿ ನಿಯೋಗಗಳಾದ ಸ್ವಚ್ಛ ಭಾರತ ಮಿಷನ್, ಪ್ರಧಾನಮಂತ್ರಿ ಆವಾಸ್ ಯೋಜನೆ, ಸ್ಮಾರ್ಟ್ ಸಿಟಿ ಮಿಷನ್ ಮತ್ತು ಅಮೃತ ಯೋಜನೆಯಂತಹ ಅನೇಕ ರಾಷ್ಟ್ರೀಯ ಚಳುವಳಿಗಳ ಹಾಗೂ ಲೈಫ್ ಸ್ಟೈಲ್ ಫಾರ್ ಎನ್ವಿರಾನ್ಮೆಂಟ್ (LiFE) ನಂತಹ ಜಾಗತಿಕ ಆಂದೋಲನಗಳ ಅವಿಭಾಜ್ಯ ಅಂಶವಾಗಿದೆ.

ಈ ಕೈಪಿಡಿಯು ಇದರಿಂದ ಮಾರ್ಗದರ್ಶನ ಪಡೆಯುತ್ತದೆ ಹಾಗು ನಗರವಾಸಿಗಳಿಗೆ ಸಲಹೆ ಮತ್ತು ಒಳನೋಟವನ್ನು ಒದಗಿಸುತ್ತದೆ ಮತ್ತು ಅವರು ತಮ್ಮ ಸ್ಥಳೀಯ ಸರ್ಕಾರದೊಂದಿಗೆ ಅರ್ಥಪೂರ್ಣವಾಗಿ ತೊಡಗಿಸಿಕೊಳ್ಳಲು ಮಾರ್ಗದರ್ಶನವನ್ನು ನೀಡುತ್ತದೆ. 4,800 ಪಟ್ಟಣಗಳ ಮತ್ತು ನಗರಗಳ 90,000 ಕ್ಕೂ ಹೆಚ್ಚು ವಾರ್ಡಗಳಿನ ನಾಗರಿಕರು, ಅಧಿಕಾರಿಗಳು ಮತ್ತು ಕೌನ್ಸಿಲರ್ ಗಳು ಸ್ಥಳೀಯ ಕ್ರಮಕ್ಕಾಗಿ ಒಂದು ತಂಡವಾಗಿ ಒಗ್ಗೂಡಿ, ಹವಾಮಾನ ಬದಲಾವಣೆ, ಸಾರ್ವಜನಿಕ ಆರೋಗ್ಯ, ಲಿಂಗ ಸಮಾನತೆ ಮತ್ತು ನಗರ ಪ್ರದೇಶಗಳಲ್ಲಿನ ಬಡ ಜನರಿಗೆ ಸೇವೆಗಳಂತಹ ಜಾಗತಿಕ ಸಮಸ್ಯೆಗಳನ್ನು ನಿವಾರಿಸಬಹುದೆಂದು ನನಗೆ ನಂಬಿಕೆ ಇದೆ.

ಈ ಕೈಪಿಡಿಯನ್ನು ಬಿಡುಗಡೆ ಮಾಡುತ್ತಿರುವ ಜನಾಗ್ರಹವನ್ನು ನಾನು ಅಭಿನಂದಿಸುತ್ತೇನೆ. ಇದು ವಿಕೇಂದ್ರೀಕರಣದ ಉದ್ದೇಶಕ್ಕಾಗಿ ಅವರ ಬದ್ಧತೆಯನ್ನು ಪ್ರದರ್ಶಿಸುವುದಲ್ಲದೆ, ನಗರಗಳ ಸಾಂವಿಧಾನಿಕ ಮತ್ತು ಶಾಸನಬದ್ಧ ಕರ್ತವ್ಯಗಳ ಸೂಕ್ಷ್ಮ ತಿಳುವಳಿಕೆಯನ್ನು ಉಳಿಸಿಕೊಂಡು ಕೌನ್ಸಿಲರ್ ಗಳು, ಪೌರ ಅಧಿಕಾರಿಗಳು ಮತ್ತು ನೆರೆಹೊರೆಯ ಸಮುದಾಯಗಳೊಂದಿಗೆ ತಳಮಟ್ಟದಲ್ಲಿ ಕೆಲಸ ಮಾಡುವ ಅವರ ಪ್ರಭಾವಶಾಲಿ ಅನುಭವದ ವ್ಯಾಪ್ತಿಯನ್ನು ಸಹ ಪ್ರಸ್ತುತಪಡಿಸುತ್ತದೆ

ವಾರ್ಡ್ ಸಮಿತಿಗಳು ಮತ್ತು ಏರಿಯಾ ಸಭೆಗಳಂತಹ ವಿಕೇಂದ್ರೀಕೃತ ವೇದಿಕೆಗಳ ಮೂಲಕ ದೈನಂದಿನ ನಾಗರಿಕ ಸವಾಲುಗಳಿಗೆ ಪರಿಹಾರಗಳನ್ನು ಕಂಡುಕೊಳ್ಳುವ ಪ್ರಾಯೋಗಿಕ ವಿಧಾನಗಳ ಜೊತೆಗೆ ಅಗತ್ಯ ಸೈದ್ಧಾಂತಿಕ ಮಾಹಿತಿಯೊಂದಿಗೆ ನಾಗರಿಕ ನಾಯಕರನ್ನು ಈ ಕೈಪಿಡಿಯು ಸಜ್ಜುಗೊಳಿಸುತ್ತದೆ ಎಂದು ನನಗೆ ಖಾತರಿಯಾಗಿದೆ. ವಾರ್ಡ್ ಸಮಿತಿಗಳು ಮತ್ತು ಪ್ರದೇಶ ಸಭೆಗಳು ಸ್ವರಾಜ್ಯದ ನಿಜವಾದ ಸಾಕಾರ ರೂಪಗಳಾಗಿವೆ. ಅವುಗಳು, ನಾಗರಿಕರ, ಪೌರ ಅಧಿಕಾರಿಗಳ ಮತ್ತು ಚುನಾಯಿತ ಪ್ರತಿನಿಧಿಗಳ ನಡುವಿನ ರಚನಾತ್ಮಕ ತಂಡದ ಕೆಲಸವನ್ನು ಉದಾಹರಿಸುವ ಮೂಲಕ ಸಾಮಾನ್ಯವಾಗಿ ಅತಿಯಾಗಿ ಬಳಕೆಯಾಗುವ, ಆದರೆ ಅಪರೂಪದಲ್ಲಿ ಅರ್ಥೈಸಿಕೊಳ್ಳಲಾಗುವ 'ಸಮುದಾಯ' ದ ಆದರ್ಶವನ್ನು ಪ್ರತಿನಿಧಿಸಿಸುಲು ಉದ್ದೇಶಿತವಾಗಿವೆ

ಈ ವೇದಿಕೆಗಳನ್ನು ನಾಗರಿಕರ ಭಾಗವಹಿಸುವಿಕೆಯ ಕೇಂದ್ರ ಬಿಂದುಗಳಾಗಿ ಇರಿಸುವ ಮೂಲಕ, ಈ ಕೈಪಿಡಿಯು ಅವುಗಳನ್ನು ಬಲಪಡಿಸಲು ಮತ್ತು ಅಭಿವೃದ್ಧಿ ಯೋಜನೆಗಳನ್ನು ಯೋಜಿಸುವ ಮತ್ತು ಅನುಷ್ಠಾನಗೊಳಿಸುವ ಕೇಂದ್ರಗಳಾಗಿ ಮಾಡಲು ಕೈಗೊಳ್ಳಬೇಕಾದ ಕ್ರಮಗಳತ್ತ ಗಮನ ಸೆಳೆಯುವ ಗುರಿಯನ್ನು ಹೊಂದಿದೆ. ಈ ಸಂಸ್ಥೆಗಳನ್ನು ಸ್ಥಳೀಯ ಆಡಳಿತದ ಪರಿಣಾಮಕಾರಿ ಸಾಧನಗಳಾಗಿ ರೂಪಿಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ.

ನಮ್ಮ ನಗರಗಳ ಎಲ್ಲಾ ನೆರೆಹೊರೆಗಳು ಮತ್ತು ವಾರ್ಡಗಳಲ್ಲಿ ಇರುವ ನಿವಾಸಿಗಳ ಕ್ಷೇಮಾಭಿರುದ್ಧಿ ಸಂಘಗಳಂತಹ ನಾಗರಿಕ ಗುಂಪುಗಳಿಗೆ ಮತ್ತು ನಾಗರಿಕರಿಗೆ ಈ ಮಾರ್ಗದರ್ಶಿಯನ್ನು ಉತ್ತಮವಾಗಿ ಬಳಸಿಕೊಳ್ಳಲು ಮತ್ತು ಇದರಿಂದ ನಮ್ಮ ನಗರಗಳನ್ನು ಅಭಿವೃದ್ಧಿ ಹೊಂದುವ ಜಾಗಗಳನ್ನಾಗಿ ಮಾಡುವುದಕ್ಕೆ ಕೈಜೋಡಿಸಲು ನಾನು ಕರೆ ನೀಡುತ್ತೇನೆ.

(ಹರ್ದೀಪ್ ಎಸ್ ಪುರಿ)
ವಸತಿ ಮತ್ತು ನಗರ ವ್ಯವಹಾರಗಳ ಸಚಿವರು,
ಭಾರತ ಸರ್ಕಾರ

ನವ ದೆಹಲಿ
20 ನವೆಂಬರ್ 2023

# ಮುನ್ನುಡಿ



**ಶ್ರೀ ಸಿದ್ದರಾಮಯ್ಯ**
ಮಾನ್ಯ ಮುಖ್ಯಮಂತ್ರಿಗಳು,
ಕರ್ನಾಟಕ ಸರ್ಕಾರ

---

ಜನಾಗ್ರಹ ಸಂಸ್ಥೆಯು, ನಾಗರಿಕರ ಸಹಭಾಗಿತ್ವದ ಮಹತ್ವವನ್ನು ಸಾರುವ 'ನನ್ನ ನಗರ, ನನ್ನ ಜವಾಬ್ದಾರಿ' ಕೈಪಿಡಿಯನ್ನು ಜನವರಿ 2024ರಲ್ಲಿ ಬಿಡುಗಡೆಗೊಳಿಸುತ್ತಿರುವುದು ಅತ್ಯಂತ ಸಂತೋಷದ ವಿಚಾರ.

''ಜಗತ್ತಿನಲ್ಲಿ ನೀವು ಕಾಣಬಯಸುವ ಬದಲಾವಣೆ ನೀವಾಗಿರಬೇಕು" ಎಂದು ಮಹಾತ್ಮಾ ಗಾಂಧಿಯವರು ಉಲ್ಲೇಖಿಸಿದಂತೆ ಭಾರತದ ನಗರಗಳು ಮತ್ತು ಪಟ್ಟಣಗಳಲ್ಲಿ ಜೀವನದ ಗುಣಮಟ್ಟವನ್ನು ಪರಿವರ್ತಿಸುವ ಮೂಲಕ ಬದಲಾವಣೆ ತರುವ ನಿಟ್ಟಿನಲ್ಲಿ 'ಜನಾಗ್ರಹ' ಕಾರ್ಯನಿರ್ವಹಿಸುತ್ತಿದೆ. ಸರ್ಕಾರದ ಆಡಳಿತದಲ್ಲಿ ಮತ್ತು ಜೀವನದ ಗುಣಮಟ್ಟವನ್ನು ಸುಧಾರಿಸುವ ಮೂಲಸೌಕರ್ಯ ಮತ್ತು ಸೇವೆಗಳನ್ನು ಒಳಗೊಂಡ ಸಂಪನ್ಮೂಲಗಳನ್ನು ಬಲಪಡಿಸಲು ಜನರ ಭಾಗವಹಿಸುವಿಕೆ ಅತ್ಯಂತ ಪ್ರಮುಖ ಎಂಬುದರಲ್ಲಿ 'ಜನಾಗ್ರಹ' ವಿಶ್ವಾಸವಿರಿಸಿದೆ.

ತೆರಿಗೆ ಪಾವತಿಸುವ ನಾಗರಿಕರು ಸರ್ಕಾರದ ನೀತಿ ನಿರೂಪಣೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವ ಜೊತೆಗೆ ಸರ್ಕಾರದ ಕಾರ್ಯವೈಖರಿಯ ಮೇಲ್ವಿಚಾರಣೆಯನ್ನೂ ಕೈಗೊಳ್ಳಬೇಕು. ಗುಣಮಟ್ಟದ ಅಭಿವೃದ್ಧಿ, ಸಾಧಿಸಲು ನೀತಿ ನಿರೂಪಣೆ ಹಾಗೂ ಸರ್ಕಾರದ ಹೊಣೆಗಾರಿಕೆ ಮತ್ತು ಜವಾಬ್ದಾರಿಯ ಬಗ್ಗೆ ನಿಗಾ ವಹಿಸಲು ನಾಗರಿಕರ ಮತ್ತು ಸರ್ಕಾರಗಳ ನಡುವೆ ಸಂವಹನ ಅತ್ಯವಶ್ಯ.

ಜನಾಗ್ರಹ ಸಂಸ್ಥೆಯು 'ನನ್ನ ನಗರ ನನ್ನ ಜವಾಬ್ದಾರಿ' ಕೈಪಿಡಿಯ ಮೂಲಕ ಸರ್ಕಾರದಲ್ಲಿ ನಾಗರಿಕರ ಸಹಭಾಗಿತ್ವದ ಬಗ್ಗೆ ಜನರಲ್ಲಿ ಅರಿವು ಮೂಡಿಸುತ್ತಿರುವುದು ಶ್ಲಾಘನೀಯ. ನಾಗರಿಕರು ಸರ್ಕಾರದ ಜೊತೆ ಕೈಜೋಡಿಸುವ ಮೂಲಕ ಮಾದರಿ ರಾಜ್ಯವನ್ನು ಅಭಿವೃದ್ಧಿಪಡಿಸಬಹುದೆಂಬ ಜಾಗೃತಿ ಮೂಡಿಸುವ ಕಾರ್ಯಕ್ಕೆ ಮುಂದಾಗಿರುವ ಜನಾಗ್ರಹ ಸಂಸ್ಥೆಯ ಪ್ರಯತ್ನ ಅಭಿನಂದನಾರ್ಹ.

ಜನಾಗ್ರಹ ತಂಡದ ಎಲ್ಲ ಸದಸ್ಯರಿಗೆ ನನ್ನ ಶುಭ ಹಾರೈಕೆಗಳು.

(ಸಿದ್ದರಾಮಯ್ಯ)
ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ಬೆಂಗಳೂರು
08 ಜನವರಿ 2024

# ಸಂದೇಶ



**ಶ್ರೀ ಬಿ ಎಸ್ ಸುರೇಶ**

ಮಾನ್ಯ ನಗರಾಭಿವೃದ್ಧಿ ಮತ್ತು ನಗರ ಯೋಜನೆ (ಕೆಯುಡಬ್ಲ್ಯೂಎಸ್‌ಡಿಬಿ ಮತ್ತು ಕೆಯುಐಡಿಎಫ್‌ಸಿ ಸೇರಿದಂತೆ) ಸಚಿವರು
ಕರ್ನಾಟಕ ಸರ್ಕಾರ

---

"ನನ್ನ ನಗರ ನನ್ನ ಜವಾಬ್ದಾರಿ - ಸಕ್ರಿಯ ಪೌರತ್ವಕ್ಕಾಗಿ ಒಂದು ಕೈಪಿಡಿ" ಜನಾಗ್ರಹ ಸಂಸ್ಥೆಯ ಈ ಪರಿಶ್ರಮದ ಉಪಕ್ರಮವು ಶ್ಲಾಘನೀಯವಾಗಿದೆ ಏಕೆಂದರೆ ಇದು ನಾಗರಿಕರು ಮತ್ತು ಸಮುದಾಯಗಳು ತಮ್ಮ ಸ್ಥಳೀಯ ಆಡಳಿತದೊಂದಿಗೆ ಅರ್ಥಪೂರ್ಣವಾಗಿ ಸಕ್ರಿಯವಾಗಿ ತೊಡಗಿಸಿಕೊಳ್ಳಲು ಪ್ರೋತ್ಸಾಹಿಸುವ ಸಂಪನ್ಮೂಲವಾಗಿದೆ.

ನಾಗರೀಕರ ಪಾಲ್ಗೊಳ್ಳುವಿಕೆ ಮತ್ತು ನಗರಾಡಳಿತದಲ್ಲಿ ಅವರ ಭಾಗವಹಿಸುವಿಕೆ ನಗರಾಭಿವೃದ್ಧಿಗೆ ಪ್ರಮುಖವಾಗಿದೆ. ಈ ಕೈಪಿಡಿಯ ಮುಖ್ಯ ತತ್ವವೆಂದರೆ ಸರ್ಕಾರದೊಂದಿಗೆ ನಾಗರೀಕರು ಬೆರೆಯುವ ಭಾವನೆಯನ್ನು ಪ್ರೋತ್ಸಾಹಿಸುವುದು ಮತ್ತು ವಿಕೇಂದ್ರೀಕೃತ ಆಡಳಿತವನ್ನು ಬಲಪಡಿಸುವುದಾಗಿದೆ. ಜಾಗತಿಕ ಹವಾಮಾನ ಬದಲಾವಣೆ, ಕಾನೂನು ಸುವ್ಯವಸ್ಥೆ, ಮಹಿಳೆಯರ ಸುರಕ್ಷತೆ, ಮತ್ತು ಸಾರ್ವಜನಿಕ ಆರೋಗ್ಯಗಳಂತಹ ದೊಡ್ಡ ಮಟ್ಟದ ಸವಾಲುಗಳನ್ನು ನಾಗರೀಕರ ಸಹಕಾರ ಮತ್ತು ಸಕ್ರಿಯ ಪಾಲ್ಗೊಳ್ಳುವಿಕೆ ಇಲ್ಲದೆ ಎದುರಿಸಲು ಯಾವ ಸರ್ಕಾರಕ್ಕೂ ಸಾಧ್ಯವಿಲ್ಲ. ಆದ್ದರಿಂದ ಜಾಗತಿಕ ಸಮಸ್ಯೆಗಳಿಗೆ ಸ್ಥಳೀಯವಾಗಿ ಜನರು ತಮ್ಮ ಸಕ್ರಿಯತೆಯಿಂದ ಸರ್ಕಾರದ ಅಂಗಗಳೊಂದಿಗೆ ಜೊತೆಗೂಡಿ ಅವಶ್ಯಕ ಯೋಜನೆಗಳನ್ನು ಹೇಗೆ ಅನುಷ್ಠಾನಗೊಳಿಸಬೇಕೆಂಬುದನ್ನು ತಿಳಿಯಲು ಈ ಕೈಪಿಡಿಯು ಒಂದು ಸರಳವಾದ ಮಾರ್ಗದರ್ಶಿಯಾಗಿದೆ.

ಜನರ ಬಾಗಿಲಿಗೆ ಸರ್ಕಾರವೆಂಬ ಧ್ಯೇಯದಿಂದ ಕರ್ನಾಟಕದ ಮಾನ್ಯ ಮುಖ್ಯಮಂತ್ರಿಗಳ ಮಾರ್ಗದರ್ಶನದೊಂದಿಗೆ ರಾಜ್ಯ ಸರ್ಕಾರ ಹಗಲು ರಾತ್ರಿ ಶ್ರಮಿಸುತ್ತಿದೆ. ದೇಶಕ್ಕೆ ಮಾದರಿ ಆಗುವಂತೆ ಬೆಂಗಳೂರಿನಲ್ಲಿ ಹಲವು ವರ್ಷಗಳಿಂದ ವಾರ್ಡ್ ಸಮಿತಿಗಳು ಜನರು ತಮ್ಮ ವಾರ್ಡಿನ ಕಾರ್ಪೊರೇಟರ್, ಮಹಾನಗರ ಪಾಲಿಕೆ ಅಧಿಕಾರಿಗಳು ಹಾಗು ವಿವಿಧ ಪೌರ ಸಂಸ್ಥೆಗಳ ಸಿಬ್ಬಂದಿಗಳೊಡನೆ ತಿಂಗಳಿಗೆ ಎರಡು ಬಾರಿ ಸಭೆ ಸೇರಿ ಸ್ಥಳೀಯ ಮಟ್ಟದ ಅಭಿವೃದ್ಧಿ ಮತ್ತು ಪೌರ ಸಮಸ್ಯೆಗಳಿಗೆ ತ್ವರಿತಗತಿಯಲ್ಲಿ ಪರಿಹಾರ ಕಂಡುಕೊಳ್ಳುವ ವೇದಿಕೆಯಾಗಿವೆ.

ಕರ್ನಾಟಕದ ಎಲ್ಲ ಮಹಾನಗರಗಳಲ್ಲಿ ಸಾಮಾನ್ಯ ಜನರ ಭಾಗವಹಿಸುವ ವೇದಿಕೆಗಳಾದ ಏರಿಯಾ ಸಭಾ ಮತ್ತು ವಾರ್ಡ್ ಸಮಿತಿಗಳನ್ನು ಕಾರ್ಯಾರಂಭಿಸಿ, ಜನರ ಸಮಸ್ಯೆಗಳಿಗೆ ಸ್ಥಳದಲ್ಲಿಯೇ ಪರಿಹಾರ ಕಲ್ಪಿಸಿಕೊಡಲು ನಮ್ಮ ಸರ್ಕಾರ ಬದ್ಧವಾಗಿದೆ. ಚುನಾಯಿತ ಪ್ರತಿನಿಧಿಗಳು, ಅಧಿಕಾರಿಗಳು, ಮತ್ತು ಜನ ಸಾಮಾನ್ಯರು ಒಟ್ಟುಗೂಡಿ ಒಂದು ತಂಡವಾಗಿ ನಾಡು ಕಟ್ಟುವ ಮಹತ್ಕಾರ್ಯ ಕುರಿತಾದ ಸೂಕ್ಷ್ಮ ವಿಚಾರಗಳು ಎಳೆ ಎಳೆಯಾಗಿ ಈ ಕೈಪಿಡಿಯಲ್ಲಿ ಮೂಡಿಬಂದಿದೆ, ಇದಕ್ಕಾಗಿ ನಾನು ಜನಾಗ್ರಹಕ್ಕೆ ಅಭಿನಂದನೆ ತಿಳಿಸುತ್ತೇನೆ.

ಜನಾಗ್ರಹ ತಂಡದ ಎಲ್ಲ ಸದಸ್ಯರಿಗೆ ನನ್ನ ಶುಭ ಹಾರೈಕೆಗಳು.

(ಬಿ ಎಸ್ ಸುರೇಶ)
ನಗರಾಭಿವೃದ್ಧಿ ಮತ್ತು ನಗರ ಯೋಜನೆ (ಕೆಯುಡಬ್ಲ್ಯೂಎಸ್‌ಡಿಬಿ ಮತ್ತು ಕೆಯುಐಡಿಎಫ್‌ಸಿ ಸೇರಿದಂತೆ) ಸಚಿವರು
ಕರ್ನಾಟಕ ಸರ್ಕಾರ

ಬೆಂಗಳೂರು
25 ಜನವರಿ 2024

# ಸಂದೇಶ



**ಶ್ರೀ ರಹೀಂ ಖಾನ್**

ಮಾನ್ಯ ಪೌರಾಡಳಿತ ಮತ್ತು ಹಜ್ ಸಚಿವರು
ಕರ್ನಾಟಕ ಸರ್ಕಾರ

---

ಪ್ರಜಾಪ್ರಭುತ್ವವನ್ನು ಬಲಪಡಿಸುವಲ್ಲಿ ನಾಗರೀಕರ ಪಾತ್ರವು ಮಹತ್ವದ್ದಾಗಿದ್ದು ಜನಾಗ್ರಹ ಸಂಸ್ಥೆಯು "ನನ್ನ ನಗರ ನನ್ನ ಜವಾಬ್ದಾರಿ" ಎಂಬ ಕೈಪಿಡಿಯನ್ನು ಸಿದ್ಧಪಡಿಸಿ ನಗರಗಳಲ್ಲಿನ ಸಮುದಾಯಗಳು ಮತ್ತು ಸರ್ಕಾರದೊಂದಿಗೆ ನಾಗರಿಕರ ಬಾಂಧವ್ಯ ಮತ್ತು ಸಕ್ರಿಯ ಭಾಗವಹಿಸುವಿಕೆಯಿಂದ ನಗರಗಳಿಗಾಗುವ ಅನುಕೂಲಗಳ ಮೇಲಿನ ಆಳವಾದ ಜ್ಞಾನ ಮತ್ತು ಅನುಭವಗಳನ್ನು ನುರಿತ ತಜ್ಞರಿಂದ ಸಂಗ್ರಹಿಸಿ ಈ ಕೈಪಿಡಿಯನ್ನು ರಚಿಸಿ ಜನವರಿ-2024 ರಲ್ಲಿ ಬಿಡುಗಡೆಗೊಳಿಸುತ್ತಿರುವುದು ಅತ್ಯಂತ ಸಂತೋಷದ ವಿಚಾರ.

ಅನೇಕ ಜನರು ತಮ್ಮ ನೆರೆಹೊರೆ ನಮ್ಮದು ಎಂಬ ಬದ್ಧತೆಯ ಭಾವವನ್ನು ಹೊಂದಿರುತ್ತಾರೆ ಮತ್ತು ಅಲ್ಲಿನ ಜೀವನಮಟ್ಟವನ್ನು ಸುಧಾರಿಸಲು ಸಾಮಾಜಿಕ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿರುತ್ತಾರೆ. ಈ ರೀತಿಯ ಭಾಗವಹಿಸುವುಕೆಯಿಂದ ಸ್ಥಳೀಯ ಮಟ್ಟದ ಸಮಸ್ಯೆಗಳು ತ್ವರಿತಗತಿಯಲ್ಲಿ ಪರಿಹಾರಗೊಳ್ಳುವುದರೊಂದಿಗೆ ನಗರಗಳಲ್ಲಿ ಭವಿಷ್ಯದಲ್ಲಿ ಉದ್ಭವಿಸಬಹುದಾದ ಜ್ವಲಂತ ಸಮಸ್ಯೆಗಳಂತವುಗಳನ್ನೂ ಸಹ ಸಣ್ಣದರಲ್ಲೇ ಪರಿಹರಿಸಲು ಸಾಧ್ಯವಾಗುತ್ತದೆ.

ಜನರು ತಮ್ಮ ನಗರ ಸರ್ಕಾರ ಮತ್ತು ಪೌರಸಂಸ್ಥೆಗಳೊಂದಿದೆ ಕೈಜೋಡಿಸಿ ತಾವು ಎದುರಿಸುತ್ತಿರುವ ವಿಭಿನ್ನ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ವಾರ್ಡ್ ಸಮಿತಿ ಮತ್ತು ಏರಿಯಾ ಸಭಾಗಳು ಅತ್ಯಂತ ಪರಿಣಾಮಕಾರಿ ಸಾಂಸ್ಥಿಕ ವೇದಿಕೆಗಳಾಗಿವೆ. ಇಂತಹ ವೇದಿಕೆಗಳು ಜನರು ತಮ್ಮ ನೆರೆಹೊರೆಯಲ್ಲಿನ ಸ್ವಚ್ಛತೆ ಕಾಪಾಡಿಕೊಳ್ಳಲು, ಕೆರೆ ಬಾವಿಗಳನ್ನು ಪುನರುಜ್ಜೀವನಗೊಳಿಸಲು, ಸಾಂಸ್ಕೃತಿಕ ಮತ್ತು ಆಟದ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡಲು ಮತ್ತು ಹತ್ತು ಹಲವಾರು ಅಭಿರುದ್ದಿ ಕೆಲಸಗಳನ್ನು ಹಮ್ಮಿಕೊಳ್ಳಲು ಪೂರಕವಾಗಿವೆ. ನಮ್ಮ ಸರ್ಕಾರವು ನಾಗರಿಕರ ಸಮಸ್ಯೆಗಳಿಗೆ ತ್ವರಿತಗತಿಯಲ್ಲಿ ಸ್ಪಂದಿಸುವಂತೆ ಮತ್ತು ರಾಜ್ಯದ ಜನರ ಹಕ್ಕುಗಳನ್ನು ಎತ್ತಿ ಹಿಡಿಯುವ ಸರ್ಕಾರವಾಗಿದೆ. ಈಗಾಗಲೇ ಬೆಂಗಳೂರು ಮತ್ತು ಮಂಗಳೂರಿನಲ್ಲಿ ಜನಸ್ನೇಹಿ ವೇದಿಕೆಗಳಾದ ವಾರ್ಡ್ ಸಮಿತಿಗಳು ಜಾರಿಯಲ್ಲಿದ್ದು ಮುಂದಿನ ದಿನಗಳಲ್ಲಿ ಕರ್ನಾಟಕದ ಎಲ್ಲ ಪುರಸಭೆ, ನಗರಸಭೆ ಮತ್ತು ಪಟ್ಟಣ ಪಂಚಾಯಿತಿಗಳಲ್ಲಿ ವಾರ್ಡ್ ಸಮಿತಿಗಳ ರಚನೆಗೆ ನಮ್ಮ ಸರ್ಕಾರ ಬದ್ಧವಾಗಿದೆ ಎಂದು ನಾನು ಹರ್ಷದಿಂದ ತಿಳಿಯಪಡಿಸುತ್ತೇನೆ.

ಈ ಸುಂದರ ಮತ್ತು ಉಪಯುಕ್ತ ಕೈಪಿಡಿಯನ್ನು ಸಿದ್ಧಗೊಳಿಸಿದ ಜನಾಗ್ರಹ ತಂಡದ ಎಲ್ಲಾ ಸದಸ್ಯರಿಗೂ ಅಭಿನಂದಿಸುತ್ತೇನೆ.

(ರಹೀಂ ಖಾನ್)
ಪೌರಾಡಳಿತ ಮತ್ತು ಹಜ್ ಸಚಿವರು
ಕರ್ನಾಟಕ ಸರ್ಕಾರ

ಬೆಂಗಳೂರು
27 ಜನವರಿ 2024

# ಈ ಕೈಪಿಡಿಯ ಉದ್ದೇಶಗಳು

**1** ನಿಮ್ಮ ನಗರ ಮತ್ತು ವಾರ್ಡ್‌ಗಳಲ್ಲಿ ಹೇಗೆ ಆಡಳಿತ ಮಾಡಲಾಗುತ್ತದೆ ಎಂಬುದನ್ನು ತಿಳಿಸುತ್ತದೆ

**2** ವಾರ್ಡ್ ಸಮಿತಿಗಳು ಎಂದರೇನು ಮತ್ತು ಅವು ನಾಗರಿಕರ ಭಾಗವಹಿಸುವಿಕೆಯ ಸಾಂಸ್ಥಿಕ ವೇದಿಕೆಗಳಾಗಿ ಹೇಗೆ ಕಾರ್ಯನಿರ್ವಹಿಸುತ್ತವೆ ಎಂಬುದನ್ನು ಅರ್ಥಮಾಡಿಕೊಳ್ಳಲು ಅನುಕೂಲಕರವಾಗಿದೆ

**3** ವಾರ್ಡ್ ಮಟ್ಟದಲ್ಲಿ ಧನಾತ್ಮಕ ಬದಲಾವಣೆಗೆ ಅನುಕೂಲಕರವಾಗಲಿದೆ

**4** ನಾಗರಿಕ ಸಮೂಹಗಳು ಮತ್ತು ನಗರಾಭಿವೃದ್ಧಿಗೆ ಸಂಬಂಧಿಸಿದ ಕಾರ್ಯಕ್ರಮಗಳ ಮೂಲಕ ಸಮಾನ ಮನಸ್ಕ ನಾಗರಿಕರನ್ನು ಸಜ್ಜುಗೊಳಿಸಿ ಮತ್ತು ಸಂಪರ್ಕ ಸಾಧಿಸಿಲು ಸಹಾಯಕವಾಗಿದೆ

**5** ನಿಮ್ಮ ನಗರಮಟ್ಟದ ಸರ್ಕಾರ ಮತ್ತು ವಾರ್ಡ್ ಅಧಿಕಾರಿಗಳೊಂದಿಗೆ ಪರಿಣಾಮಕಾರಿಯಾಗಿ ತೊಡಗಿಸಿಕೊಳ್ಳಲು ಸಹಕಾರಿಯಾಗಲಿದೆ



# 01

# ಪ್ರಾರಂಭ

## 1.1 ಈ ಕೈಪಿಡಿ ಯಾವ ಸಂಧರ್ಭದಲ್ಲಿ ಅನ್ವಯವಾಗಲಿದೆ?



- ನಾನು ನನ್ನ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಅನುಭವಿ ಸದಸ್ಯನಾಗಿದ್ದೇನೆ ಮತ್ತು ಸ್ಥಳೀಯ ನಾಗರಿಕ ಸಮಸ್ಯೆಗಳನ್ನು ಅರಿತುಕೊಳ್ಳಲು ಸಕ್ರಿಯವಾಗಿ ತೊಡಗಿಸಿಕೊಂಡಿದ್ದೇನೆ.





- ನನ್ನ ಆಯ್ಕೆಗಳನ್ನು ಅನ್ವೇಷಿಸುತ್ತಿರುವ ನಾನೊಬ್ಬ ಕುತೂಹಲಕಾರಿ ನಾಗರಿಕನಾಗಿದ್ದೇನೆ.

- ನಾನು ನನ್ನ ನೆರೆಹೊರೆಯಲ್ಲಿ ಒಳ್ಳೆಯ ಬದಲಾವಣೆಯನ್ನು ತರಲು ಬಯಸುತ್ತಿದ್ದೇನೆ ಆದರೆ ಅದನ್ನು ಹೇಗೆ ಮಾಡಬೇಕೆಂಬುದರ ಬಗ್ಗೆ ನನಗೆ ಯಾವುದೇ ಮಾಹಿತಿ ಅಥವಾ ಅನುಭವವಿಲ್ಲ.

**ಹೌದು!**

ಅನುಭವಗಳು ಮತ್ತು ಪರಿಣತಿಯನ್ನು ಸೀಮಿತಗೊಳಿಸದೆ, ಎಲ್ಲರಿಗೂ ಉಪಯೋಗವಾಗುವಂತೆ ಈ ಕೈಪಿಡಿಯನ್ನು ವಿನ್ಯಾಸಗೊಳಿಸಲಾಗಿದೆ. ನಿಮ್ಮ ನೆರೆಹೊರೆಯನ್ನು ಮತ್ತು ನಿಮ್ಮ ನಗರವನ್ನು ಉತ್ತಮ ಸ್ಥಳವನ್ನಾಗಿ ಮಾಡಲು ನೀವು ಉತ್ಸುಕರಾಗಿದ್ದರೆ, ಈ ಕೈಪಿಡಿ ನಿಮಗಾಗಿಯೇ ಸಿದ್ಧಪಡಿಸಲಾಗಿದೆ.



## 1.2 ನಾವು ಈ ಕೈಪಿಡಿಯನ್ನು ಏಕೆ ರಚಿಸಿದ್ದೇವೆ?



**ನಿಮ್ಮ ಪ್ರದೇಶದ ಸುತ್ತಮುತ್ತಲಿನ ಪೌರ ಸಮಸ್ಯೆಗಳನ್ನು ನೀವು ಎಂದಾದರೂ ಸರಿಪಡಿಸಲು ಬಯಸಿದ್ದು, ಆದರೆ, ಎಲ್ಲವನ್ನೂ 'ಹೇಗೆ-ಮಾಡುವುದು' ಎಂದು ತೋಚದಂತಾಗಿದ್ದರೆ ನೀವು ನಿಮ್ಮ ಕೈಯನ್ನು ಮೇಲಕ್ಕೆತ್ತಿ.**

ನಮ್ಮಲ್ಲಿ ಹೆಚ್ಚಿನವರಿಗೆ, ನಮ್ಮ ನೆರೆಹೊರೆಯ ಸ್ಥಿತಿಯಲ್ಲಿ ಬದಲಾವಣೆ ತರಲು ಏನಾದರು ಮಾಡಬೇಕೆಂಬ ಚಡಪಡುವಿಕೆ ಇರುತ್ತದೆ. ಅವರಿಗೆ ಎಲ್ಲಿಂದ ಅಥವಾ ಹೇಗೆ ಪ್ರಾರಂಭಿಸಬೇಕು ಎಂಬುದು ಸರಳವಾಗಿ ತಿಳಿದಿರುವುದಿಲ್ಲ.

ಈ ಕೈಪಿಡಿಯು ನಿಮಗೆ ಆ ದ್ವಂದತೆಯಿಂದ ಹೊರತಂದು ಸ್ಥಿತಿಯನ್ನು ಬದಲಾಯಿಸುವ ಗುರಿಯನ್ನು ಹೊಂದಿದೆ.

ಇದು ನಾಗರಿಕರನ್ನು ತಮ್ಮ ವಾಸದ ಪ್ರದೇಶಗಳಲ್ಲಿ ಅವರು ಬಯಸುವ ಬದಲಾವಣೆಯನ್ನು ತರಲು ಅಗತ್ಯವಿರುವ ಪ್ರಾಯೋಗಿಕ ಜ್ಞಾನದೊಂದಿಗೆ ಸಜ್ಜುಗೊಳಿಸುತ್ತದೆ. ಇದು ಆಡಳಿತದ ಪ್ರತಿಯೊಂದು ಹಂತದಲ್ಲೂ ನಾಗರಿಕ ಸಹಭಾಗಿತ್ವದ ಪ್ರಜಾಪ್ರಭುತ್ವವನ್ನು ಉತ್ತೇಜಿಸುವ ಮತ್ತು ಸುಧಾರಿಸಲ್ಪಡುವ ನಗರ ಯೋಜನೆ ಮತ್ತು ಅಭಿವೃದ್ಧಿಗೆ ಅವಶ್ಯಕವಿರುವ, ತಳಮಟ್ಟದ ವಿಧಾನವನ್ನು ಪ್ರೋತ್ಸಾಹಿಸುತ್ತದೆ.

ಈ ಕೈಪಿಡಿಯು ನಾಗರಿಕರಿಗೆ ಸಕ್ರಿಯ ನಾಗರಿಕತ್ವ ಅನುಸರಿಸಲು ಸುಲಭವಾದ ಮಾರ್ಗಸೂಚಿಯನ್ನು ಒದಗಿಸುವ ನಮ್ಮ ಪ್ರಯತ್ನವಾಗಿದೆ. ಏಕೆಂದರೆ ಸಕ್ರಿಯ ನಾಗರಿಕರು ಸದಾಕಾಲ ಸ್ಪಂದನಾಶೀಲ ಪ್ರಜಾಪ್ರಭುತ್ವವನ್ನು ರಚಿಸುತ್ತಾರೆ ಎಂಬುದು ನಮ್ಮ ನಂಬಿಕೆ.

## 1.3 ಪ್ರಜಾಪ್ರಭುತ್ವದಲ್ಲಿ ವಿವಿಧ ರೀತಿಯ ನಾಗರಿಕರು ಇದ್ದಾರೆಯೇ?

# ಹೌದು!

ನಾಗರಿಕ ಸಹಭಾಗಿತ್ವದ ಮಟ್ಟ, ನಾಗರಿಕ ಹಕ್ಕುಗಳ ಕುರಿತು ನಿಮ್ಮ ನಿಲುವು ಜವಾಬ್ದಾರಿಗಳ ಕುರಿತು ನಿಮ್ಮ ನಿಲುವಿನ ಆಧಾರದ ಮೇಲೆ, ಮುಖ್ಯವಾಗಿ ಈ ಕೆಳಗೆ ವಿಂಗಡಿಸಲಾದ ನಾಲ್ಕು ವಿಭಾಗಗಳಲ್ಲಿ, ನೀವು ಒಂದಕ್ಕೆ ಸೇರಿರುವ ಸಾಧ್ಯತೆಯಿದೆ:


ನಿರಾಸಕ್ತ ನಾಗರಿಕರು


ಆಸಕ್ತ ನಾಗರಿಕರು


ತೊಡಗಿಸಿಕೊಂಡ ನಾಗರಿಕರು


ಸಕ್ರಿಯ ನಾಗರಿಕರು


ಸಮುದಾಯ ನಾಯಕರು.

**ಈ ಐದು ವಿಭಾಗಗಳನ್ನು ಏಣಿಯ ಮೇಲಿನ ಐದು ಮೆಟ್ಟಿಲುಗಳಂತೆ ಯೋಚಿಸಿ. ನಿರಾಸಕ್ತ ನಾಗರಿಕತ್ವವೂ ಏಣಿಯ ಮೊದಲನೇ ಹಂತವಾಗಿದ್ದರೆ, ಸಮುದಾಯ ನಾಯಕತ್ವವು ಅತ್ಯಂತ ಮೇಲ್ಭಾಗದ ಹಂತವಾಗಿದೆ.**





## 05 ಸಮುದಾಯ ನಾಯಕರು

ಸಾಮೂಹಿಕ ಕ್ರಮಕ್ಕಾಗಿ ಕಾರ್ಯಸೂಚಿಯನ್ನು ಸಿದ್ಧಪಡಿಸಿ ನೆರೆಹೊರೆಯ ನಾಗರಿಕರನ್ನು ಸಜ್ಜುಗೊಳಿಸುತ್ತಾರೆ; ನೆರೆಹೊರೆಯ ಸಮಸ್ಯೆಗಳ ನಿವಾರಣೆಗಾಗಿ ನಿರಂತರವಾಗಿ ವಾರ್ಡ್ ಕೌನ್ಸಿಲರ್ ಮತ್ತು ಪಾಲಿಕೆ ಅಧಿಕಾರಿಗಳೊಂದಿಗೆ ತೊಡಗಿಸಿಕೊಳ್ಳುತ್ತಾರೆ; ಸರ್ಕಾರದ ಜೊತೆಗೂಡಿ ನಿಯಮಗಳ ಪಾಲನೆ ಮಾಡಲು ಸಮುದಾಯವನ್ನು ಸಜ್ಜುಗೊಳಿಸುತ್ತಾರೆ.

## 04 ಸಕ್ರಿಯ ನಾಗರಿಕರು



ನಿಯಮಿತವಾಗಿ ನಾಗರಿಕ ಸಮಸ್ಯೆಗಳನ್ನು ಅರಿತುಕೊಳ್ಳಲು ಸಕ್ರಿಯವಾಗಿ ತೊಡಗಿಸಿಕೊಂಡಿರುತ್ತಾರೆ; ಇತರರೊಂದಿಗೆ ಕೆಲಸ ಮಾಡಿ ತಾವು ಎದುರಿಸುತ್ತಿರುವ ಸಮಸ್ಯೆಗಳನ್ನು ಪರಿಹರಿಸುವುದಕ್ಕೆ ನಾಯಕತ್ವ ವಹಿಸುತ್ತಾರೆ. ಇವರು ನಿಯಮಗಳನ್ನು ಉಲ್ಲಂಘಿಸುವ ಸಮುದಾಯದ ಸದಸ್ಯರನ್ನು ವಿರೋಧಿಸಿ ಅವರಿಗೆ ಸರಿಯಾದ ಮಾರ್ಗದರ್ಶನ ಮಾಡುತ್ತಾರೆ

## 03 ತೊಡಗಿಸಿಕೊಂಡ ನಾಗರಿಕರು



ತಮ್ಮ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ/ಅಪಾರ್ಟ್ಮೆಂಟ್ ಅಸೋಸಿಯೇಷನ್ ಭಾಗವಾಗಿ ನೆರೆಹೊರೆಯ ನಾಗರಿಕ ಸಮಸ್ಯೆಗಳ ಪರಿಹಾರದಲ್ಲಿ ಸಾಧಾರಣವಾಗಿ ತೊಡಗಿಸಿಕೊಂಡಿರುತ್ತಾರೆ; ನಿಯಮಿತವಾಗಿ ಸಮುದಾಯ ಕಾರ್ಯಕ್ರಮಗಳಿಗೆ ಹಾಜರಾಗುತ್ತಾರೆ. ಯಾವಾಗಲೂ ಹೆಚ್ಚಿನದನ್ನು ಮಾಡಲು ಬಯಸುತ್ತಾರೆ ಆದರೆ ಅದನ್ನು ಹೇಗೆ ಮಾಡಬೇಕು ಮತ್ತು ಸಮಯವನ್ನು ಹೇಗೆ ಮೀಸಲಿರಿಸಬೇಕು ಎಂಬುದು ಇವರಿಗೆ ತಿಳಿದಿರುವುದಿಲ್ಲ. ಇವರು ಲಂಚವನ್ನು ನೀಡದೆ, ನಿಯಮಗಳನ್ನು ಅನುಸರಿಸುವುದು ಹೆಮ್ಮೆ ಎಂದು ಭಾವಿಸಿರುತ್ತಾರೆ.

## 02 ಆಸಕ್ತ ನಾಗರಿಕರು



ನಾಗರಿಕ ಸಮಸ್ಯೆಗಳ ಬಗ್ಗೆ ಸಾಕಷ್ಟು ಕಿರಿಕಿರಿ ಮತ್ತು ಚಿಂತೆ; ಯಥಾಸ್ಥಿತಿಯನ್ನು ಬದಲಾಯಿಸಲು ಏನನ್ನಾದರೂ ಮಾಡಲು ಬಯಸುತ್ತಾರೆ ಆದರೆ ಹೇಗೆ ಅಥವಾ ಎಲ್ಲಿ ಪ್ರಾರಂಭಿಸಬೇಕು ಎಂದು ತಿಳಿದಿರುವುದಿಲ್ಲ . ಅವರು ಹೆಚ್ಚಾಗಿ ನಿಯಮಗಳನ್ನು ಅನುಸರಿಸುತ್ತಾರೆ ಆದರೆ ನಿಯಮ ಪಾಲನೆ ಕಷ್ಟವೆನಿಸಿದರೆ ಅಥವಾ ಎಲ್ಲರೂ ಅದೇ ರೀತಿ ಮಾಡುತ್ತಿದ್ದರೆ ಇವರು ಸಹ ಅಂತವರನ್ನು ಅನುಸರಿಸುತ್ತಾರೆ.

## 01 ನಿರಾಸಕ್ತ ನಾಗರಿಕರು



ಇವರು ನಾಗರಿಕ ಸಮಸ್ಯೆಗಳ ಕುರಿತು ಕೋಪಿತರಾಗಿದ್ದು ಸಮಸ್ಯೆಗಳು ಬದಲಾಗುವುದಿಲ್ಲ ಎಂದು ನಂಬಿರುತ್ತಾರೆ. ವ್ಯವಸ್ಥೆಯನ್ನು ಬದಲಾಯಿಸಲು ವ್ಯಕ್ತಿಗಳು ಹೆಚ್ಚು ಏನು ಮಾಡಲು ಸಾಧ್ಯವಿಲ್ಲ ಮತ್ತು ಸಮಸ್ಯೆಗಳನ್ನು ಸರಿಪಡಿಸುವುದು ಸರ್ಕಾರಕ್ಕೆ ಬಿಟ್ಟದ್ದು ಎಂದು ಅವರು ನಂಬಿರುತ್ತಾರೆ. ಉದಾಹರಣೆಗೆ ಸಂಚಾರ ನಿಯಮಗಳನ್ನು ಪಾಲಿಸದ ಸಂದರ್ಭದಲ್ಲಿ ಮತ್ತು ಕಸವನ್ನು ಎಲ್ಲಂದರಲ್ಲಿ ಹಾಕುವಾಗ ಇವರು ಇನ್ನೊಂದು ಬಾರಿ ಯೋಚಿಸುವುದಿಲ್ಲ.

ಮೂಲ: ಜನಾಗ್ರಹ ನಾಗರಿಕತ್ವದ ಏಣಿ

**ಪ್ರತಿಯೊಬ್ಬ ವ್ಯಕ್ತಿಯು ಸಕ್ರಿಯ ನಾಗರಿಕರಾಗಿ ಪರಿವರ್ತನೆ ಆಗುವ ಮೊದಲು ಬಹುಶಃ ನಿರಾಸಕ್ತ ನಾಗರಿಕರಾಗಿದ್ದರು ಎಂಬುದನ್ನು ನೆನಪಿಟ್ಟುಕೊಳ್ಳುವುದು ಬಹಳ ಮುಖ್ಯ. ಆದ್ದರಿಂದ ನೀವು ಪ್ರಸ್ತುತ ಇರುವ ಮೆಟ್ಟಿಲು ನೀವು ಯಾವ ರೀತಿಯ ನಾಗರಿಕರಾಗಬಹುದು ಎಂಬುದನ್ನು ಶಾಶ್ವತವಾಗಿ ವ್ಯಾಖ್ಯಾನಿಸುವುದಿಲ್ಲ.**

## ಉತ್ತಮ ನಾಗರಿಕರ ಗುಣಲಕ್ಷಣ

ನೀವು ಕೈಗೊಳ್ಳುವ ಪ್ರತಿಯೊಂದು ಕಾರ್ಯ ಮತ್ತು ಕ್ರಮ, ದೊಡ್ಡದಿರಲಿ ಅಥವಾ ಚಿಕ್ಕದಿರಲಿ, ಇದು ನಿಮ್ಮ ನಾಗರಿಕತ್ವದ ಪರಿಚಯ ನೀಡುತ್ತದೆ. ಉದಾಹರಣೆಗೆ ಸಂಚಾರಿ ನಿಯಮಗಳನ್ನು ಅನುಸರಿಸುವುದು ಮತ್ತು ಲಂಚವನ್ನು ನೀಡದೇ ಇರುವುದು ಅಥವಾ ಉತ್ತಮ ಬದಲಾವಣೆಗಾಗಿ ವಾರ್ಡ್ ಮಟ್ಟದ ಅಭಿಯಾನವನ್ನು ಸಂಘಟಿಸುವಷ್ಟು ಸಂಕೀರ್ಣವಾದ ಪ್ರಯತ್ನಪಡುವುದು. ಇವುಗಳನ್ನು ಸಾಕಾರಗೊಳಿಸಲು ಶ್ರಮ ಪಡುವವರೇ ಉತ್ತಮ ನಾಗರಿಕರಾಗಿ ಗುರುತಿಸಲ್ಪಡುತ್ತಾರೆ.

# 1.4 ಚಟುವಟಿಕೆಯ ಮನೆ




## ನಾಗರಿಕತ್ವದ ರಸಪ್ರಶ್ನೆ ತೆಗೆದುಕೊಳ್ಳಿ!

ನೀವು ಪ್ರಸ್ತುತ ಯಾವ ಬಗೆಯ ನಾಗರಿಕರಾಗಿದ್ದೀರಾ ಮತ್ತು ಅದಕ್ಕೆ ಮುಖ್ಯವಾಗಿ, ನೀವು ಬರುವ ದಿನಗಳಲ್ಲಿ ಯಾವ ಬಗೆಯ ನಾಗರಿಕರಾಗಲು ಬಯಸುತ್ತೀರಿ ಎಂಬುದನ್ನು ಕಂಡುಕೊಳ್ಳಿ.

**ಈ ಕೆಳಗಿನ ವಿಕಲ್ಪಗಳಲ್ಲಿ ಯಾವುದು ನಿಮ್ಮನ್ನು ಹೆಚ್ಚು ಸೂಕ್ತವಾಗಿ ವಿವರಿಸುತ್ತೆ ಅದನ್ನುಆಯ್ಕೆ ಮಾಡಿ:**

1 ನಾನು ಮನೆಯಲ್ಲಿ ತ್ಯಾಜ್ಯವನ್ನು ಹಸಿ ಮತ್ತು ಒಣಕಸವಾಗಿ ವಿಂಗಡಿಸುತ್ತೇನೆ

- ಎ ಯಾವಾಗಲೂ
- ಬಿ ಬಹುತೇಕ
- ಸಿ ಕೆಲವೊಮ್ಮೆ
- ಡಿ ಎಂದಿಗೂ ಇಲ್ಲ



2 ಎಲ್ಲೆಂದರಲ್ಲಿ ನಾನು ಕಸ ಹಾಕುವುದಿಲ್ಲ

- ಎ ಯಾವಾಗಲೂ
- ಬಿ ಬಹುತೇಕ
- ಸಿ ಕೆಲವೊಮ್ಮೆ
- ಡಿ ಎಂದಿಗೂ ಇಲ್ಲ



3 ನಾನು ಸರತಿ ಸಾಲುಗಳನ್ನು ಅನುಸರಿಸುತ್ತೇನೆ ಮತ್ತು ನಿಯಮವನ್ನು ಉಲ್ಲಂಘಿಸುವುದಿಲ್ಲ

- ಎ ಯಾವಾಗಲೂ
- ಬಿ ಬಹುತೇಕ
- ಸಿ ಕೆಲವೊಮ್ಮೆ
- ಡಿ ಎಂದಿಗೂ ಇಲ್ಲ



4 ನಾನು ದಿನಸಿ, ಹಣ್ಣುಗಳು ಅಥವಾ ತರಕಾರಿಗಳನ್ನು ಖರೀದಿಸಲು ಮನೆಯಿಂದ ಬಟ್ಟೆಯ, ಸೆಣಬು ಅಥವಾ ಮರುಬಳಕೆ ಮಾಡಬಹುದಾದ ಕೈ ಚೀಲವನ್ನು ತೆಗೆದುಕೊಂಡು ಹೋಗುತ್ತೇನೆ

- ಎ ಯಾವಾಗಲೂ
- ಬಿ ಬಹುತೇಕ
- ಸಿ ಕೆಲವೊಮ್ಮೆ
- ಡಿ ಎಂದಿಗೂ ಇಲ್ಲ



5 ನಾನು ಸಂಚಾರ ನಿಯಮಗಳನ್ನು ಅನುಸರಿಸುತ್ತೇನೆ

- ಎ ಯಾವಾಗಲೂ
- ಬಿ ಬಹುತೇಕ
- ಸಿ ಕೆಲವೊಮ್ಮೆ
- ಡಿ ಎಂದಿಗೂ ಇಲ್ಲ



**6** ನಾನು ಲಂಚ ಕೊಡುತ್ತೇನೆ

- ಎ ಎಂದಿಗೂ ಇಲ್ಲ
- ಬಿ ಸಾಂದರ್ಭಿಕವಾಗಿ
- ಸಿ ಆಗಾಗ್ಗೆ
- ಡಿ ಯಾವಾಗಲೂ



**7** ನಾನು ನನ್ನ ತೆರಿಗೆಗಳನ್ನು ನಿಯಮಿತವಾಗಿ ಮತ್ತು ಸಮಯಕ್ಕೆ ಸರಿಯಾಗಿ ಪಾವತಿಸುತ್ತೇನೆ

- ಎ ಯಾವಾಗಲೂ
- ಬಿ ಬಹುತೇಕ
- ಸಿ ಕೆಲವೊಮ್ಮೆ
- ಡಿ ಎಂದಿಗೂ ಇಲ್ಲ




**8** ನಾನು ಕಳೆದ ಚುನಾವಣೆಯಲ್ಲಿ ಮತ ಚಲಾಯಿಸಿದ್ದೇನೆ

- ಎ ಹೌದು
- ಬಿ ಇಲ್ಲ, ಆದರೆ ನಾನು ಹಿಂದಿನ ಚುನಾವಣೆಗಳಲ್ಲಿ ಮತ ಚಲಾಯಿಸಿದ್ದೇನೆ
- ಸಿ ಇಲ್ಲ, ಆದರೆ ಭವಿಷ್ಯದ ಚುನಾವಣೆಗಳಲ್ಲಿ ನಾನು ಮತ ಚಲಾಯಿಸಲು ಬಯಸುತ್ತೇನೆ
- ಡಿ ನಾನು ಎಂದಿಗೂ ಚುನಾವಣೆಯಲ್ಲಿ ಮತ ಚಲಾಯಿಸುವುದಿಲ್ಲ



**9** ಸಾರ್ವಜನಿಕ ಒಳಿತಿಗಾಗಿ ನಾನು ಆರ್.ಟಿ.ಐ ಅರ್ಜಿಯನ್ನು ಸಲ್ಲಿಸಿದ್ದೇನೆ

- ಎ ಹಲವು ಬಾರಿ
- ಬಿ ಆಗಾಗ್ಗೆ
- ಸಿ ಸಾಂದರ್ಭಿಕವಾಗಿ
- ಡಿ ಎಂದಿಗೂ ಇಲ್ಲ




**10** ನಾಗರಿಕ ಸಮಸ್ಯೆಯನ್ನು ಪರಿಹರಿಸಲು ನಾನು ಸಾರ್ವಜನಿಕ ಅಧಿಕಾರಿಯೊಂದಿಗೆ ಮಾತನಾಡಿದ್ದೇನೆ

- ಎ ಹಲವು ಬಾರಿ
- ಬಿ ಆಗಾಗ್ಗೆ
- ಸಿ ಸಾಂದರ್ಭಿಕವಾಗಿ
- ಡಿ ಎಂದಿಗೂ ಇಲ್ಲ



**11** ನನ್ನ ಕಾರ್ಪೊರೇಟರ್, ಮೇಯರ್ ಮತ್ತು ಶಾಸಕರ ಹೆಸರು ನನಗೆ ತಿಳಿದಿದೆ

- ಎ ಹೌದು, ಅವರೆಲ್ಲರ ಹೆಸರುಗಳು ನನಗೆ ಗೊತ್ತು
- ಬಿ ನನಗೆ ನನ್ನ ಶಾಸಕರ ಹೆಸರು ತಿಳಿದಿದೆ ಆದರೆ ನನ್ನ ಕಾರ್ಪೊರೇಟರ್ ಅಥವಾ ಮೇಯರ್ ಹೆಸರುಗಳು ತಿಳಿದಿಲ್ಲ
- ಸಿ ನನ್ನ ಶಾಸಕರ ಮತ್ತು ಮೇಯರ್‌ಗಳ ಹೆಸರು ನನಗೆ ತಿಳಿದಿದೆ ಆದರೆ ನನ್ನ ಕಾರ್ಪೊರೇಟರ್ ಹೆಸರು ತಿಳಿದಿಲ್ಲ
- ಡಿ ಅವರ ಪೈಕಿ ಯಾರ ಹೆಸರುಗಳು ನನಗೆ ತಿಳಿದಿಲ್ಲ



**12** ನನ್ನ ನಗರದ ನಿರ್ವಹಣೆಗೆ ಸಂಬಂಧಿಸಿದ ಪ್ರತಿಯೊಂದು ಸೇವೆಯನ್ನು ಯಾವ ಸರ್ಕಾರಿ ಸಂಸ್ಥೆ ನಿರ್ವಹಿಸುತ್ತದೆ ಎಂದು ನನಗೆ ತಿಳಿದಿದೆ

- ಎ ನನಗೆ ಸಂಪೂರ್ಣ ಅರಿವಿದೆ
- ಬಿ ಬಹುತೇಕವಾಗಿ ತಿಳಿದಿದೆ
- ಸಿ ಸ್ವಲ್ಪ ಅರಿವಿದೆ
- ಡಿ ತಿಳಿದಿರುವುದಿಲ್ಲ



**13** ಕಾರ್ಪೊರೇಟರ್, ಮೇಯರ್ ಮತ್ತು ಶಾಸಕರ ಮತ್ತು ಅಧಿಕಾರಿಗಳ ಪಾತ್ರಗಳು ಮತ್ತು ಜವಾಬ್ದಾರಿಗಳನ್ನು ನಾನು ಅರ್ಥಮಾಡಿಕೊಂಡಿದ್ದೇನೆ

- ಎ ನನಗೆ ಸಂಪೂರ್ಣ ಅರಿವಿದೆ
- ಬಿ ಬಹುತೇಕವಾಗಿ ತಿಳಿದಿದೆ
- ಸಿ ಸ್ವಲ್ಪ ಅರಿವಿದೆ
- ಡಿ ತಿಳಿದಿರುವುದಿಲ್ಲ



**14** ನಾಗರಿಕ ಸಮಸ್ಯೆಗಳನ್ನು ಪರಿಹರಿಸಲು ಸರ್ಕಾರದೊಂದಿಗೆ ಒಟ್ಟಾಗಿ ಕೆಲಸ ಮಾಡುವುದು ನಾಗರಿಕರ ಜವಾಬ್ದಾರಿ ಎಂದು ನಾನು ನಂಬುತ್ತೇನೆ

- ಎ ಬಲವಾಗಿ ಒಪ್ಪುತ್ತೇನೆ
- ಬಿ ಒಪ್ಪುತ್ತೇನೆ
- ಸಿ ಸ್ವಲ್ಪ ಒಪ್ಪುತ್ತೇನೆ
- ಡಿ ಬಲವಾಗಿ ಒಪ್ಪುವುದಿಲ್ಲ



**ಹೆಚ್ಚಿನ ಪ್ರಶ್ನೆಗಳಿಗೆ ನಿಮ್ಮ ಉತ್ತರ (ಎ) ಆಗಿದ್ದರೆ, ನೀವು ಸಕ್ರಿಯ ಶಿವ ಆಗಿರಬಹುದು.**

ಪ್ರಜಾಪ್ರಭುತ್ವದಲ್ಲಿ ನಾಗರಿಕರ ಪಾಲ್ಗೊಳ್ಳುವಿಕೆಯ ಪ್ರಾಮುಖ್ಯತೆಯನ್ನು ನೀವು ಬಲವಾಗಿ ನಂಬಿದ್ದೀರಿ, ಮತ್ತು ನಿಮ್ಮ ಕಾರ್ಯಗಳು ಅದನ್ನು ಸಾಬೀತುಪಡಿಸುತ್ತವೆ. ನೀವು ನಿಯಮಗಳನ್ನು ಉತ್ಸಾಹದಿಂದ ಅನುಸರಿಸುತ್ತೀರಿ ಮತ್ತು ಹೆದರದೆ ಇತರರನ್ನು ಅದೇ ರೀತಿ ಮಾಡಲು ಪ್ರೋತ್ಸಾಹಿಸುತ್ತೀರಿ. ನೀವು ನಿಮ್ಮ ನೆರೆಹೊರೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದೀರಿ ಮತ್ತು ನಾಗರಿಕ ಸಮಸ್ಯೆಗಳನ್ನು ಪರಿಹರಿಸಲು ತ್ವರಿತವಾಗಿ ಮುಂದಾಳತ್ವವನ್ನು ವಹಿಸುತ್ತೀರಿ.







ಹೆಚ್ಚಿನ ಪ್ರಶ್ನೆಗಳಿಗೆ ನಿಮ್ಮ ಉತ್ತರ (ಬಿ) ಆಗಿದ್ದರೆ, ನೀವು ತೊಡಗಿಸಿಕೊಂಡ ತನ್ವಿರ್ ಆಗಿರಬಹುದು.

ನೀವು ನಾಗರಿಕರಾಗಿ ನಿಮ್ಮ ಕರ್ತವ್ಯಗಳು ಮತ್ತು ಜವಾಬ್ದಾರಿಗಳ ಬಗ್ಗೆ ಆತ್ಮಸಾಕ್ಷಿಯನ್ನು ಹೊಂದಿದ್ದೀರಿ ಮತ್ತು ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ ಅಥವಾ ಅಂತಹ ಸಮೂಹಗಳ ಭಾಗವಾಗಿರಬಹುದು. ಈ ಹಿಂದೆ ನಾಗರಿಕ ಸಮಸ್ಯೆಗಳನ್ನು ಪರಿಹರಿಸಿದ ಪ್ರತಿಫಲವಾಗಿ, ನೀವು ಸ್ಥಳೀಯ ಆಡಳಿತ ಯಂತ್ರದೊಂದಿಗೆ ಸ್ವಲ್ಪ ಪರಿಚಿತರಾಗಿರಬಹುದು. ನೀವು ಜವಾಬ್ದಾರಿಯುತ ನಾಗರಿಕರಾಗಿ ನಿಮ್ಮ ಪಾತ್ರವನ್ನು ಮಾಡುತ್ತಿದ್ದರೂ, ನಿಮ್ಮ ನೆರೆಹೊರೆ ಮತ್ತು ನಗರಕ್ಕಾಗಿ ನೀವು ಹೆಚ್ಚಿನದನ್ನು ಮಾಡಲು ಬಯಸುತ್ತೀರಿ ಆದರೆ ನಿಮ್ಮ ಭಾಗವಹಿಸುವಿಕೆವನ್ನು ಹೇಗೆ ಹೆಚ್ಚಿಸಿಕೊಳ್ಳಬೇಕೆಂದು ನಿಮಗೆ ತಿಳಿದಿಲ್ಲ.

ಹೆಚ್ಚಿನ ಪ್ರಶ್ನೆಗಳಿಗೆ ನಿಮ್ಮ ಉತ್ತರವು (ಸಿ) ಆಗಿದ್ದರೆ, ನೀವು ಆಸಕ್ತೆ ಅನಿತಾ ಆಗಿರಬಹುದು.

ನೀವು ಹೆಚ್ಚಾಗಿ ನಿಯಮಗಳನ್ನು ಅನುಸರಿಸುತ್ತೀರಿ. ಬಹುಶಃ ನಿಯಮಗಳು ತುಂಬಾ ತೊಡಕಾಗಿರುವಾಗ ಅಥವಾ ಎಲ್ಲರೂ ಅವುಗಳನ್ನು ಮುರಿಯುತ್ತಿರುವಂತೆ ತೋರುತ್ತಿರುವ ಸಂದರ್ಭವನ್ನು ಹೊರತುಪಡಿಸಿ, ಸಾಮಾನ್ಯವಾಗಿ ಕಾನೂನು ಪಾಲಿಸುವ ನಾಗರಿಕರಾಗಿರುತ್ತೀರಿ. ನಗರ ಎದುರಿಸುತ್ತಿರುವ ನಾಗರಿಕ ಸಮಸ್ಯೆಗಳಿಂದ ಕಿರಿಕಿರಿಗೊಂಡಿದ್ದೀರಿ ಆದರೆ, ಸರ್ಕಾರವನ್ನು ದೂಷಿಸುವ ಬದಲು, ಅವುಗಳನ್ನು ಪರಿಹರಿಸುವಲ್ಲಿ ಸಕ್ರಿಯ ಪಾತ್ರವನ್ನು ವಹಿಸಲು ನೀವು ಆಸಕ್ತಿ ಹೊಂದಿದ್ದೀರಿ. ನಿಮ್ಮನ್ನು ಹಿಡಿದಿಟ್ಟುಕೊಳ್ಳುವ ಏಕೈಕ ವಿಷಯವೆಂದರೆ ಅರಿವು ಇಲ್ಲದಿರಬಹುದು.







ಹೆಚ್ಚಿನ ಪ್ರಶ್ನೆಗಳಿಗೆ ನಿಮ್ಮ ಉತ್ತರ (ಡಿ) ಆಗಿದ್ದರೆ, ನೀವು ನಿರಾಸಕ್ತೆ ನ್ಯಾನ್ಸಿ ಆಗಿರಬಹುದು.

ನಮ್ಮಲ್ಲಿ ಹೆಚ್ಚಿನವರಂತೆ, ನೀವು ಸಹ ಬಹುಶಃ ನಾಗರಿಕ ಸಮಸ್ಯೆಗಳಿಂದ ನಿರಾಶೆಗೊಂಡಿದ್ದೀರಿ, ಆದರೆ ಸ್ಥಿತಿ ಬದಲಾಗುತ್ತದೆ ಎಂದು ನೀವು ಹೆಚ್ಚು ಭರವಸೆ ಹೊಂದಿಲ್ಲ. ವಿಷಯಗಳನ್ನು ಸರಿಪಡಿಸುವುದು ಸರ್ಕಾರಕ್ಕೆ ಬಿಟ್ಟದ್ದು ಮತ್ತು ವ್ಯವಸ್ಥೆಯನ್ನು ಬದಲಾಯಿಸಲು ಒಬ್ಬ ನಾಗರಿಕನಿಂದ ಸಾಧ್ಯವಿಲ್ಲ ಎಂದು ನೀವು ನಂಬಿದ್ದೀರಿ. ಆದರೆ ಈ ಕೈಪಿಡಿಯನ್ನು ಓದುವುದು ಸಕ್ರಿಯ ನಾಗರಿಕತ್ವದ ನಿಮ್ಮ ಪ್ರಯಾಣದ ಮೊದಲ ಹೆಜ್ಜೆಯಾಗಿರಬಹುದು! ಪ್ರಾರಂಭಿಸಿದ್ದಕ್ಕಾಗಿ ನಿಮಗೆ ಧನ್ಯವಾದಗಳು! ಸುರಂಗ ಎಷ್ಟೇ ಉದ್ದದ್ದಾಗಿದ್ದರು ಅದರ ಕೊನೆಯಲ್ಲಿ ಬೆಳಕು ಕಂಡೆ ಕಾಣುತ್ತದೆ. ಈ ಕೈಪಿಡಿಯು ನಿಮ್ಮನ್ನು ಆ ಬೆಳಕಿನತ್ತ ಕರೆದೊಯ್ಯುತ್ತದೆ ಎಂದು ಹೇಳಲು ನಾವು ನಿಮ್ಮೊಡನೆ ಇಲ್ಲಿ ಸೇರಿದ್ದೇವೆ.

## 1.5 ನಾನು ಏಕೆ ಸಕ್ರಿಯ ನಾಗರಿಕನಾಗಬೇಕು? ಮತ್ತು ಪ್ರಜಾಪ್ರಭುತ್ವದಲ್ಲಿ ಸಕ್ರಿಯ ನಾಗರಿಕರ ಪಾತ್ರ ಎಷ್ಟು ಮುಖ್ಯವಾದುದು?

ಪ್ರಜಾಪ್ರಭುತ್ವವು ಸದೃಢವಾಗಿ ಬೆಳೆಯಲು ಸಕ್ರಿಯ ನಾಗರಿಕರ ಅಗತ್ಯವಿದೆ.

ಪ್ರಜಾಪ್ರಭುತ್ವವು ದ್ವಿಮುಖ ರಸ್ತೆ ಎಂದು ಸಕ್ರಿಯ ನಾಗರಿಕರು ಅರ್ಥಮಾಡಿಕೊಳ್ಳುತ್ತಾರೆ. ಅವರು ತಮ್ಮ ಹಕ್ಕುಗಳು ಮತ್ತು ಸ್ವಾತಂತ್ರ್ಯಗಳನ್ನು ಆನಂದಿಸುತ್ತಿರುವಾಗಲೂ ಸಹ, ಅವರು ಪ್ರಜಾಪ್ರಭುತ್ವದಲ್ಲಿ ವಾಸಿಸುವಾಗ ಅನೇಕ ಜವಾಬ್ದಾರಿಗಳ ಬಗ್ಗೆ ತಿಳಿದಿರುತ್ತಾರೆ. ನಾಗರಿಕರಾಗಿ ತಮ್ಮ ಕರ್ತವ್ಯವು ಚುನಾವಣೆಯ ಮತದಾನದಲ್ಲಿ ಕೊನೆಗೊಳ್ಳುವುದಿಲ್ಲ ಎಂದು ಅವರು ನಂಬುತ್ತಾರೆ. ಬದಲಾಗಿ, ಅವರು ನಾಗರಿಕತ್ವವನ್ನು ದೊಡ್ಡ ಮತ್ತು ಸಣ್ಣ ಕ್ರಮಗಳು ಮತ್ತು ನಡವಳಿಕೆಗಳ ಮೂಲಕ ಪ್ರತಿದಿನ ಪುನರುಚ್ಚರಿಸುವ ನಿರಂತರವಾದ ಬದ್ಧತೆಯಾಗಿ ನೋಡುತ್ತಾರೆ.

ಅವರಿಗೆ, ಸಕ್ರಿಯ ನಾಗರಿಕತ್ವವು ದೇಶಭಕ್ತಿಯನ್ನು ಕಾರ್ಯ ರೂಪಕ್ಕೆ ತರುವುದಾಗಿದೆ. ಸೇವಾ ಕಾರ್ಯಗಳ ಮೂಲಕ ತಮ್ಮ ದೇಶದ ಮೇಲಿನ ಪ್ರೀತಿಯನ್ನು ವ್ಯಕ್ತಪಡಿಸುವ ಮಾರ್ಗವಾಗಿದೆ.

ಜನಪ್ರಿಯ ಚಿಂತಕರು ಮತ್ತು ತತ್ವಜ್ಞಾನಿ, ಸ್ವಾಮಿ ವಿವೇಕಾನಂದರು ಉಲ್ಲೇಖದಂತೆ



> **ನಿಜವಾದ ಕೆಲಸ ಆಗುವುದು ನಿರಂತರವಾಗಿ ಕಾರ್ಯಮಾಡುವುದರಿಂದ**

ಮತ್ತು ಸಕ್ರಿಯ ನಾಗರಿಕರು ಪ್ರಜಾಪ್ರಭುತ್ವವನ್ನು ಪ್ರತಿದಿನ ಪಾಲಿಸುವ ತತ್ವದಲ್ಲಿ ನಂಬುತ್ತಾರೆ



# 1.6 ನಾನೊಬ್ಬ ಸಕ್ರಿಯ ನಾಗರಿಕನಾಗಿ ದೇಶಕ್ಕೆ ಹೇಗೆ ನನ್ನ ಯೋಗದಾನ ನೀಡಬಹುದು?

ನಮ್ಮ ದೈನಂದಿನ ಜೀವನವು ನಮ್ಮ ನಿಯಂತ್ರಣದಿಂದ ಹೊರಗಿರುವ ವಿವಿಧ ಅಂಶಗಳಿಂದ ಪ್ರಭಾವಿತವಾಗಿರುತ್ತದೆ. ನಾವು ನಾಗರಿಕರಾಗಿ



ಸಂಚಾರ ವ್ಯವಸ್ಥೆಯನ್ನು ಸುಧಾರಿಸುವುದು



ಸಾರ್ವಜನಿಕ ಶೌಚಾಲಯಗಳಲ್ಲಿ ಸ್ವಚ್ಛತೆಯನ್ನು ಸುನಿಶ್ಚಿತಗೊಳಿಸಿಸುವುದು



ನಗರ ಪ್ರದೇಶಗಳಲ್ಲಿ ಪ್ರವಾಹವನ್ನು ತಡೆಯುವುದು



ಸಮರ್ಪಕವಾಗಿ ನೀರು ಪೂರೈಕೆ ಮಾಡುವುದು

**ಇವೆಲ್ಲವುಗಳನ್ನೂ ಹೇಗೆ ಪರಿಣಾಮಕಾರಿಯಾಗಿ ಎದುರಿಸಬಹುದು?**
**ಈ ಸಮಸ್ಯೆಗಳು ಸರ್ಕಾರದ ವ್ಯಾಪ್ತಿಗೆ ಬರುತ್ತವೆ ಅಲ್ಲವೇ?**

**ಹೌದು, ನೀವು ಹೇಳಿದ್ದು ಸರಿ - ಆದರೆ ಸ್ವಲ್ಪ ಮಟ್ಟಿಗೆ ಮಾತ್ರ. ಇವುಗಳು ಸ್ಥಳೀಯ ಸರ್ಕಾರದ ಜವಾಬ್ದಾರಿಯಾಗಿದ್ದರೂ, ನಾಗರಿಕರು ಮಾಡಬಹುದಾದ ಮತ್ತು ಮಾಡಬೇಕಾದದ್ದು ಬಹಳಷ್ಟು ಇದೆ.**

ನಮ್ಮ ಸರ್ಕಾರ ಮತ್ತು ಸರ್ಕಾರದ ಸಂಸ್ಥೆಗಳು ನಾಗರಿಕರ ಭಾಗವಹಿಸುವಿಕೆಗಾಗಿ ವಿನ್ಯಾಸಗೊಂಡಿವೆ. ಈ ಸಂರಚನೆಯ ಅಡಿಯಲ್ಲಿ ಹಲವು ಪ್ರಕ್ರಿಯೆಗಳು ಮತ್ತು ಕಾರ್ಯವಿಧಾನಗಳು ನಗರದಲ್ಲಿನ ಜೀವನ ಮಟ್ಟವನ್ನು (ಉತ್ತಮ ರಸ್ತೆಗಳು, ಬೀದಿದೀಪಗಳು, ನಿರಂತರ ನೀರು ಸರಬರಾಜು ಇತ್ಯಾದಿ) ಮತ್ತು ಅದಕ್ಕೆ ಅಗತ್ಯವಿರುವ ಹಣದ ವ್ಯವಸ್ಥೆ ಮಾಡಲು ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಪ್ರಭಾವ ಬೀರಲು ನಮಗೆ ಅನುಕೂಲವಾಗಿವೆ. ಪಾಲಿಕೆಯ ಬಜೆಟಿನಲ್ಲಿ ಅನುಧಾನ ಹಂಚಿಕೆಗೆ ಮತ್ತು ನಾಗರಿಕರ ಜೀವನ ಮಟ್ಟಕ್ಕೆ ಪರಸ್ಪರ ಸಂಬಂಧವಿದೆ ಮತ್ತು ಇವುಗಳು ಒಂದಕ್ಕೊಂದು ನೇರವಾಗಿ ಪರಿಣಾಮ ಬೀರುತ್ತವೆ.

ಈ ಸನ್ನಿವೇಶದಲ್ಲಿ ಸಕ್ರಿಯ ನಾಗರಿಕರ ಪಾತ್ರ ಮಹತ್ವದ್ದಾಗಿದೆ.

ಸಕ್ರಿಯ ನಾಗರಿಕರು ಹವಾಮಾನ ಬದಲಾವಣೆಯಂತಹ ಜಾಗತಿಕ ಸಮಸ್ಯೆಗೆ ಸ್ಥಳೀಯ ವಿಧಾನವನ್ನು ಅಳವಡಿಸಿಕೊಳ್ಳುವ ಉತ್ತಮ ಸ್ಥಿತಿಯಲ್ಲಿರುತ್ತಾರೆ. ಹಸಿರು ಮತ್ತು ಪರಿಸರ ಸ್ನೇಹಿ ನೆರೆಹೊರೆಯು  ಆರೋಗ್ಯಕರ ಸಮುದಾಯವಾಗಿ ಪರಿವರ್ತಿಸುತ್ತದೆ.

ಆದ್ದರಿಂದ, ಸಕ್ರಿಯ ನಾಗರಿಕರ ಪ್ರಯತ್ನಗಳು ನಮ್ಮ ನೆರೆಹೊರೆ ಮತ್ತು ನಗರಗಳಲ್ಲಿ ಸುಧಾರಿತ ಜೀವನ ಮಟ್ಟಕ್ಕೆ ದಾರಿ ಮಾಡಿಕೊಡುತ್ತವೆ. ಅಂದಮೇಲೆ, ನಮ್ಮ ಸಮಾಜ ಹೆಚ್ಚು ಹೆಚ್ಚು ಸಕ್ರಿಯ ನಾಗರಿಕರನ್ನು ಹೊಂದಿದ್ದಷ್ಟು ನಮ್ಮ ನಗರಗಳು ಮತ್ತು ನಮ್ಮ ದೇಶವು ಉತ್ತಮವಾಗಿರುತ್ತವೆ.

**ಏಕೆಂದರೆ ನಿಜವಾದ ಪ್ರಜಾಪ್ರಭುತ್ವ ಎಂದರೆ ನಿಜವಾದ ಭಾಗವಹಿಸುವಿಕೆ.**

# 1.7 ಈ ಕೈಪಿಡಿಯಿಂದ ನಾನು ಏನನ್ನು ಕಲಿಯಲು ನಿರೀಕ್ಷಿಸಬಹುದು?

ನೆರೆಹೊರೆಯ ಮಟ್ಟದಲ್ಲಿ ಬದಲಾವಣೆ ತರಲು ಅಗತ್ಯವಿರುವ ಎಲ್ಲಾ ಮಾಹಿತಿ, ಸಲಹೆ ಮತ್ತು ತಜ್ಞರ ಮಾರ್ಗದರ್ಶನ ನೀವು ಪಡೆಯಲು ಈ ಕೈಪಿಡಿಯನ್ನು ವಿನ್ಯಾಸಗೊಳಿಸಲಾಗಿದೆ.

ನಗರ ಸರ್ಕಾರಗಳ ಕುರಿತು ಸಂಪೂರ್ಣ ಮಾಹಿತಿ ಪಡೆಯಲು, **2ನೇ ಅಧ್ಯಾಯಕ್ಕೆ** ತೆರಳಿ

ನಿಮ್ಮ ವಾರ್ಡ್, ವಾರ್ಡಿನ ಆಡಳಿತ ಮತ್ತು ವಾರ್ಡಿನ ಬಜೆಟ್ ಕುರಿತು ಮಾಹಿತಿಗಾಗಿ **3ನೇ ಅಧ್ಯಾಯಕ್ಕೆ** ತೆರಳಿ

ನೀವು ಪೌರ ಸಂಸ್ಥೆಗಳೊಂದಿಗೆ ತೊಡಗಿಸಿಕೊಳ್ಳುವ ಮತ್ತು ಅವರ ಗಮನ ಸೆಳೆಯುವ ವಿಭಿನ್ನ ವಿಧಾನಗಳನ್ನು ತಿಳಿದುಕೊಳ್ಳಲು ಬಯಸುವಿರಾ? **4ನೇ ಅಧ್ಯಾಯಕ್ಕೆ** ತೆರಳಿ.

ನಿಮ್ಮ ವಾರ್ಡ್ ಸಮಿತಿಯಲ್ಲಿ ಹೆಚ್ಚು ಸಕ್ರಿಯರಾಗಲು ಯೋಚಿಸುತ್ತಿರುವಿರಾ? **ಅಧ್ಯಾಯ 5** ನಿಮಗೆ ಅತ್ಯಗತ್ಯವಾದ ಓದುವಿಕೆಯಾಗಿದೆ.

ನಿಮ್ಮ ವಾರ್ಡ್ ಸಮಿತಿಯನ್ನು ಮುಂದಿನ ಹಂತಕ್ಕೆ ಕೊಂಡೊಯ್ಯಲು ಅತಿ ಉತ್ಸುಕರಾಗಿದ್ದೀರಾ? **ಅಧ್ಯಾಯ 6** ರೊಂದಿಗೆ ಪ್ರಾರಂಭಿಸಿ.

**ಈ ಕೈಪಿಡಿಯು ಈ ಕೆಳಗಿನ ಅಂಶಗಳನ್ನು ಒಳಗೊಂಡಿದೆ**

1. ಒಂದು ಮಹತ್ವದ ಉದ್ದೇಶಕ್ಕಾಗಿ ನಾಗರಿಕರನ್ನು ಸಜ್ಜುಗೊಳಿಸುವ ಕಾರ್ಯಕ್ರಮವನ್ನು ಹೇಗೆ ನಡೆಸುವುದು
2. ಮಾಧ್ಯಮದೊಂದಿಗೆ ಹೇಗೆ ತೊಡಗಿಸಿಕೊಳ್ಳುವುದು
3. ನಗರ ಮತ್ತು ವಾರ್ಡ್ ಅಧಿಕಾರಿಗಳಿಗೆ ಪತ್ರವನ್ನು ಹೇಗೆ ಸಿದ್ಧಪಡಿಸುವುದು
4. ಸಮಸ್ಯೆಗಳನ್ನು ಪೌರ ಸಂಸ್ಥೆಗಳ ಅಧಿಕಾರಿಗಳಿಗೆ ಹೇಗೆ ವರದಿ ಮಾಡುವುದು
5. ಪತ್ರಿಕಾ ಪ್ರಕಟಣೆಯನ್ನು ಹೇಗೆ ಸಿದ್ಧಪಡಿಸುವುದು
6. ದೂರಿನ ಪರಿಹಾರಕ್ಕಾಗಿ ಕ್ರಮ ಜರುಗಿಸಲು ನಗರ ಸರ್ಕಾರವನ್ನು ಹೇಗೆ ಒತ್ತಾಹಿಸುವುದು
7. ಸಾಮಾಜಿಕ ಮಾಧ್ಯಮವನ್ನು ಹೇಗೆ ಬಳಸುವುದು



## 1.8 ಈ ಕೈಪಿಡಿಯನ್ನು ಬಳಸುವಾಗ ನಾನು ಏನು ಗಮನದಲ್ಲಿಟ್ಟುಕೊಳ್ಳಬೇಕು?

ಪ್ರತಿ ನಗರ, ವಾರ್ಡ್ ಮತ್ತು ಅದರ ಆಡಳಿತದ ನಿಯಮಗಳು ಆಗಾಗ್ಗೆ ವಿಭಿನ್ನವಾಗಿರುತ್ತವೆ, ಈ ಕೈಪಿಡಿಯು ಭಾರತದ ಬಹುತೇಕ ನಗರಗಳಲ್ಲಿನ ಸಾಮಾನ್ಯ ಪರಿಸ್ಥಿತಿ ಮತ್ತು ಪ್ರಕ್ರಿಯೆಗಳನ್ನು ಬಿಂಬಿಸುತ್ತದೆ. ಆದರೆ ಇದು ದೇಶದ ಎಲ್ಲಾ ನಗರಗಳ ಮತ್ತು ವಾರ್ಡಗಳ ಕಾರ್ಯಚಟುವಟಿಕೆಗಳ ಸಂಪೂರ್ಣ ವಿವರಣೆಯನ್ನು ಒದಗಿಸುವುದಿಲ್ಲ.

ಈ ಕೈಪಿಡಿಯಲ್ಲಿ ಪ್ರಸ್ತುತಪಡಿಸಲಾದ ಮಾಹಿತಿ, ಸಲಹೆ ಮತ್ತು ಮಾರ್ಗದರ್ಶನವು ಜನಾಗ್ರಹ ಸಂಸ್ಥೆಗೆ ಲಭ್ಯವಿರುವ ಅತ್ಯುತ್ತಮ ಮಾಹಿತಿಯ ಮೇಲೆ ಆಧರಿಸಿದೆ. ನೀತಿಗಳು, ನಿಯಮಗಳು ಮತ್ತು ನಿಬಂಧನೆಗಳಲ್ಲಿ ಬದಲಾವಣೆಗಳನ್ನು ಒಳಪಡಿಸಲು ಈ ಕೈಪಿಡಿಯು ನಿಯಮಿತವಾಗಿ ನವೀಕರಿಸಲಾಗುತ್ತದೆ.

ನಿಮಗೆ ಯಾವುದೇ ನಿರ್ದಿಷ್ಟ ಮಾಹಿತಿ ಬೇಕಾದರೆ, ದಯವಿಟ್ಟು ನಮ್ಮನ್ನು ಈ ಇಮೇಲ್ ವಿಳಾಸದಲ್ಲಿ ಸಂಪರ್ಕಿಸಿ

activecitizen@janaagraha.org

## 1.9 ಈ ಕೈಪಿಡಿ ರಚನೆಗೆ ಕಾರಣವಾದ ಜನಾಗ್ರಹ ಸಂಸ್ಥೆಗೆ ಹಲೋ ಹೇಳಿ.




**ಜನಾಗ್ರಹ ಸಂಸ್ಥೆಯು 20 ವರ್ಷಗಳಿಗೂ ಹೆಚ್ಚಿನ ಕಾಲದಿಂದ ಸಕ್ರಿಯ ನಾಗರಿಕತ್ವ ಮತ್ತು ನಾಗರೀಕ ಸಹಭಾಗಿತ್ವದ ಪ್ರಜಾಪ್ರಭುತ್ವವನ್ನು ಪೋಷಿಸುವ ನಿಟ್ಟಿನಲ್ಲಿ ವ್ಯಾಪಕವಾಗಿ ಕಾರ್ಯನಿರ್ವಹಿಸುತ್ತಾ ಬಂದಿದೆ.**

ಭಾರತದ ನಗರಗಳು ಮತ್ತು ಪಟ್ಟಣಗಳಲ್ಲಿ ಜೀವನದ ಮಟ್ಟವನ್ನು ರೂಪಾಂತರಗೊಳಿಸುವುದೇ ನಮ್ಮ ಗುರಿಯಾಗಿದೆ. ಈ ನಿಟ್ಟಿನಲ್ಲಿ, ನೆರೆಹೊರೆಯ ಮಟ್ಟದಲ್ಲಿ ನಾಗರಿಕ ವಿಷಯಗಳಲ್ಲಿ ಸಹಭಾಗಿತ್ವವನ್ನು ನಾಗರಿಕರು ಮತ್ತು ನಗರ ಸರ್ಕಾರಗಳನ್ನು ಒಟ್ಟಿಗೆ ಸೇರಿಸುವ ಅಭಿಯಾನಗಳ ಮತ್ತು ಕಾರ್ಯಕ್ರಮಗಳ ಆಯೋಜನೆಯ ಮೂಲಕ ಸಕ್ರಿಯ ನಾಗರಿಕತ್ವವನ್ನು ವೇಗಗೊಳಿಸಲು ಮತ್ತು ನಗರ ಆಡಳಿತವನ್ನು ಸುಧಾರಿಸಲು ನಾವು ಕೆಲಸ ಮಾಡುತ್ತಿದ್ದೇವೆ. ಈ ಗುರಿಯನ್ನು ಹೊಂದಲು ನಗರ ಸರ್ಕಾರ, ಸಮುದಾಯ ಗುಂಪುಗಳು ಮತ್ತು ನಾಗರೀಕ ಸಮಾಜದ ಜೊತೆಗೂಡಿ ನನ್ನನಗರನನ್ನಬಜೆಟ್ ಎಂಬ ಸಹಭಾಗಿತ್ವದ ಬಜೆಟ್ ಅಭಿಯಾನವನ್ನು ವರ್ಷಗಳಿಂದ ನಾವು ಆಯೋಜಿಸುತ್ತಾ ಬಂದಿದ್ದೇವೆ. ವಿವಿಧ ನಗರಗಳಲ್ಲಿ ನಾಗರಿಕ ಸಹಭಾಗಿತ್ವದ ವೇದಿಕೆಗಳಾದ ವಾರ್ಡ್ ಸಮಿತಿಗಳನ್ನು ಬಲಪಡಿಸುವ ಕಾರ್ಯವನ್ನು ಸಹ ನಾವು ಮಾಡುತ್ತ ಬರುತ್ತಿದ್ದೇವೆ.

ಈ ಕೈಪಿಡಿಯು ನೆಲಮಟ್ಟದ ನಮ್ಮ ವಿಶಾಲವಾದ ಮತ್ತು ವೈವಿಧ್ಯಮಯ ಪ್ರಾಯೋಗಿಕ ಅನುಭವಗಳ ಪ್ರತಿಫಲವಾಗಿದೆ. ಇದು ಕಾರ್ಯಸಾಧ್ಯವಾದ ಮಾಹಿತಿ, ಉತ್ತಮ ಅಭ್ಯಾಸಗಳು ಮತ್ತು ಚೌಕಟ್ಟುಗಳಿಂದ ತುಂಬಿದೆ ಮತ್ತು ಸಕ್ರಿಯ ನಾಗರಿಕತ್ವದ ಮಾರ್ಗದಲ್ಲಿರುವವರಿಗೆ ಒಂದು ವಿಶ್ವಾಸಾರ್ಹ ಒಡನಾಡಿಯಾಗಲು ಕಾಳಜಿಯಿಂದ ಸಿದ್ಧಪಡಿಸಲಾಗಿದೆ.

# 02

# ನಗರ ಸ್ಥಳೀಯ ಸರ್ಕಾರದ ಸಂಪೂರ್ಣ ವಿವರಣೆ

**ನಿಮ್ಮ ನಗರದ ಆಡಳಿತ ನಿರ್ವಹಣೆ ಕುರಿತು ನೀವು ತಿಳಿದುಕೊಳ್ಳಬೇಕಾದ ಎಲ್ಲ ಮಾಹಿತಿಯನ್ನು ಇಲ್ಲಿ ಪಡೆಯಿರಿ**

**ಸಕ್ರಿಯ ಶಿವ**




ಬಹುತೇಕ ಎಲ್ಲಾ ಜಾಗತಿಕ ಸಮಸ್ಯೆಗಳು ಸ್ಥಳೀಯ ಮಟ್ಟದಲ್ಲಿ ಪರಿಣಾಮ ಬೀರುತ್ತವೆ ಮತ್ತು ಇದರ ದುಷ್ಪರಿಣಾಮ ತಡೆಯಲು ಸ್ಥಳೀಯವಾಗಿಯೇ ಸ್ಪಂದಿಸುವ ಕ್ರಿಯೆಯ ಅಗತ್ಯವಿದೆ ಎಂದು ನೀವು ಒಪ್ಪುತ್ತೀರಾ? ಧ್ರುವ ಪ್ರದೇಶಗಳಲ್ಲಿ ಹಿಮ ಕರಗುವಿಕೆಯು ಸಹ ನಗರದ ನಿವಾಸಿಗಳಾದ ನಮ್ಮ ಮೇಲೆ ಪರಿಣಾಮ ಬೀರುತ್ತದೆ. ತೀವ್ರ ತರವಾದ ಉಷ್ಣ ಅಲೆಗಳು, ಪ್ರವಾಹ ಮತ್ತು ವಾಯು ಮಾಲಿನ್ಯದಂತಹ ಹವಾಮಾನ ಸಂಬಂಧಿತ ಸಮಸ್ಯೆಗಳನ್ನು ತಗ್ಗಿಸಲು ನಗರ ನಿವಾಸಿಗಳಾಗಿ ನಾವು ಬಹಳಷ್ಟು ಮುಂಜಾಗರೂಕತೆ ಕ್ರಮ ಕೈಗೊಳ್ಳಬೇಕಾಗಿದೆ.




ಆದರೆ ಹವಾಮಾನ ಬದಲಾವಣೆಯಂತಹ ಜಾಗತಿಕ ಸವಾಲನ್ನು ನಾವು ಸ್ಥಳೀಯ ಮಟ್ಟದಲ್ಲಿ ಹೇಗೆ ಪರಿಹರಿಸಬಹುದು?

ನಗರಗಳಲ್ಲಿ ಹವಾಮಾನ ವೈಪರೀತ್ಯದ  ದುಷ್ಪರಿಣಾಮಗಳನ್ನು ನಮ್ಮ ನಮ್ಮ ಮನೆಗಳ ಮತ್ತು ಸಮುದಾಯದ ಮಟ್ಟದಲ್ಲಿ ಸಕ್ಷಮವಾಗಿ ಎದುರಿಸುವ ಅಗತ್ಯವಿದೆ. ಉದಾಹರಣೆಯಾಗಿ ನೀವೂ ನಿಮ್ಮ ನೆರೆಹೊರೆಯ ಕೆರೆಗಳನ್ನು ಪುನರುಜ್ಜೀವನಗೊಳಿಸಲು ನಿಮ್ಮ ನಗರ ಸರ್ಕಾರದೊಂದಿಗೆ ಕೈಜೋಡಿಸಬಹುದಲ್ಲವೇ! ನಾಗರಿಕರು ನಗರದಾದ್ಯಂತ ಇದೇ ರೀತಿಯ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದರೆ, ಇದು ನಗರಗಳಲ್ಲಿ ಏರುತ್ತಿರುವ ಉಷ್ಣತೆಯನ್ನು ನಿಯಂತ್ರಿಸಲು ಸಹಾಯ ಮಾಡುತ್ತದೆ, ಕುಡಿಯಲು ಹೆಚ್ಚಿನ ನೀರು ಲಭ್ಯವಾಗುವಂತೆ ಮಾಡುತ್ತದೆ. ಅದಲ್ಲದೆ ಇದರಿಂದ ಅಂತರ್ಜಲದ ಮಟ್ಟ ಹೆಚ್ಚುತ್ತದೆ ಹಾಗು ನಮ್ಮ ಸುತ್ತ ಮುತ್ತಲಿನ ಸಸ್ಯ,  ಪ್ರಾಣಿಗಳನ್ನು ಮತ್ತು ಒಟ್ಟಾರೆಯಾಗಿ ಜೀವವೈವಿಧ್ಯತೆಯನ್ನು ಸಂರಕ್ಷಿಸಿ ಬೆಳೆಸಲು ಸಹಾಯ ಮಾಡುತ್ತದೆ! ಇದೆಲ್ಲವೂ ನಗರದಲ್ಲಿ ಪ್ರವಾಹದ ಅಪಾಯವನ್ನು ತಗ್ಗಿಸಲು ಅನುಕೂಲಕರವಾಗಲಿದೆ.

**ಆಸಕ್ತೆ ಅನಿತಾ**




ಓಹ್, ಇದು ಅದ್ಭುತವಾಗಿದೆ! ಇದನ್ನು ನಿಜವಾಗಿ ಕಾರ್ಯರೂಪಕ್ಕೆ ತರಲು, ನಾನು ಏನೆಲ್ಲ ಮಾಡಬಹುದು?




ಮೊದಲನೆಯದಾಗಿ ನೀವು ನಿಮ್ಮ ನಗರ ಸರ್ಕಾರವನ್ನು ಸಂಪೂರ್ಣವಾಗಿ ಅರ್ಥಮಾಡಿಕೊಳ್ಳಬೇಕು. ನಿಮ್ಮ ನಗರ ಸರ್ಕಾರದ ಆಡಳಿತದ ಮೂಲ ಅಂಶಗಳನ್ನು ತಿಳಿದು ಕೊಳ್ಳುವುದರೊಂದಿಗೆ  ಮತ್ತು ಅದಕ್ಕೆ ಸಂಬಂಧಿಸಿದ ಸ್ಥಳೀಯ ಸರ್ಕಾರದ ಜೊತೆ ತೊಡಗಿಸಿಕೊಳ್ಳುವುದರೊಂದಿಗೆ ನೀವು ಸಕ್ರಿಯ ನಾಗರೀಕರಾಗುವ ನಡೆ ಪ್ರಾರಂಭಗೊಳ್ಳುತ್ತದೆ

ನಮ್ಮಲ್ಲಿ ಹೆಚ್ಚಿನವರಿಗೆ ನಮ್ಮ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಹೇಗೆ ಕಾರ್ಯನಿರ್ವಹಿಸುತ್ತವೆ ಎಂಬುದರ ಬಗ್ಗೆ ತಿಳಿದಿರಬಹುದು. ಆದರೆ ನಾವು ನೆಲೆಸಿರುವ ನಗರಗಳ ಆಡಳಿತ ಕಾರ್ಯವು ನಮಗೆ ಬಹುತೇಕ ನಿಗೂಢವಾಗಿರಬಹುದು.

ನೀವು ನಿಮ್ಮ ನಗರದಲ್ಲಿ ತರಲು ಬಯಸುವ ಬದಲಾವಣೆಯ ಕಾರ್ಯವು ನಿಮ್ಮ ನಗರ ಸರ್ಕಾರ ಹೇಗೆ ಕಾರ್ಯ ನಿರ್ವಹಿಸುತ್ತದೆ ಎಂಬುದನ್ನು ಅರ್ಥಮಾಡಿಕೊಳುವುದರೊಂದಿಗೆ ಪ್ರಾರಂಭವಾಗುತ್ತದೆ. ಏಕೆಂದರೆ, ನಗರ ಸರ್ಕಾರ ನಮ್ಮ ದೈನಂದಿನ ಜೀವನದ ಗುಣಮಟ್ಟದ ಮೇಲೆ ನೇರವಾಗಿ ಪ್ರಭಾವ ಬೀರುವ ಸೇವೆಗಳನ್ನು ಮತ್ತು ಮೂಲಸೌಕರ್ಯಗಳನ್ನು ಒದಗಿಸುವ ಜವಾಬ್ದಾರಿಯನ್ನು ಹೊಂದಿದೆ.




## ಹಾಗಿದ್ದರೆ ಬನ್ನಿ, ನಾವೀಗ ಪ್ರಾರಂಭಿಸೋಣ!

# 2.1 ನನ್ನ ನಗರದ ಆಡಳಿತದ ಸಂರಚನೆ ಹೇಗಿದೆ?

ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನಂತರ, ಸ್ಥಳೀಯ ನಗರ ಸರ್ಕಾರಗಳು ಮೂರನೇ ಹಂತದ ಆಡಳಿತವನ್ನು ಪ್ರತಿನಿಧಿಸುತ್ತವೆ.

ಸುಲಲಿತ ಆಡಳಿತಕ್ಕಾಗಿ, ದೊಡ್ಡ ನಗರಗಳನ್ನು ನಿರ್ದಿಷ್ಟವಾದ ವಲಯಗಳಾಗಿ ವಿಂಗಡಿಸಲಾಗುತ್ತದೆ, ಅಂತಹ ವಲಯಗಳನ್ನು ಮುಂದಿನ ಹಂತವಾಗಿ ವಾರ್ಡ್‌ಗಳಾಗಿ ವಿಂಗಡಿಸಲಾಗುತ್ತದೆ. ಆದರೆ, ಸಣ್ಣ ನಗರಗಳನ್ನು ನೇರವಾಗಿ ವಾರ್ಡ್‌ಗಳಾಗಿ ವಿಂಗಡಿಸಲಾಗುತ್ತದೆ.

*3-5 ಜಿಲ್ಲೆಗಳು ಸೇರಿ ಒಂದು ವಿಭಾಗವಾಗಿ ಪರಿಗಣಿಸಲ್ಪಡುತ್ತವೆ; ಆ ವಿಭಾಗವು ಹಿರಿಯ ಐಎಎಸ್ ಅಧಿಕಾರಿಯ ನೇತೃತ್ವದಲ್ಲಿ ಇರುತ್ತದೆ.




ವಲಯಗಳು ಮತ್ತು ವಾರ್ಡ್‌ಗಳು ನಗರದ ಆಡಳಿತದ ಪ್ರಾಥಮಿಕ ಹಂತದ ಆಧಾರವಾಗಿದ್ದರೂ, ಅವು ವಿಧಾನಸಭಾ ಕ್ಷೇತ್ರಗಳಿಗೆ ಸಮನಾಗಿರುವುದಿಲ್ಲ. ರಾಜ್ಯ ಮತ್ತು ಕೇಂದ್ರ ಚುನಾವಣೆಗಳ ಉದ್ದೇಶಕ್ಕಾಗಿ, ಒಂದು ನಗರವನ್ನು ವಿಭಿನ್ನ ವಿಧಾನಸಭಾ ಕ್ಷೇತ್ರಗಳನ್ನಾಗಿ ಮತ್ತು ಲೋಕಸಭಾ ಕ್ಷೇತ್ರವನ್ನಾಗಿ ವಿಂಗಡಿಸಲಾಗುತ್ತದೆ. ಆ ಕ್ಷೇತ್ರಗಳಿಂದಲೇ ವಿಧಾನಸಭಾ ಸದಸ್ಯರನ್ನು (MLA) ಮತ್ತು ಲೋಕಸಭಾ ಸದಸ್ಯರನ್ನು (MP) ಆರಿಸಲಾಗುತ್ತದೆ.

** ಸಾಮಾನ್ಯವಾಗಿ, ದೊಡ್ಡ ನಗರಗಳನ್ನು ವಲಯಗಳಾಗಿ ವಿಂಗಡಿಸಲಾಗುತ್ತದೆ ಮತ್ತು ಸಣ್ಣ ನಗರಗಳು ವಲಯಗಳನ್ನು ಹೊಂದಿರಬಹುದು ಅಥವಾ ಹೊಂದದೆ ಇರಬಹುದು.

# ನಿಮಗಿದು ಗೊತ್ತೇ?

74ನೇ ಸಂವಿಧಾನ ತಿದ್ದುಪಡಿ ಕಾಯ್ದೆಯು ನಗರ ಸರ್ಕಾರಗಳ ಅಧಿಕಾರದ ಮೂಲವಾಗಿದೆ. 1993 ರಲ್ಲಿ ಬಂದ ಈ ಕಾಯ್ದೆ ಅಡಿಯಲ್ಲಿ ನಗರ ಸರ್ಕಾರಕ್ಕೆ ವಿಕೇಂದ್ರೀಕೃತ ಆಡಳಿತದ ಸಂರಚನೆಯನ್ನು ಒದಗಿಸಿ, ಕೇಂದ್ರ ಮತ್ತು ರಾಜ್ಯ ಸರ್ಕಾರದ ನಂತರ ಮೂರನೇ ಹಂತದ ಆಡಳಿತವನ್ನಾಗಿ ಕಾರ್ಯನಿರ್ವಹಿಸಲು ಅಧಿಕಾರವನ್ನು ಒದಗಿಸಲಾಗಿದೆ. ಆದರೆ, ನಗರ ಸರ್ಕಾರಗಳ ಕಾರ್ಯಗಳನ್ನು ಆಯಾ ರಾಜ್ಯದ ಸರ್ಕಾರಗಳು ನಿರ್ಧರಿಸುತ್ತವೆ.

## 2.2 ನನ್ನ ಸ್ಥಳೀಯ ನಗರ ಸರ್ಕಾರದ ಕಾರ್ಯಗಳೇನು?

74ನೇ ಸಂವಿಧಾನ ತಿದ್ದುಪಡಿ ಕಾಯ್ದೆಯ ಅಡಿಯಲ್ಲಿ 12ನೇ ಅನುಸೂಚಿ ಪ್ರಕಾರ ನಗರ ಸರ್ಕಾರಗಳು ನಿರ್ವಹಿಸಬೇಕಾದ ಪ್ರಕಾರ್ಯಗಳನ್ನು ಈ ಕೆಳಗಿನಂತೆ ಗುರುತಿಸಲಾಗಿದೆ

**01** ಪಟ್ಟಣ ಮತ್ತು ನಗರ ಯೋಜನೆ




**02** ರಸ್ತೆಗಳು ಮತ್ತು ಸೇತುವೆಗಳು



**03** ಭೂ ಬಳಕೆ ಮತ್ತು ಕಟ್ಟಡಗಳ ನಿರ್ಮಾಣದ ನಿಯಂತ್ರಣ



**04** ಗೃಹಬಳಕೆ, ಕೈಗಾರಿಕಾ ಮತ್ತು ವಾಣಿಜ್ಯ ಉದ್ದೇಶಗಳಿಗಾಗಿ ನೀರು ಸರಬರಾಜು



**05** ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಗೆ ಯೋಜನೆ



**06** ಸಾರ್ವಜನಿಕ ಆರೋಗ್ಯ, ನೈರ್ಮಲ್ಯ ಸಂರಕ್ಷಣೆ ಮತ್ತು ಘನ ತ್ಯಾಜ್ಯ ನಿರ್ವಹಣೆ



07 ಅಗ್ನಿಶಾಮಕ ಸೇವೆಗಳು




08 ಉದ್ಯಾನವನಗಳು ಮತ್ತು ಆಟದ ಮೈದಾನಗಳಂತಹ ನಗರ ಸೌಲಭ್ಯಗಳು ಮತ್ತು ಸೌಕರ್ಯಗಳನ್ನು ಒದಗಿಸುವುದು



09 ಬೀದಿ ದೀಪಗಳು, ಪಾರ್ಕಿಂಗ್ ಸ್ಥಳಗಳು, ಬಸ್ ನಿಲ್ದಾಣಗಳು ಮತ್ತು ಸಾರ್ವಜನಿಕ ಅನುಕೂಲಗಳು ಸೇರಿದಂತೆ ಸಾರ್ವಜನಿಕ ಸೌಕರ್ಯಗಳನ್ನು ಒದಗಿಸುವುದು



10 ನಗರ ಅರಣ್ಯ, ಪರಿಸರದ ರಕ್ಷಣೆ ಮತ್ತು ಪರಿಸರ ಸಂರಕ್ಷಣೆ



11 ವಿಕಲಚೇತನರು ಮತ್ತು ಬುದ್ಧಿಮಾಂದ್ಯರು ಸೇರಿದಂತೆ ಸಮಾಜದ ದುರ್ಬಲ ವರ್ಗಗಳ ಹಿತಾಸಕ್ತಿಗಳನ್ನು ಕಾಪಾಡುವುದು



12 ಕೊಳೆಗೇರಿ ಸುಧಾರಣೆ ಮತ್ತು ಉನ್ನತೀಕರಣ



13 ನಗರದಲ್ಲಿನ ಬಡತನ ನಿವಾರಣೆ



14 ಸಾಂಸ್ಕೃತಿಕ, ಶೈಕ್ಷಣಿಕ ಮತ್ತು ಸೌಂದರ್ಯದ ಅಂಶಗಳಿಗೆ ಉತ್ತೇಜನೆ



15 ಸಮಾಧಿಗಳು ಮತ್ತು ಸಮಾಧಿ ಸ್ಥಳಗಳು, ಶವಸಂಸ್ಕಾರಗಳು, ಸ್ಮಶಾನದ ಮೈದಾನಗಳು ಮತ್ತು ವಿದ್ಯುತ್ ಚಿತಾಗಾರಗಳನ್ನು ಒದಗಿಸುವುದು ಮತ್ತು ನಿರ್ವಹಣೆ ಮಾಡುವುದು




16 ಜಾನುವಾರುಗಳ ತಂಗುದಾಣ, ಪ್ರಾಣಿಗಳ ಮೇಲಿನ ಕ್ರೌರ್ಯ ತಡೆಗಟ್ಟುವಿಕೆ




17 ಜನನ ಮತ್ತು ಮರಣಗಳ ನೋಂದಣಿ ಸೇರಿದಂತೆ ಪ್ರಮುಖ ಅಂಕಿಅಂಶಗಳು




18 ಕಸಾಯಿಖಾನೆಗಳು ಮತ್ತು ಚರ್ಮೋದ್ಯಮಗಳ ನಿಯಂತ್ರಣ



**ನಗರ ಸರ್ಕಾರದ ಪ್ರಚಲಿತ ವಿವಿಧ ಹೆಸರುಗಳು...**

ನಗರ ಸ್ಥಳೀಯ ಸಂಸ್ಥೆ (ULB) ಮತ್ತು 'ಸ್ಥಳೀಯ ಸರ್ಕಾರ' ಇವು ನಗರ ಸರ್ಕಾರಗಳನ್ನು ಉಲ್ಲೇಖಿಸಲು ಬಳಸಲಾಗುವ ಕೆಲವು ಪದನಾಮಗಳು.

## 2.3 ನನ್ನ ನಗರ ಸರ್ಕಾರವು ಹೇಗೆ ರಚನೆಯಾಗಿದೆ?

ನಿಮ್ಮ ನಗರ ಸರ್ಕಾರವು ಸಾಮಾನ್ಯವಾಗಿ ಚುನಾಯಿತ ವಿಭಾಗ ಮತ್ತು ಕಾರ್ಯಾಂಗ ವಿಭಾಗವನ್ನು ಒಳಗೊಂಡಿರುತ್ತದೆ.

ಚುನಾಯಿತ ವಿಭಾಗವನ್ನು ರಾಜಕೀಯ ವಿಭಾಗ ಎಂದೂ ಕರೆಯುತ್ತಾರೆ, ಇದು ಚುನಾಯಿತ ಸದಸ್ಯರನ್ನು ಒಳಗೊಂಡಂತೆ ಮಹಾಪೌರರು ಅಥವಾ ಅಧ್ಯಕ್ಷರ (ಸಣ್ಣ ನಗರ ಸರ್ಕಾರಗಳ ಸಂದರ್ಭದಲ್ಲಿ) ನೇತೃತ್ವದಲ್ಲಿ ನಡೆಯುವ ಸಭೆಯಾಗಿದೆ. ಇದು ನಗರ ಸಭೆಯ ಪರಿಷತ್ತನ್ನು ಒಳಗೊಂಡಿದ್ದು, ಅದರಲ್ಲಿ ಎಲ್ಲಾ ಚುನಾಯಿತ ಪ್ರತಿನಿಧಿಗಳ ಅಥವಾ ಕೌನ್ಸಿಲರ್ ಗಳ ಸಮೂಹ ಮತ್ತು ಲೆಕ್ಕಪತ್ರ, ತೆರಿಗೆ, ಹಣಕಾಸು ಮತ್ತು ಮೇಲ್ಮನವಿಗಳು, ಸಾರ್ವಜನಿಕ ಆರೋಗ್ಯ, ಪಟ್ಟಣ ಯೋಜನೆ ಮೇಲ್ಮನವಿಗಳ ಸ್ಥಾಯಿ ಸಮಿತಿಗಳನ್ನು ಒಳಗೊಂಡಿರುತ್ತದೆ.

ಆಯುಕ್ತರು (ಅಥವಾ ಪುರಸಭೆಯ ಮುಖ್ಯ ಅಧಿಕಾರಿ ಅಥವಾ ಕಾರ್ಯನಿರ್ವಾಹಕ ಅಧಿಕಾರಿ) ಕಾರ್ಯಾಂಗ ವಿಭಾಗದ ನೇತೃತ್ವ ವಹಿಸುತ್ತಾರೆ. ಕಾರ್ಯಾಂಗವು ಕಾರ್ಯಾನುಷ್ಠಾನದ ಮೇಲೆ ಕೇಂದ್ರೀಕರಿಸುವ ಆಡಳಿತಾತ್ಮಕ ಸಂಸ್ಥೆಯಾಗಿದ್ದು, ಇದು ಜಂಟಿ ಆಯುಕ್ತರು, ಉಪ ಆಯುಕ್ತರು, ಸಹಾಯಕ ಆಯುಕ್ತರು, ವಲಯ ಆಯುಕ್ತರು, ಇಲಾಖೆ ಮುಖ್ಯಸ್ಥರು ಮತ್ತು ಪಾಲಿಕೆ / ಪುರಸಭೆಯ ಸಿಬ್ಬಂದಿಯನ್ನು ಒಳಗೊಂಡಿರುತ್ತದೆ.

ನಗರದ ಸಮಗ್ರ ಅಭಿವೃದ್ಧಿಗಾಗಿ ಚುನಾಯಿತ ವಿಭಾಗ ಮತ್ತು ಕಾರ್ಯಾಂಗ ವಿಭಾಗ ಒಟ್ಟಾಗಿ ಕೆಲಸ ಮಾಡುವುದು ಬಹಳ ಮುಖ್ಯ ಹಾಗು ಅತ್ಯಗತ್ಯ.



# ನಿಮಗಿದು ಗೊತ್ತೇ?

**227 ವಾರ್ಡಗಳನ್ನು ಹೊಂದಿರುವ ಬ್ರಿಹನ್ ಮುಂಬೈ ಮಹಾನಗರ ಪಾಲಿಕೆ (BMC) (ಅಥವಾ ಮುನ್ಸಿಪಲ್ ಕಾರ್ಪೊರೇಶನ್ ಆಫ್ ಗ್ರೇಟರ್ ಮುಂಬೈ (MCGM)) ಕೋವಿಡ್ ಸಂದರ್ಭದಲ್ಲಿ ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಣೆ ಮಾಡಿ ಕೋವಿಡ್ ಅನ್ನು ತಡೆಗಟ್ಟಿದಕ್ಕಾಗಿ ಎಲ್ಲಾ ಕಡೆಯಿಂದ ಜನ ಮನ್ನಣೆಯನ್ನು ಪಡೆದಿರುತ್ತದೆ. ಬಿಎಂಸಿ ಯ ಕಾರ್ಯ ನಿರ್ವಹಣೆಯ ಈ ಮಾದರಿಯನ್ನು "ಮುಂಬೈ ಮಾಡೆಲ್ ಆಫ್ ಕೋವಿಡ್ ಮ್ಯಾನೇಜ್ಮೆಂಟ್" ಎಂದು ವ್ಯಾಪಕವಾಗಿ ಉಲ್ಲೇಖಿಸಲಾಗಿದೆ.**



# ಸರ್ಕಾರ

**ರಾಜಕೀಯ ವಿಭಾಗ**

**ಮಹಾಪೌರರು**

**ನಗರ ಸಭೆಯ ಪರಿಷತ್**

1 ಸ್ಥಾಯಿ ಸಮಿತಿ
(ತೆರಿಗೆ, ಹಣಕಾಸು ಮತ್ತು ಮೇಲ್ಮನವಿಗಳು )

2 ಸ್ಥಾಯಿ ಸಮಿತಿ
(ಸಾರ್ವಜನಿಕ ಆರೋಗ್ಯ, ಶಿಕ್ಷಣ ಮತ್ತು ಸಾಮಾಜಿಕ ನ್ಯಾಯ )

3 ಸ್ಥಾಯಿ ಸಮಿತಿ
(ಲೆಕ್ಕಪತ್ರ)

4 ಸ್ಥಾಯಿ ಸಮಿತಿ
(ನಗರ ಯೋಜನೆ ಮತ್ತು ಸುಧಾರಣೆ )

**ವಾರ್ಡ್ ಸಮಿತಿಗಳು**

**ಏರಿಯಾ ಸಭಾಗಳು**




## ಪೌರ ಸಂಸ್ಥೆಗಳ ಕೆಲವು ಉದಾಹರಣೆಗಳು ಈ ಕೆಳಗಿನಂತಿವೆ:

**ಪೌರ ಸಂಸ್ಥೆಗಳು**



**ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ**

### ಕಾರ್ಯಗಳು

ನಗರಕ್ಕೆ ಶುದ್ಧ ಮತ್ತು ಸುರಕ್ಷಿತ ನೀರನ್ನು ತಲುಪಿಸಲು ಮತ್ತು ಕೊಳಚೆ ನೀರಿನ ನಿರ್ವಹಣೆ ಹಾಗು ವಿಲೇವಾರಿ ಜವಾಬ್ದಾರಿ.

### ಉದಾಹರಣೆಗಳು

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಚೆನ್ನೈ ಮಹಾನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಇತ್ಯಾದಿ.



**ವಿದ್ಯುತ್ ಮಂಡಳಿ /ವಿದ್ಯುತ್ ಸರಬರಾಜು ಸಂಸ್ಥೆ**

### ಕಾರ್ಯಗಳು

ನಗರಕ್ಕೆ ವಿದ್ಯುತ್ ಸರಬರಾಜು ಮತ್ತು ವಿತರಣೆಯ ಜವಾಬ್ದಾರಿ.

### ಉದಾಹರಣೆಗಳು

ಉತ್ತರ ಪ್ರದೇಶ ಪವರ್ ಕಾರ್ಪೊರೇಷನ್ ಲಿಮಿಟೆಡ್, ಗುಜರಾತ್ ವಿದ್ಯುತ್ ಮಂಡಳಿ ಇತ್ಯಾದಿ.



**ನಗರ ಅಭಿವೃದ್ಧಿ ಪ್ರಾಧಿಕಾರ**

### ಕಾರ್ಯಗಳು

ನಗರಗಳ ಮಹಾಯೋಜನೆ (ಮಾಸ್ಟರ್ ಪ್ಲಾನ್), ಲೇಔಟ್ಗಳ ಮತ್ತು ಇತರ ಯೋಜನೆಗಳ ಅಭಿವೃದ್ಧಿಯ ಜವಾಬ್ದಾರಿ.

### ಉದಾಹರಣೆಗಳು

ಜೈಪುರ ಅಭಿವೃದ್ಧಿ ಪ್ರಾಧಿಕಾರ (JDA), ಚೆನ್ನೈ ಮಹಾನಗರ ಅಭಿವೃದ್ಧಿ ಪ್ರಾಧಿಕಾರ (CMDA), ಇತ್ಯಾದಿ.
ಕೆಲವು ಶ್ರೇಣಿ II ಮತ್ತು ಶ್ರೇಣಿ III ನಗರಗಳಲ್ಲಿ, ಸುಧಾರಣಾ ಟ್ರಸ್ಟ್ಗಳು ಅಭಿವೃದ್ಧಿ ಪ್ರಾಧಿಕಾರಗಳ ಸ್ಥಾನವನ್ನು ತೆಗೆದುಕೊಳ್ಳುತ್ತವೆ.

ಬನ್ನಿ, ಒಂದು ಮೋಜಿನ ಚಟುವಟಿಕೆಯನ್ನು ಮಾಡೋಣ. ನಿಮ್ಮ ನೆರೆಹೊರೆಯ ಸ್ಥಿತಿಯ ಬಗ್ಗೆ ನಿಮಗೆ ಕಾಳಜಿ ಇದೆಯೇ? ಮೇಲೆ ಪಟ್ಟಿ ಮಾಡಲಾದ ಕಾರ್ಯಗಳಲ್ಲಿ ನಿಮ್ಮ ನಗರ ಸರ್ಕಾರ ಮತ್ತು ಪರಿಸರ ಅಥವಾ ಜಾಗತಿಕ ಹವಾಮಾನ ಬದಲಾವಣೆಯ ನಡುವಿನ ಪರಸ್ಪರ ಸಂಬಂಧಗಳನ್ನು ನೀವು ನೋಡುತ್ತೀರಾ?

ನಿಮ್ಮ ಪ್ರಕಾರ ಈ ಮೇಲಿನ ವಿಷಯ ಕುರಿತು ನೇರ ಮತ್ತು ಪರೋಕ್ಷ ಸಂಬಂಧಗಳನ್ನು ಈ ಕೆಳಗೆ ನೀಡಿರುವ ಸ್ಥಳದಲ್ಲಿ ಬರೆಯಿರಿ



# 2.4 ಈಗ, ನಗರ ಸರ್ಕಾರದ ಪ್ರತಿಯೊಂದು ಭಾಗವನ್ನು ಅರ್ಥ ಮಾಡಿಕೊಳ್ಳೋಣ?

## ನಗರ ಸಭೆಯ ಪರಿಷತ್ ಎಂದರೇನು?

ನಗರ ಸಭೆಯ ಪರಿಷತ್ ಚುನಾಯಿತ ಕೌನ್ಸಿಲರ್ ಗಳನ್ನು ಒಳಗೊಂಡಿರುತ್ತದೆ ಮತ್ತು ಮಹಾಪೌರರು ಇದರ ನೇತೃತ್ವವನ್ನು ವಹಿಸಿರುತ್ತಾರೆ. ಇದು ಕ್ರಮಾನುಸಾರ (ಸಾಮಾನ್ಯವಾಗಿ ತಿಂಗಳಿಗೊಮ್ಮೆ) ಸಭೆ ಸೇರುತ್ತದೆ ಮತ್ತು ನಗರದ ಪ್ರಗತಿ ಮತ್ತು ಅಭಿವೃದ್ಧಿಯನ್ನು ನಿರ್ಧರಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ.

## ನಗರ ಸರ್ಕಾರದಲ್ಲಿ ಮಹಾಪೌರರು ಯಾವ ಪಾತ್ರವನ್ನು ವಹಿಸುತ್ತಾರೆ?

ಹೇಗೆ ಪ್ರಧಾನ ಮಂತ್ರಿಗಳು ಕೇಂದ್ರ ಸರ್ಕಾರದ ಮುಖ್ಯಸ್ಥರಾಗಿ ಮತ್ತು ಮುಖ್ಯಮಂತ್ರಿಗಳು ರಾಜ್ಯ ಸರ್ಕಾರದ ಮುಖ್ಯಸ್ತರಾಗಿರುತ್ತಾರೆಯೋ, ಅಂತೆಯೇ ಮಹಾಪೌರರು ನಿಮ್ಮ ನಗರ ಸರ್ಕಾರದ ಮುಖ್ಯಸ್ಥರಾಗಿರುತ್ತಾರೆ.

**ಮಹಾಪೌರರ ಆಯ್ಕೆ, ಅವಧಿ, ಅವರ ಪಾತ್ರ ಮತ್ತು ಅವರ ಜವಾಬ್ದಾರಿಗಳು ಈ ಕೆಳಗಿನಂತಿವೆ:**

**ಚುನಾವಣೆ:** ಸಾರ್ವಜನಿಕರಿಂದ ನೇರವಾಗಿ ಮಹಾಪೌರರ ಆಯ್ಕೆಯಾಗುವ ಕೆಲವು ನಗರಗಳಿದ್ದರೂ, ಹೆಚ್ಚಿನ ನಗರಗಳಲ್ಲಿ, ಜನರಿಂದ ಆರಿಸಲ್ಪಟ್ಟ ಕೌನ್ಸಿಲರ್ ಗಳು  ಮಹಾಪೌರರನ್ನು ಆಯ್ಕೆ ಮಾಡುತ್ತಾರೆ.

**ಅವಧಿ:** ಆಯಾ ನಗರದ ಆಡಳಿತ ಕಾಯಿದೆಯ ಆಧಾರದ ಮೇಲೆ ಮಹಾಪೌರರ ಅವಧಿಯು 1 ರಿಂದ 5 ವರ್ಷಗಳವರೆಗೆ ಆಗಿರಬಹುದು.

### ಪಾತ್ರ ಮತ್ತು ಜವಾಬ್ದಾರಿಗಳು:

- ಮಹಾಪೌರರು ನಗರ ಸಭೆ ಪರಿಷತ್ತಿನ ಮುಖ್ಯಸ್ಥರಾಗಿದ್ದು ಇವರು ವಿವಿಧ ವೇದಿಕೆಗಳಲ್ಲಿ ನಗರವನ್ನು ಪ್ರತಿನಿಧಿಸುತ್ತಾರೆ
- ನಗರ ಸರ್ಕಾರದ ಸಭೆಗಳ ಅಧ್ಯಕ್ಷತೆ ವಹಿಸುತ್ತಾರೆ
- ಕೌನ್ಸಿಲ್ ಅಥವಾ ಸ್ಥಾಯಿ ಸಮಿತಿಗಳು ಅಂಗೀಕರಿಸಿದ ನಿರ್ಣಯಗಳ ಅನುಷ್ಠಾನಕ್ಕಾಗಿ ಸಾಮಾನ್ಯ ತಪಾಸಣೆಗಳನ್ನು ಕೈಗೊಳ್ಳುತ್ತಾರೆ ಮತ್ತು ಸಮಯಾನುಸಾರ ನಿರ್ದೇಶನಗಳನ್ನು ನೀಡುತ್ತಾರೆ.
- ನಗರ ಸಭೆಯ ಕಾರ್ಯಾಂಗದ ಅಧಿಕಾರಿಗಳು ಕೈಗೊಂಡ ಕ್ರಮಗಳ ಮೇಲ್ವಿಚಾರಣೆ ಮಾಡುತ್ತಾರೆ ಮತ್ತು ಅದನ್ನು ನಿಯಂತ್ರಿಸುತ್ತಾರೆ.
- ಕೌನ್ಸಿಲ್ ನ ಹಣಕಾಸು ಮತ್ತು ಕಾರ್ಯ ನಿರ್ವಹಣೆಯನ್ನು ಮೇಲ್ವಿಚಾರಣೆ ಮಾಡುತ್ತಾರೆ.



# ನಿಮಗಿದು ಗೊತ್ತೇ?



**ಎಂ.ಕಾಮ್. ಓದುತ್ತಿರುವಾಗ ಬುಡಕಟ್ಟು ಸಮುದಾಯದ ವಿದ್ಯಾರ್ಥಿನಿ ಕುಮಾರಿ. ದಮಯಂತಿ ಮಾಝಿ ಅವರು ಏಪ್ರಿಲ್ 2022 ರಲ್ಲಿ ಕಟಕ್ ನಗರದ ಮುನ್ಸಿಪಲ್ ಕಾರ್ಪೊರೇಶನಿನ ಉಪ-ಮೇಯರ್ ಆಗಿ ಆಯ್ಕೆಯಾಗಿರುತ್ತಾರೆ.**







| ಶಾಸಕ (ವಿಧಾನ ಸಭೆಯ ಸದಸ್ಯರು) | ಕೌನ್ಸಿಲರ್/ಕಾರ್ಪೊರೇಟರ್ |
|---|---|
| ರಾಜ್ಯ ಚುನಾವಣೆಯ ಮೂಲಕ ಶಾಸಕರನ್ನು ಆಯ್ಕೆ ಮಾಡಲಾಗುತ್ತದೆ | ನಗರ ಸ್ಥಳೀಯ ಸಂಸ್ಥೆ ಚುನಾವಣೆಯ ಮೂಲಕ ಕೌನ್ಸಿಲರ್ ಅನ್ನು ಆಯ್ಕೆ ಮಾಡಲಾಗುತ್ತದೆ |
| ಬಹು ವಾರ್ಡ್‌ಗಳನ್ನು ಒಳಗೊಂಡಿರುವ ವಿಧಾನಸಭಾ ಕ್ಷೇತ್ರದಿಂದ ಚುನಾಯಿತರಾಗಿರುತ್ತಾರೆ. | ವಾರ್ಡ್‌ನಿಂದ ಆಯ್ಕೆಯಾಗಿರುತ್ತಾರೆ. |
| ರಾಜ್ಯ ಮಟ್ಟದಲ್ಲಿ ನಾಗರಿಕರನ್ನು ಪ್ರತಿನಿಧಿಸುತ್ತಾರೆ. ಕಾನೂನುಗಳನ್ನು ಮತ್ತು ರಾಜ್ಯ ಸರ್ಕಾರದ ಆಯವ್ಯಯಗಳನ್ನು ಚರ್ಚಿಸಿ ನಿರ್ಧಾರ ಮಾಡುವ ಮತ್ತು ತಿದ್ದುಪಡಿ ಮಾಡುವ ಜವಾಬ್ದಾರಿಯನ್ನು ಹೊಂದಿರುತ್ತಾರೆ. | ನಗರ ಸಭೆ ಪರಿಷತ್ತಿನಲ್ಲಿ ನಾಗರಿಕರನ್ನು ಪ್ರತಿನಿಧಿಸುತ್ತಾರೆ ಮತ್ತು ಆಯಾ ವಾರ್ಡ್‌ನಲ್ಲಿರುವ ಜನರ ಕಲ್ಯಾಣಕ್ಕಾಗಿ ಜವಾಬ್ದಾರರಾಗಿರುತ್ತಾರೆ |
| ವಿಧಾನಸಭೆಯಲ್ಲಿ ಸರ್ಕಾರದ ಹೊಣೆಗಾರಿಕೆಯನ್ನು ಪರಿಶೀಲನೆಗೆ ಒಳಪಡಿಸುತ್ತಾರೆ | ನಗರ ಸಭೆ ಪರಿಷತ್ತಿನ ಮೂಲಕ ನಗರ ಸರ್ಕಾರದ ಹೊಣೆಗಾರಿಕೆಯನ್ನು ಪರಿಶೀಲನೆಗೆ ಒಳಪಡಿಸುತ್ತಾರೆ |

## ನಾಗರಿಕರು

*ಒಟ್ಟು*

**120 ಕೋಟಿ**

*ನಾಗರಿಕರು**

## ನಗರ

**87,215 ಕೌನ್ಸಿಲರ್ ಗಳು****

ಪ್ರತಿಯೊಬ್ಬ ಕೌನ್ಸಿಲರ್ ರವರು ಸುಮಾರು
4,323 ನಾಗರಿಕರನ್ನು ಪ್ರತಿನಿಧಿಸುತ್ತಾರೆ

## ರಾಜ್ಯ

**4,121 ಶಾಸಕರು**

ಪ್ರತಿಯೊಬ್ಬ ಶಾಸಕರು
ಸುಮಾರು 3 ಲಕ್ಷ
ನಾಗರಿಕರನ್ನು ಪ್ರತಿನಿಧಿಸುತ್ತಾರೆ

## ಕೇಂದ್ರ

**543**

**ಲೋಕಸಭಾ ಸದಸ್ಯರು**

ಪ್ರತಿಯೊಬ್ಬ ಲೋಕಸಭಾ ಸದಸ್ಯರು
ಸುಮಾರು 22 ಲಕ್ಷ ನಾಗರಿಕರನ್ನು ಪ್ರತಿನಿಧಿಸುತ್ತಾರೆ



ಲೋಕಸಭೆಯ ವೆಬ್‌ಸೈಟ್‌ಗಳು, ಆಯಾ ರಾಜ್ಯಗಳ ಶಾಸನ ಸಭೆಗಳು ಮತ್ತು ಸ್ಥಳೀಯ ಸರ್ಕಾರದ ಡೈರೆಕ್ಟರಿಯಿಂದ ಲಭ್ಯವಿರುವ ಡೇಟಾವನ್ನು ಆಧರಿಸಿ ಮಾಡಿರುವ ವಿಶ್ಲೇಷಣೆ.

** 2011 ರ ಜನಗಣತಿಯ ಪ್ರಕಾರ ಇರುವ ಜನಸಂಖ್ಯೆ.*

** ಕೌನ್ಸಿಲರ್‌ಗಳು ನಗರದ ಜನಸಂಖ್ಯೆಯನ್ನು ಮಾತ್ರ ಪ್ರತಿನಿಧಿಸುತ್ತಾರೆ. ಗುಜರಾತ್ ಮತ್ತು ಮಹಾರಾಷ್ಟ್ರದಂತಹ ರಾಜ್ಯಗಳಲ್ಲಿ ಪ್ರತಿ ವಾರ್ಡ್‌ಗೆ ಸುಮಾರು 2-4 ಕೌನ್ಸಿಲರ್‌ಗಳಿದ್ದಾರೆ.



## ಸ್ಥಾಯಿ ಸಮಿತಿಗಳು ಯಾವುವು ಮತ್ತು ಅವುಗಳು ಹೇಗೆ ರಚಿಸಲ್ಪಡುತ್ತವೆ?

ಸ್ಥಾಯಿ ಸಮಿತಿಗಳು ನಗರದಲ್ಲಿನ ನಿರ್ದಿಷ್ಟ ವಿಷಯಗಳ (ಹಣಕಾಸು, ಸಾರ್ವಜನಿಕ ಆರೋಗ್ಯ, ಶಿಕ್ಷಣ, ಇತ್ಯಾದಿ) ಮತ್ತು ಅವುಗಳಿಗೆ ಸಂಬಂಧಿಸಿದ ಸಮಸ್ಯೆಗಳ ಕುರಿತು ಚರ್ಚಿಸುತ್ತವೆ.

- ನಗರ ಸಭೆಯ ಚುನಾವಣೆಗಳು ನಡೆದು, ನಗರ ಸಭೆ ಪರಿಷತ್ತನ್ನು ರಚಿಸಿದ ನಂತರ, ವಿವಿಧ ವಿಷಯಾಧಾರಿತ ಕ್ಷೇತ್ರಗಳಲ್ಲಿ ವಿವಿಧ ಸ್ಥಾಯಿ ಸಮಿತಿಗಳನ್ನು ರಚಿಸಲಾಗುತ್ತದೆ. ಕೌನ್ಸಿಲರ್ ಗಳು ಈ ಸಮಿತಿಗಳ ಸದಸ್ಯರಾಗುತ್ತಾರೆ.
- ಪ್ರತಿ ಸ್ಥಾಯಿ ಸಮಿತಿಯಲ್ಲಿ, ಆ ಸಮಿತಿಯಲ್ಲಿಯೇ ಇರುವ ಒಬ್ಬ ಸದಸ್ಯರನ್ನು ಅಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಗುತ್ತದೆ
- ಸ್ಥಾಯಿ ಸಮಿತಿಗಳ ಸಂಖ್ಯೆಯು ನಗರದಿಂದ ನಗರಕ್ಕೆ ಬದಲಾಗುತ್ತದೆ, ಆದರೆ ಸಾಮಾನ್ಯವಾದ ಸ್ಥಾಯಿ ಸಮಿತಿಗಳೆಂದರೆ, ಹಣಕಾಸು, ಪಟ್ಟಣ ಯೋಜನೆ, ಆರೋಗ್ಯ ಮತ್ತು ಶಿಕ್ಷಣದ ಸಮಿತಿಗಳಾಗಿವೆ.
- ಬೇರೆ ಬೇರೆ ರಾಜ್ಯಗಳಲ್ಲಿ ಸ್ಥಾಯಿ ಸಮಿತಿಗಳು ವಿಭಿನ್ನ ಮಟ್ಟದ ಹಣಕಾಸಿನ ಅಧಿಕಾರವನ್ನು ಹೊಂದಿರುತ್ತವೆ.
- ಸ್ಥಾಯಿ ಸಮಿತಿಗಳ ಕಾರ್ಯ ಅವಧಿಯು ವಿವಿಧ ರಾಜ್ಯಗಳ ಅನುಸಾರ 1 ರಿಂದ 5 ವರ್ಷಗಳವರೆಗೆ ಬದಲಾಗುತ್ತದೆ.



## ಆಯುಕ್ತರ ಪಾತ್ರವೇನು?

ಆಯುಕ್ತರು ರಾಜ್ಯ ಸರ್ಕಾರದಿಂದ ನೇಮಕಗೊಂಡ ಅಧಿಕಾರಿಗಳಾಗಿದ್ದು, ಅವರು ಸಾಮಾನ್ಯವಾಗಿ ಭಾರತೀಯ ಅಥವಾ ರಾಜ್ಯ ಆಡಳಿತ ಸೇವೆಗಳು ಎಂದರೆ ಐಎಎಸ್ ಅಥವಾ ಕರ್ನಾಟಕ ರಾಜ್ಯಕ್ಕೆ ಕೆಎಎಸ್, ಒಡಿಶಾಗೆ ಒಎಎಸ್, ಇತ್ಯಾದಿಗಳ ಭಾಗವಾಗಿರುತ್ತಾರೆ. ನಗರ ಸಭೆ ಪರಿಷತ್ ತೆಗೆದುಕೊಳ್ಳುವ ನಿರ್ಧಾರಗಳನ್ನು ಕಾರ್ಯಗತಗೊಳಿಸಲು ಅವರು ಜವಾಬ್ದಾರರಾಗಿರುತ್ತಾರೆ ಮತ್ತು ಉಪ-ಆಯುಕ್ತರು, ಜಂಟಿ ಆಯುಕ್ತರು, ಅಭಿಯಂತರರು ಮುಂತಾದವರು, ಆಯುಕ್ತರ ಕೆಲಸದಲ್ಲಿ ಸಹಾಯ ಮಾಡುತ್ತಾರೆ.

ನಿಮ್ಮ ನಗರದ ಆಡಳಿತದ ಗುಣಮಟ್ಟದ ಕುರಿತು ಇನ್ನಷ್ಟು ಮಾಹಿತಿ ತಿಳಿದುಕೊಳ್ಳಲು ಈ QR ಕೋಡ್ ಅನ್ನು ಸ್ಕ್ಯಾನ್ ಮಾಡಿ, ಭಾರತದ ನಗರ ವ್ಯವಸ್ಥೆಗಳ ವಾರ್ಷಿಕ ಸಮೀಕ್ಷೆಯ (ASICS) ವರದಿಯನ್ನು ಓದಲು ಈ ಅಂತರ್ಜಾಲ ಕೊಂಡಿಯನ್ನು ಬಳಸಿ

# 2.5 ಹಣಕಾಸಿನ ಬಗ್ಗೆ ತಿಳಿಯೋಣ!



## ನನ್ನ ನಗರ ಸರ್ಕಾರಕ್ಕೆ ಹಣ ಎಲ್ಲಿಂದ ಬರುತ್ತದೆ ಮತ್ತು ನಾನು ಅದನ್ನು ಏಕೆ ತಿಳಿದುಕೊಳ್ಳಬೇಕು?

ಯಾವುದೇ ಎರಡು ನಗರಗಳು ಒಂದೇ ವ್ಯಾಪ್ತಿ, ವಿಸ್ತೀರ್ಣ, ಜನ ಸಂಖ್ಯೆ ಮತ್ತು ವಾರ್ಡಗಳನ್ನು ಹೊಂದಿರುವುದಿಲ್ಲ, ಹಾಗಾಗಿ ನಗರದಿಂದ ನಗರಕ್ಕೆ ಆಯವ್ಯಯ ವಿಭಿನ್ನವಾಗಿರುತ್ತದೆ.

ನಿಮ್ಮ ನಗರದ ಬಜೆಟ್ ಅನ್ನು ಹೇಗೆ ಓದುವುದು ಮತ್ತು ಅದರ ಆರ್ಥಿಕ ಸದೃಢತೆಯನ್ನು ಅರ್ಥೈಸಿಕೊಳ್ಳುವುದರಿಂದ ನಿಮ್ಮ ನಗರ ಸರ್ಕಾರದ ಆರ್ಥಿಕ ಹೊಣೆಗಾರಿಕೆ ಮತ್ತು ಪಾರದರ್ಶಕತೆಯ ಮಾಹಿತಿಯನ್ನು ತಿಳಿದುಕೊಳ್ಳಲು ನಿಮಗೆ ಸಹಾಯವಾಗುತ್ತದೆ. ನಿಮ್ಮ ನಗರ ಪಾಲಿಕೆ ಅಧಿಕಾರಿಗಳೊಂದಿಗೆ ವ್ಯವಹರಿಸುವ ಸಂದರ್ಭದಲ್ಲಿ ಈ ವಿಶಿಷ್ಟ ಕೌಶಲ್ಯವು ನಿಮಗೆ ಉಪಯುಕ್ತವಾಗುತ್ತದೆ.

ನಿಮ್ಮ ನಗರದ ಬಜೆಟನ್ನು ಅರ್ಥಮಾಡಿಕೊಳ್ಳುವ ಮೊದಲ ಹಂತವು ನಿಮ್ಮ ನಗರವು ಹೇಗೆ ಆದಾಯವನ್ನು ಗಳಿಸುತ್ತದೆ ಎಂಬುದನ್ನು ತಿಳಿದುಕೊಳ್ಳುವುದಾಗಿದೆ.

1 ಸಣ್ಣ ನಗರಗಳಲ್ಲಿ, ಸ್ಥಳೀಯ ಸರ್ಕಾರವು ಕೇಂದ್ರ ಅಥವಾ ರಾಜ್ಯ ಆಡಳಿತ ಸೇವೆಗಳಿಗೆ ಹೊಂದಿದವರಾಗದೆ, ರಾಜ್ಯ ಸರ್ಕಾರದಿಂದ ನೇಮಕಗೊಂಡ ಅಧಿಕಾರಿಗಳ ನೇತೃತ್ವದಲ್ಲಿರುತ್ತದೆ.

## ಸಾಮಾನ್ಯವಾಗಿ ಯಾವುದೇ ಒಂದು ನಗರವು ಇಲ್ಲಿ ಕಾಣಿಸಿದ ಮೂರು ಮುಖ್ಯ ಆದಾಯದ ಮೂಲಗಳನ್ನು ಹೊಂದಿರುತ್ತದೆ

**1 ಕೇಂದ್ರ ಸರ್ಕಾರ**

- ಕೇಂದ್ರ ಹಣಕಾಸು ಆಯೋಗದ ಅನುದಾನ
- ಅಮೃತ್, ಸ್ವಚ್ಛ ಭಾರತ್, ಸ್ಮಾರ್ಟ್ ಸಿಟಿಗಳು ಮುಂತಾದ ವಿವಿಧ ಯೋಜನೆಗಳು ಮತ್ತು ಮಿಷನ್ ಗಳು.

**2 ರಾಜ್ಯ ಸರ್ಕಾರ**

- ರಾಜ್ಯ ಹಣಕಾಸು ಆಯೋಗದ ಅನುದಾನ
- ಆಯಾ ರಾಜ್ಯದ ಕಾರ್ಯಕ್ರಮಗಳು ಮತ್ತು ಯೋಜನೆಗಳು ಉದಾಹರಣೆಗೆ
  - ಕರ್ನಾಟಕ ನಗರೋತ್ಥಾನ ಯೋಜನೆ
  - ತಮಿಳುನಾಡು 'ಮನೆ ಬಾಗಿಲಿಗೆ ಆರೋಗ್ಯ' ಯೋಜನೆ
  - ಮಹಾರಾಷ್ಟ್ರ ಬಾಲ ಸಂಗೋಪನ್ ಯೋಜನೆ ಇತ್ಯಾದಿ.

**3 ನಗರ ಸರ್ಕಾರ**

- **ತೆರಿಗೆ ಆದಾಯ**
  - ಆಸ್ತಿ ತೆರಿಗೆ
  - ಜಾಹೀರಾತು ತೆರಿಗೆ
  - ವೃತ್ತಿ ತೆರಿಗೆ
  - ಮನರಂಜನಾ ತೆರಿಗೆ
- **ತೆರಿಗೆಯೇತರ ಆದಾಯ**
  - ವ್ಯಾಪಾರ ಪರವಾನಿಗೆಗಳು
  - ಕಟ್ಟಡ ಪರವಾನಿಗೆಗಳು
  - ಬಳಕೆದಾರರ ಶುಲ್ಕಗಳು
  - ಪಾರ್ಕಿಂಗ್ ಶುಲ್ಕಗಳು
  - ಬಾಡಿಗೆ
  - ಮುದ್ರಾಂಕ ಶುಲ್ಕದ ಹೆಚ್ಚುವರಿ ಶುಲ್ಕಗಳು*



* ರಾಜ್ಯದ ನಿಯಮಗಳು ಮತ್ತು ನಿಬಂಧನೆಗಳನ್ನು ಅವಲಂಬಿಸಿರುತ್ತದೆ

## ನಗರ ಆದಾಯದ ಯೋಜನೆಗಳ ಉದಾಹರಣೆಯೊಂದು ಇಲ್ಲಿದೆ:

### ಸ್ವಂತ ಆದಾಯದ ವಿಭಜನೆ

ಕೆಳಗಿನ ಪೈ ಚಾರ್ಟ್ 2020-21 ರ ಕರ್ನಾಟಕದ ಸ್ವಂತ ಆದಾಯ ಮತ್ತು ಆ ಸ್ವಂತ ಆದಾಯದ ಯೋಜನೆಗಳ ಕೊಡುಗೆಯ ವಿಭಜನೆಯನ್ನು ಒದಗಿಸುತ್ತದೆ




*ಮೇಲಿನ ಪೈ ಚಾರ್ಟ್ ಪ್ರಾತಿನಿಧ್ಯ ಉದ್ದೇಶಕ್ಕಾಗಿ ಮಾತ್ರ ಇದು ನಗರದಿಂದ ನಗರಕ್ಕೆ ಬದಲಾಗುತ್ತದೆ.*

ನಿಮ್ಮ ನಗರದ ಹಣಕಾಸಿನ ವಿವರಗಳನ್ನು ಇಲ್ಲಿ ಪಡೆಯಿರಿ www.cityfinance.in

## ನನ್ನ ನಗರದ ಬಜೆಟ್ ಅನ್ನು ಸಿದ್ಧಪಡಿಸುವ ಜವಾಬ್ದಾರಿ ಯಾರದ್ದು?

ಸಾಮಾನ್ಯವಾಗಿ ಹಣಕಾಸಿನ ಸ್ಥಾಯಿ ಸಮಿತಿಯು ಆಯುಕ್ತರು ಮತ್ತು ಮಹಾಪೌರರೊಂದಿಗೆ ಸಮಾಲೋಚಿಸಿ ನಗರದ ಬಜೆಟನ್ನು ಸಿದ್ಧಪಡಿಸುತ್ತದೆ.

## ಬಜೆಟ್ ಯಾವಾಗ ತಯಾರಾಗುತ್ತದೆ?

**ಬಜೆಟ್ ಅನ್ನು ಸಾಮಾನ್ಯವಾಗಿ ಪ್ರತಿ ಹಣಕಾಸು ವರ್ಷದ (ಏಪ್ರಿಲ್ - ಮಾರ್ಚ್) ನವೆಂಬರ್ ಮತ್ತು ಫೆಬ್ರವರಿ ತಿಂಗಳಗಳ ನಡುವೆ ತಯಾರಿಸಲಾಗುತ್ತದೆ.**

ನಂತರ ನಗರ ಸಭೆ ಪರಿಷತ್ ಫೆಬ್ರವರಿ ಮತ್ತು ಮಾರ್ಚ್ ತಿಂಗಳಗಳ ನಡುವೆ ಅದನ್ನು ಅನುಮೋದಿಸುತ್ತದೆ. ನಿಮ್ಮ ನಗರದ ಆಯವ್ಯಯಕ್ಕೆ ರಾಜ್ಯ ಸರ್ಕಾರದ ಅನುಮೋದನೆ ಪಡೆಯುವ ಅಗತ್ಯವಿದ್ದರೆ, ಬಜೆಟ್ ಅನ್ನು ಘೋಷಿಸಲಾದ ನಂತರ ಔಪಚಾರಿಕ ಅನುಮೋದನೆಗಾಗಿ ರಾಜ್ಯ ಸರ್ಕಾರಕ್ಕೆ ಕಳುಹಿಸಲಾಗುತ್ತದೆ.

ಬಜೆಟ್ ಪ್ರಕ್ರಿಯೆಯಲ್ಲಿ ನಾಗರಿಕರ ಪಾಲ್ಗೊಳ್ಳುವಿಕೆಯನ್ನು ಹೆಚ್ಚಿಸಲು, ಜನಾಗ್ರಹ ಸಂಸ್ಥೆಯು 2015 ರಲ್ಲಿ **ಮೈ ಸಿಟಿ ಮೈ ಬಜೆಟ್** ಅಥವಾ **ನನ್ನ ನಗರ ನನ್ನ ಬಜೆಟ್** ಅಭಿಯಾನವನ್ನು ಪ್ರಾರಂಭಿಸಿತು. ಬೆಂಗಳೂರಿನಲ್ಲಿ ಶುರುವಾದ ಈ ಅಭಿಯಾನ, ಇದೀಗ ಕರ್ನಾಟಕದ ಹಲವಾರು ನಗರಗಳಲ್ಲಿ ಅಂದರೆ, ಮಂಗಳೂರು ಹಾಗು ಕಲಬುರಗಿ ನಗರಗಳಿಗೆ ವಿಸ್ತಾರಗೊಂಡಿದೆ. ನನ್ನ ನಗರ ನನ್ನ ಬಜೆಟ್ ಅಭಿಯಾನದ ಕುರಿತು ಹೆಚ್ಚಿನ ವಿವರಗಳಿಗಾಗಿ ಅಧ್ಯಾಯ 4ಕ್ಕೆ ಭೇಟಿ ನೀಡಿ.

## ನನ್ನ ನಗರ ನನ್ನ ಬಜೆಟ್ ಅಭಿಯಾನದ ಪ್ರಕ್ರಿಯೆ

### ನವೆಂಬರ್ - ಡಿಸೆಂಬರ್

**ನಾಗರಿಕರಿಂದ ಬಜೆಟ್ ಗಾಗಿ ಬೇಡಿಕೆಗಳ ಸಂಗ್ರಹಣೆ**

ವಾರ್ಷಿಕ ಭಾಗವಹಿಸುವಿಕೆಯ (ಪಾರ್ಟಿಸಿಪೇಟೀರಿ) ಬಜೆಟಿನ ಆನ್ಲೈನ್ ಮತ್ತು ಆಫ್ಲೈನ್ ಪ್ರಚಾರ



### ಜನವರಿ

**ಬಜೆಟ್ ಸಲಹೆಗಳನ್ನು ಕ್ರೋಢೀಕರಿಸಿ ನಗರ ಸರ್ಕಾರಕ್ಕೆ ಸಲ್ಲಿಕ್ಕೆ**

ನಾಗರಿಕರ ಬಜೆಟ್ ವರದಿ






### ಫೆಬ್ರವರಿ - ಮಾರ್ಚ್

**ನಗರ ಸರ್ಕಾರದಿಂದ ನಗರ ಬಜೆಟಿನ ಘೋಷಣೆ**



### ಮಾರ್ಚ್ - ಏಪ್ರಿಲ್

**ನಗರದ ಬಜೆಟ್ ವಿಶ್ಲೇಷಿಸಿವುದು ಮತ್ತು ವಾರ್ಡ್ ಬಜೆಟ್ ಸಂಕ್ಷಿಪ್ತ ವರದಿಯನ್ನು(ವಾರ್ಡ್ ಬಜೆಟ್ ಬ್ರೀಫ್) ಪ್ರಕಟಿಸಿವುದು.**

### ಮೇ ನಂತರ



**ನಾಗರಿಕರ ಬಜೆಟ್ ಸಲಹೆಗಳು ಪಾಲಿಕೆಯ ಬಜೆಟ್ನಲ್ಲಿ ಒಳಪಡಿಸಿ ಅನುಷ್ಠಾನಗೊಳಿಸಲಾಗಿದೆಯೇ ಎಂದು ಖಚಿತಪಡಿಸಿಕೊಳ್ಳುವುದು.**

- ಕಾಮಗಾರಿ ಟೆಂಡರ್
- ಕಾರ್ಯಾದೇಶ
- ಕಾಮಗಾರಿ ಆರಂಭದ ಮಾಹಿತ
- ಕಾಮಗಾರಿ ಪೂರ್ಣಗೊಂಡಿರುವ ಮಾಹಿತ
- ಬಿಲ್ ಸಲ್ಲಿಕೆಯ ಕುರಿತು ಮಾಹಿತಿ
- ಬಿಲ್ ಪಾವತಿ ಯಾದ ಮಾಹಿತಿ

### ಸೆಪ್ಟೆಂಬರ್ – ಅಕ್ಟೋಬರ್

ವಾರ್ಡ್ ಸಮಿತಿಗಳು ಬಜೆಟ್ ಮೂಲಕ ವಾರ್ಡಿನ ವ್ಯಾಪ್ತಿಯಲ್ಲಿ ಅನುಷ್ಠಾನಕ್ಕೆ ಗುರುತಿಸಲಾದ ಕಾಮಗಾರಿಗಳ ಸ್ಥಿತಿಗತಿ ಕುರಿತು ಮೇಲ್ವಿಚಾರಣೆ ಮಾಡುವುದು ಮತ್ತು ಮುಂದಿನ ವರ್ಷದ ಬಜೆಟಿಗಾಗಿ ಸಲಹೆಗಳನ್ನು ನೀಡುವುದಕ್ಕಾಗಿ ನೆರೆಹೊರೆಯಲ್ಲಿರುವ ಅಗತ್ಯತೆಗಳನ್ನು ಮತ್ತು ಸಮಸ್ಯೆಗಳನ್ನು ಪರಿಗಣಿಸಿ ಬೇಡಿಕೆಗಳನ್ನು ಗುರುತಿಸುವುದು.

## ಬಜೆಟ್ ಮಂಡನೆಯಾದ ನಂತರ ಏನಾಗುತ್ತದೆ?

1 ಗುರುತಿಸಲಾದ ಯೋಜನೆಗಳಿಗೆ ನಿಗದಿಪಡಿಸಿದ ಹಣದ ಆಧಾರದ ಮೇಲೆ ಟೆಂಡರ್ ಆಹ್ವಾನಿಸಲಾಗುತ್ತದೆ

2 ನಂತರ ಬಂದ ಟೆಂಡರ್ ಆಧಾರದ ಮೇಲೆ ಗುತ್ತಿಗೆದಾರರನ್ನು ಆಯ್ಕೆ ಮಾಡಲಾಗುತ್ತದೆ

3 ಕೆಲಸದ ಆದೇಶಗಳನ್ನು (WOs) ನೀಡಲಾಗುತ್ತದೆ ಮತ್ತು ಪೌರ ಯೋಜನೆಗಳನ್ನು ಕಾರ್ಯಗತಗೊಳಿಸಲಾಗುತ್ತದೆ



4 ಸರ್ವೇಸಾಮಾನ್ಯವಾಗಿ, ವಾರ್ಡ್‌ಗಳ ನಿಯಮಿತ ನಿರ್ವಹಣೆಯ ಮೇಲೆ ಕೇಂದ್ರೀಕರಿಸುವ ಪೌರ ಯೋಜನೆಗಳಿಗೆ ಬಜೆಟ್ ಗಳನ್ನು ಸಹ ನಿಗದಿಪಡಿಸಲಾಗುತ್ತದೆ. ಯೋಜನೆಗಳ ವೆಚ್ಚವು ನಿಯೋಜಿತ ವೆಚ್ಚಕ್ಕಿಂತ ಕಡಿಮೆಯಿದ್ದರೆ ಟೆಂಡರ್ ಕರೆಯಲಾಗುವುದಿಲ್ಲ ಮತ್ತು ಇದನ್ನು ಎಂಪನೆಲ್ ನಿರ್ವಹಣಾ ಗುತ್ತಿಗೆದಾರರಿಂದ ಕೈಗೊಳ್ಳಬಹುದು

# 2.6 ಚಟುವಟಿಕೆಯ ಮನೆ




**01** ನಿಮ್ಮ ನಗರ ಸರ್ಕಾರದ ಕಚೇರಿಯ ವಿಳಾಸವನ್ನು ತಿಳಿದುಕೊಳ್ಳಿ.



**02** ನಿಮ್ಮ ನಗರವನ್ನು ಎಷ್ಟು ವಲಯಗಳಾಗಿ ವಿಂಗಡಿಸಲಾಗಿದೆ ಮತ್ತು ನೀವು ವಾಸಿಸುವ ಸ್ಥಳ ಯಾವ ವಲಯದಲ್ಲಿ ಬರುತ್ತದೆ ಎಂಬುದನ್ನು ತಿಳಿದುಕೊಳ್ಳಿ.




**03** ನಿಮ್ಮ ನಗರವು ಸಕ್ರಿಯ ಕೌನ್ಸಿಲ್ (ಪಾಲಿಕೆ ಪರಿಷತ್) ಅನ್ನು ಹೊಂದಿದೆಯೇ ಎಂದು ಪರಿಶೀಲಿಸಿ. ಇಲ್ಲದಿದ್ದರೆ, ಅದರ ಕಾರಣವನ್ನು ತಿಳಿದುಕೊಳ್ಳಿ.



**04** ನಿಮ್ಮ ನಗರ ಚುನಾವಣೆಯನ್ನು ಕಳೆದ ಬಾರಿ ಯಾವಾಗ ನಡೆಸಲಾಯಿತು ಎಂಬುದನ್ನು ತಿಳಿದುಕೊಳ್ಳಿ.



**05** ನಿಮ್ಮ ನಗರದಲ್ಲಿ ನಿಮ್ಮ ಮಹಾಪೌರ (ಮೇಯರ್) ಹೆಸರು ಮತ್ತು ಅವರ ಅವಧಿಯನ್ನು ತಿಳಿದುಕೊಳ್ಳಿ.



**06** ನಗರ ಆಯುಕ್ತರ ಮತ್ತು ವಲಯ ಆಯುಕ್ತರ ಸಂಪರ್ಕದ ವಿವರಗಳನ್ನು ಪಡೆದುಕೊಳ್ಳಿ.



**07** ನಿಮ್ಮ ನಗರ ಸರ್ಕಾರದ ಜಾಲತಾಣ ಮತ್ತು ನಿಮ್ಮ ನಗರದ ಕುಂದುಕೊರತೆ ಪರಿಹಾರ ವ್ಯವಸ್ಥೆಯನ್ನು ತಿಳಿದುಕೊಳ್ಳಿ.



**08** ನಿಮ್ಮ ನಗರದ ಕಾರ್ಯಕ್ಷಮತೆಯನ್ನು

ಆನ್ಯುಲ್ ಸರ್ವೇ ಆಫ್ ಇಂಡಿಯಾ ಸಿಟಿ ಸಿಸ್ಟಮ್ ಸಮೀಕ್ಷೆಯಲ್ಲಿ ಓದಿ ತಿಳಿದುಕೊಳ್ಳಿ (ASICS)

**09** ನಿಮ್ಮ ನಗರದ ಹಣಕಾಸಿನ ಬಗ್ಗೆ ಆಳವಾಗಿ ಜ್ಞಾನ ಹೊಂದಲು

www.cityfinance.in ಹಾಗು ನಿಮ್ಮ ನಗರ ಸರ್ಕಾರದ ಜಾಲತಾಣವನ್ನು ಬಳಸಿ.



# 03

# ನಿಮ್ಮ ವಾರ್ಡಿನ ಬಗ್ಗೆ ತಿಳಿಯಿರಿ

**ವಾರ್ಡಗಳು ಮತ್ತು ಅವುಗಳ ಕಾರ್ಯಗಳ ಕುರಿತು ತ್ವರಿತ ಮಾಹಿತಿ.**

## ಕಿರು ರಸಪ್ರಶ್ನೆ ಸಮಯ!

ನಿಮ್ಮ ನಗರವು ಎಷ್ಟು ವಾರ್ಡಗಳನ್ನು ಹೊಂದಿದೆ?

ನೀವು ವಾಸಿಸುವ ವಾರ್ಡಿನ ಸಂಖ್ಯೆ ಮತ್ತು ಹೆಸರು ಏನು?

ನಿಮ್ಮ ಕೌನ್ಸಿಲರ್/ ವಾರ್ಡಿನ ಚುನಾಯಿತ ಪಾಲಿಕೆ ಸದಸ್ಯರ ಹೆಸರೇನು?

ನಿಮ್ಮ ನಗರದಲ್ಲಿ ಚುನಾಯಿತ ಕೌನ್ಸಿಲ್/ ಪಾಲಿಕೆ ಪರಿಷತ್ ಇದೆಯೇ?

# ಶೀಘ್ರವಾಗಿ ಪುನರಾವಲೋಕನ ಮಾಡೋಣ

## 3.1 ವಾರ್ಡ್ ಎಂದರೇನು?

ನಗರವು ಆಡಳಿತಾತ್ಮಕ ಅನುಕೂಲಕ್ಕಾಗಿ ಮತ್ತು ಉತ್ತಮ ಹೊಣೆಗಾರಿಕೆಗಾಗಿ ಹಲವಾರು ವಾರ್ಡ್ ಗಳನ್ನು ಹೊಂದಿರುತ್ತದೆ. ನಗರಗಳು ಮತ್ತು ಹಳ್ಳಿಗಳು ಹೇಗೆ ರಾಜ್ಯಗಳಿಗೆ ಆಡಳಿತದ ಘಟಕವಾಗಿ ರೂಪಿತವಾಗಿವೆಯೋ ಅದೇ ರೀತಿ ಈ ವಾರ್ಡಗಳನ್ನು ನಗರಗಳ ಆಡಳಿತದ ಘಟಕವಾಗಿ ರಚಿಸಲಾಗಿದೆ. ಪ್ರತಿ ವಾರ್ಡನಲ್ಲಿ ಒಬ್ಬ ಚುನಾಯಿತ ಪ್ರತಿನಿಧಿ (ಒಬ್ಬ ಕೌನ್ಸಿಲರ್ ಅಥವಾ ಕಾರ್ಪೊರೇಟರ್) ಮತ್ತು ಸಿಬ್ಬಂದಿ (ಎಂಜಿನಿಯರ್, ಹೆಲ್ತ್ ಇನ್ಸ್ಪೆಕ್ಟರ್, ಇತ್ಯಾದಿ) ವರ್ಗ ಇರುತ್ತಾರೆ.

ವಿಶಿಷ್ಟವಾಗಿ, ದೊಡ್ಡ ನಗರಗಳಲ್ಲಿ, ವಾರ್ಡ್ ಒಂದು ಸಣ್ಣ ಭೌಗೋಳಿಕ ಪ್ರದೇಶವಾಗಿದ್ದು,

**ಸರಾಸರಿ 10,000 ರಿಂದ 50,000 ನಿವಾಸಿಗಳನ್ನು ಹೊಂದಿರುತ್ತದೆ.**



ಭಾರತದ ಸಣ್ಣ ನಗರಗಳಲ್ಲಿ, ನಗರದ ಗಾತ್ರ ಮತ್ತು ಜನಸಂಖ್ಯೆಯ ಆಧಾರದ ಮೇಲೆ ವಾರ್ಡಗಳ ಜನಸಂಖ್ಯೆಯು 10,000 ಕ್ಕಿಂತ ಕಡಿಮೆಯೂ ಇರಬಹುದು.

## ನಿಮಗಿದು ಗೊತ್ತೇ?



**ವಾರ್ಡಗಳು - ಅಥವಾ ಸ್ಥಳೀಯ ಆಡಳಿತದ ಸಂಸ್ಥೆಗಳು - ಚೋಳ ಸಾಮ್ರಾಜ್ಯದ ಕಾಲದಿಂದಲೂ ಅಸ್ತಿತ್ವದಲ್ಲಿವೆ. ಅದು 850-1200 ವರ್ಷಗಳ ಹಿಂದಿನದು! ದೇವಾಲಯದಲ್ಲಿ ದೊರೆತಿರುವ ಕಲ್ಲುಗಳ ಮೇಲೆ ಕೆತ್ತಿರುವ ಶಾಸನಗಳ ಪ್ರಕಾರ, ಗ್ರಾಮ ಮಟ್ಟದಲ್ಲಿ ಪ್ರಜಾಸತ್ತಾತ್ಮಕ ಆಡಳಿತದ ಪ್ರಕ್ರಿಯೆಯನ್ನು ವಿವರಿಸುತ್ತವೆ ಮತ್ತು ವಾರ್ಡಗಳ ರಚನೆ, ಚುನಾವಣಾ ಪ್ರಕ್ರಿಯೆ, ಆಡಳಿತದ ರಚನೆ, ಅಭ್ಯರ್ಥಿಗಳ ಮಾನದಂಡಗಳು ಮತ್ತು ಅನರ್ಹತೆಯ ಮಾನದಂಡಗಳ ಮಾಹಿತಿಯನ್ನು ಒಳಗೊಂಡಿದೆ.**

## 3.2 ನಿಮ್ಮ ವಾರ್ಡಿನ ಉಸ್ತುವಾರಿ ಯಾರು?

**ವಾರ್ಡಗಳನ್ನು ನಗರಸಭೆಯಲ್ಲಿ ಜನರಿಂದ ಚುನಾಯಿತರಾದ ಕೌನ್ಸಿಲರಗಳು ಪ್ರತಿನಿಧಿಸುತ್ತಾರೆ. ಗ್ರಾಮ ಪಂಚಾಯಿತಿ ಚುನಾವಣೆಗಳಲ್ಲಿ ಪಕ್ಷದ ಚಿಹ್ನೆಗಳನ್ನು ಬಳಸುವಂತಿಲ್ಲ, ಆದರೆ, ನಗರಗಳ ಸ್ಥಳೀಯ ಚುನಾವಣೆಗಳಲ್ಲಿ ಅಭ್ಯರ್ಥಿಗಳು ತಮ್ಮ ಪಕ್ಷದ ಚಿಹ್ನೆಗಳ ಆಧಾರದ ಮೇಲೆ ಸ್ಪರ್ಧಿಸುವ ಅವಕಾಶ ನೀಡಲಾಗುತ್ತದೆ.**

ಕೌನ್ಸಿಲರ್ (ಕಾರ್ಪೊರೇಟರ್ ಎಂದೂ ಕರೆಯುತ್ತಾರೆ) ವಾರ್ಡ್ ನಾಯಕರಾಗಿದ್ದು, ವಾರ್ಡಿನ ಅಭಿವೃದ್ಧಿಯ ಮೇಲ್ವಿಚಾರಣೆಯ ಜವಾಬ್ದಾರಿಯನ್ನು ಹೊಂದಿರುತ್ತಾರೆ.

ಅನೇಕ ನಗರಗಳಲ್ಲಿ, ಕೌನ್ಸಿಲರ್ ಗಳಿಗೆ ಅವರ ಕಾರ್ಯ ನಿರ್ವಹಿಸಲು ನಗರ ಸರ್ಕಾರದಿಂದ ನೇಮಕಗೊಂಡ ಮಹಾನಗರದ ಅಧಿಕಾರಿಯು (ವಾರ್ಡ್ ಅಧಿಕಾರಿ) ಸಹಾಯ ಮಾಡುತ್ತಾರೆ.

## ನಿಮಗಿದು ಗೊತ್ತೇ?



**ಭಾರತದ ಗೌರವಾನ್ವಿತ ರಾಷ್ಟ್ರಪತಿ ಶ್ರೀಮತಿ ದ್ರೌಪದಿ ಮುರ್ಮುರವರು ಕೌನ್ಸಿಲರ್ ಆಗುವ ಮೂಲಕ ತಮ್ಮ ಸಾರ್ವಜನಿಕ ಸೇವೆಯ ವೃತ್ತಿ ಜೀವನವನ್ನು ಪ್ರಾರಂಭಿಸಿದರು**

**ಪ್ರತಿ ವಾರ್ಡಿನಲ್ಲಿ 1 ಕ್ಕಿಂತ ಹೆಚ್ಚು ಕೌನ್ಸಿಲರ್ ಗಳನ್ನು ಹೊಂದಿರುವ ಕೆಲವೇ ರಾಜ್ಯಗಳಲ್ಲಿ ಗುಜರಾತ್ ಮತ್ತು ಮಹಾರಾಷ್ಟ್ರ ಸೇರಿವೆ.**



# 3.3 ನಿಮ್ಮ ವಾರ್ಡಿನ ಬಗ್ಗೆ ಇನ್ನಷ್ಟು ತಿಳಿಯಿರಿ

## ನಿಮ್ಮ ವಾರ್ಡಿಗೆ ಜವಾಬ್ದಾರರು ಯಾರು?

ನಿರ್ದಿಷ್ಟವಾಗಿ, ನಿಮ್ಮ ವಾರ್ಡಿಗೆ ಸಾಮಾನ್ಯವಾಗಿ ಜವಾಬ್ದಾರರಾಗಿರುವ ಅಧಿಕಾರಿಗಳು:



ಕೌನ್ಸಿಲರ್ (ವಾರ್ಡ್ ಮುಖ್ಯಸ್ಥರು ಮತ್ತು ನಗರ ಸಭೆಯಲ್ಲಿ ನಿಮ್ಮನ್ನು ಪ್ರತಿನಿಧಿಸುತ್ತಾರೆ)



ವಾರ್ಡ್ ಅಭಿಯಂತರು



ಕಂದಾಯ ಅಧಿಕಾರಿ



ಆರೋಗ್ಯ ಅಧಿಕಾರಿ

ಈ ಪಟ್ಟಿಯು ನಗರದಿಂದ ನಗರಕ್ಕೆ ಬದಲಾಗುತ್ತದೆ ಎನ್ನುವುದನ್ನು ಗಮನದಲ್ಲಿ ಇಟ್ಟುಕೊಂಡಿರಬೇಕು

## ನನ್ನ ನಗರವು ಎಷ್ಟು ವಾರ್ಡುಗಳನ್ನು ಹೊಂದಿದೆ?

ನಿಮ್ಮ ನಗರದ ಪುರಸಭೆ ಅಥವಾ ಮುನ್ಸಿಪಲ್ ಕಾರ್ಪೊರೇಷನ್, ನಿಮ್ಮ ನಗರದಲ್ಲಿನ ವಾರ್ಡಗಳ ಬಗ್ಗೆ ಎಲ್ಲಾ ಮಾಹಿತಿಯನ್ನು ಹೊಂದಿರಬೇಕು. ಇನ್ನಷ್ಟು ತಿಳಿದುಕೊಳ್ಳಲು ನೀವು ನಿಮ್ಮ ನಗರ ಪಾಲಿಕೆಯ ಜಾಲತಾಣವನ್ನು ಭೇಟಿ ಮಾಡಿ



ಅದರ ಕೆಲವು ಉದಾಹರಣೆಗಳು ಇಲ್ಲಿವೆ:

- **ಬೆಂಗಳೂರು**

  ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

- **ಚೆನ್ನೈ**

  ಗ್ರೇಟರ್ ಚೆನ್ನೈ ಕಾರ್ಪೊರೇಷನ್

- **ಮುಂಬೈ**

  ಮುನ್ಸಿಪಲ್ ಕಾರ್ಪೊರೇಷನ್ ಆಫ್ ಗ್ರೇಟರ್ ಮುಂಬೈ (MCGM)

- **ಕೋಲ್ಕತ್ತಾ**

  ಕೋಲ್ಕತ್ತಾ ಮುನ್ಸಿಪಲ್ ಕಾರ್ಪೊರೇಷನ್

- **ನೀವು ಕರ್ನಾಟಕದವರಾಗಿದ್ದರೆ, ನೀವು**

  http://mrc.gov.in/en ಮೂಲಕ ಮಾಹಿತಿ ಪಡೆಯಬಹುದು.

  ಈ ವೆಬ್ಸೈಟ್ ರಾಜ್ಯದ 300+ಸ್ಥಳೀಯ ನಗರ ಸಂಸ್ಥೆಗಳ ವಿವರಗಳನ್ನು ಹೊಂದಿದೆ.

ಪರ್ಯಾಯವಾಗಿ, ನೀವು ಸ್ಥಳೀಯ ಸರ್ಕಾರದ ಡೈರೆಕ್ಟರಿಯ ವೆಬ್ಸೈಟ್ ಮೂಲಕ ಮಾಹಿತಿ ಪಡೆಯಬಹುದು

**lgdirectory.gov.in**

**ನಗರದಲ್ಲಿರುವ ವಾರ್ಡ್‌ಗಳ ಸಂಖ್ಯೆ, ವಾರ್ಡಿನ ಗಾತ್ರ ಮತ್ತು ಜನಸಂಖ್ಯೆಯು ಆಯಾ ನಗರದ ಗಾತ್ರವನ್ನು ಅವಲಂಬಿಸಿರುತ್ತದೆ ಮತ್ತು ಇದು ನಗರ ಸರ್ಕಾರ ಮತ್ತು ಆಯಾ ರಾಜ್ಯದ ಕಾನೂನಿಗೆ ಸಂಬಂಧಿಸಲಾಗುತ್ತದೆ.**



## ನನ್ನ ವಾರ್ಡಿನ ಹೆಸರು ಮತ್ತು ಸಂಖ್ಯೆಯನ್ನು ನಾನು ಹೇಗೆ ಕಂಡು ಹಿಡಿಯಬಹುದು?

**ನಿಮ್ಮ ವಾರ್ಡ್ ಬಗೆಗಿನ ವಿವರಗಳನ್ನು ತಿಳಿಯಿರಿ:**

**01** ನಿಮ್ಮ ನಗರ ಸರ್ಕಾರದ (ಮುನ್ಸಿಪಲ್ ಕಾರ್ಪೊರೇಶನ್/ಪುರಸಭೆ/ನಗರ ಪಾಲಿಕೆ) ಜಾಲತಾಣಕ್ಕೆ ಭೇಟಿ ನೀಡಿ. 'ನಿಮ್ಮ ವಾರ್ಡನ್ನು ತಿಳಿಯಿರಿ' ಎಂಬ ವಿಭಾಗಕ್ಕೆ ಭೇಟಿ ನೀಡಿ, ಜಿಪಿಎಸ್ ಮೂಲಕ ನಿಮ್ಮ ವಾಸ ಸ್ಥಳದ ಭೌಗೋಳಿಕ ಪ್ರದೇಶದ ಮಾಹಿತಿಯನ್ನು ಪಡೆದುಕೊಳ್ಳಲು ಅನುಮತಿ ನೀಡುವ ಮೂಲಕ ನಿಮ್ಮ ವಾರ್ಡ್ ಸಂಖ್ಯೆ ಹಾಗೂ ಸಂಬಂಧಿತ ವಿವರಗಳನ್ನು ಪಡೆದುಕೊಳ್ಳಿ.

**02** ಸ್ಥಳೀಯ ಸರ್ಕಾರದ ಡೈರೆಕ್ಟರಿ ಜಾಲತಾಣಕ್ಕೆ ಭೇಟಿ ನೀಡಿ (lgdirectory.gov.in)

**03** ನಿಮ್ಮ ನೆರೆಹೊರೆಯ ರಸ್ತೆಗಳಲ್ಲಿನ ಫಲಕಗಳನ್ನು ಗಮನಿಸಿ.

**04** ನಿಮ್ಮ ಆಸ್ತಿ ತೆರಿಗೆ ದಾಖಲೆಗಳು, ಪಡಿತರ ಚೀಟಿ, ಮತದಾರರ ಗುರುತಿನ ಚೀಟಿ ಅಥವಾ ಸಂಬಂಧಿತ ಸರ್ಕಾರಿ ದಾಖಲೆಗಳನ್ನು ಪರಿಶೀಲಿಸಿ. ಅನೇಕ ನಗರಗಳಲ್ಲಿ ಇಂತಹ ದಾಖಲೆಗಳಲ್ಲಿ ವಾರ್ಡ್ ಮಾಹಿತಿಯನ್ನು ನೀಡಿರುತ್ತಾರೆ.

**05** ನಿಮ್ಮ ಮನೆಯ ಸಮೀಪವಿರುವ ಯಾವುದೇ ಸರ್ಕಾರಿ ಕಚೇರಿಗಳನ್ನು ಸಂಪರ್ಕಿಸಿ ವಿಚಾರಿಸಿ (ಅದು ನಿಮ್ಮ ವಾರ್ಡ್ ಕಚೇರಿ, ವಲಯ ಕಚೇರಿ, ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ವಿದ್ಯುತ್ ಮಂಡಳಿ ಅಥವಾ ಪಡಿತರ ಅಂಗಡಿಯಾಗಿರಬಹುದು).

**06** ನಿಮ್ಮ ನೆರೆಹೊರೆಯಲ್ಲಿರುವ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಗಳು, ಅಪಾರ್ಟ್ಮೆಂಟ್ ಅಸೋಸಿಯೇಷನ್, ಎನ್ ಜಿ ಓ ಗಳು ಅಥವಾ ನಾಗರಿಕ ಸಮಾಜ ಸಂಸ್ಥೆಗಳನ್ನು ಸಂಪರ್ಕಿಸಿ ಮಾಹಿತಿ ಪಡೆದುಕೊಳ್ಳಬಹುದು. ಕೆಳಗಿನ ಪ್ರಮುಖ ಪದಗಳನ್ನು ಬಳಸಿಕೊಂಡು ಅಂತರ್ಜಾಲದಲ್ಲಿ ನಿಮ್ಮ ಪ್ರದೇಶದಲ್ಲಿನ ಸ್ಥಳೀಯ ಕ್ಷೇಮಾಭಿವೃದ್ಧಿ ಸಂಸ್ಥೆಗಳು, ನಾಗರಿಕ ಸಮಾಜದ ಸಂಸ್ಥೆಗಳನ್ನು ನೀವು ಪತ್ತೆ ಮಾಡಬಹುದು: <RWA> + <ನಿಮ್ಮ ಪ್ರದೇಶದ ಹೆಸರು> + <ನಿಮ್ಮ ನಗರದ ಹೆಸರು> ಇದರ ಜೊತೆಗೆ ನೀವು ನಿಮ್ಮ ನೆರೆಹೊರೆಯವರನ್ನು ಮತ್ತು ಸಂಬಂಧಿತ ವಾರ್ಡ್ ಕಚೇರಿಯನ್ನು ಸಂಪರ್ಕಿಸುವ ಮೂಲಕ ತಿಳಿದುಕೊಳ್ಳಬಹುದು.

## ನನ್ನ ಕೌನ್ಸಿಲರ್ ಹೆಸರನ್ನು ನಾನು ಹೇಗೆ ಕಂಡುಹಿಡಿಯಬಹುದು?

ನಿಮ್ಮ ವಾರ್ಡ್ ಹೆಸರು ಮತ್ತು ಸಂಖ್ಯೆಯನ್ನು ನೀವು ತಿಳಿದ ನಂತರ, ನಿಮ್ಮ ಕೌನ್ಸಿಲರ್ ಹೆಸರನ್ನು ಮೇಲೆ ನೀಡಿರುವ ಮಾರ್ಗವನ್ನು ಉಪಯೋಗಿಸಿ ಅದರ ಮೂಲಕ ತಿಳಿದುಕೊಳ್ಳಬಹುದು.

ಈ ಕೆಳಗಿನ ಪ್ರಮುಖ ಪದಗಳನ್ನು ಬಳಸಿ ಅಂತರ್ಜಾಲದಲ್ಲಿ ಹುಡುಕುವ ಮೂಲಕ ನೀವು ಆನ್ಲೈನ್ನಲ್ಲಿ ಈ ಮಾಹಿತಿಯನ್ನು ಪಡೆಯಬಹುದು: **<ನಿಮ್ಮ ನಗರದ ಹೆಸರು> + ಮುನ್ಸಿಪಲ್ ಕಾರ್ಪೊರೇಷನ್ / ಪುರಸಭೆಯ ಕೌನ್ಸಿಲರ್ ಗಳು**

## ನನ್ನ ಕೌನ್ಸಿಲರ್ ರವರನ್ನು ಆಯ್ಕೆ ಮಾಡಲು ನಾನು ನಗರ ಚುನಾವಣೆಯಲ್ಲಿ ಮತ ಹಾಕಬಹುದೇ?

**ಹೌದು!**

**ಚುನಾವಣೆಯಲ್ಲಿ ಮತ ಚಲಾಯಿಸಲು ನಿಮ್ಮ ವಾರ್ಡ್/ನಗರದ ಮತದಾರರ ಪಟ್ಟಿಯಲ್ಲಿ ನಿಮ್ಮ ಹೆಸರು ನೋಂದಣಿಯಾಗಿರಬೇಕು.**




**ನಿಮ್ಮ ಮೊಬೈಲ್ ನಲ್ಲಿರುವ ವೋಟರ್ ಹೆಲ್ಪ್ ಲೈನ್ ಅಪ್ಲಿಕೇಶನ್ ಬಳಸಿ ಅಥವಾ ಕೆಳಗೆ ನೀಡಿರುವ ಜಾಲತಾಣದಲ್ಲಿ ನಿಮ್ಮ ಹೆಸರು ಮತದಾರರ ಪಟ್ಟಿಯಲ್ಲಿದೆಯೇ ಎಂದು ನೀವು ಪರಿಶೀಲಿಸಬಹುದು. ನೀವು ಅದೇ ಜಾಲತಾಣದಲ್ಲಿ ಮತದಾರರ ಗುರುತಿನ ಚೀಟಿಗಾಗಿ ಸಹ ಅರ್ಜಿ ಸಲ್ಲಿಸಬಹುದು.**

ICT APP ಗಳು - ಭಾರತದ ಚುನಾವಣಾ ಆಯೋಗ (eci.gov.in)

## ನಗರದ ಚುನಾವಣೆಗಳನ್ನು ಯಾವಾಗ ನಡೆಸಲಾಗುತ್ತದೆ ಮತ್ತು ನಾನು ಚುನಾವಣಾ ಕ್ಯಾಲೆಂಡರ್ನೊಂದಿಗೆ ನವೀಕೃತವಾಗಿರುವುದು ಹೇಗೆ?

ನಿರ್ದಿಷ್ಟವಾಗಿ, ನಗರ ಚುನಾವಣೆಗಳನ್ನು 5 ವರ್ಷಗಳಿಗೊಮ್ಮೆ ನಡೆಸಲಾಗುತ್ತದೆ. ನಿಮ್ಮ ನಗರ ಸರ್ಕಾರವು ತಮ್ಮ ರಾಜ್ಯ ಚುನಾವಣಾ ಆಯೋಗದ (SEC) ಜೊತೆಗೆ ಸೇರಿ ನಗರದಲ್ಲಿ ಚುನಾವಣೆಗಳನ್ನು ನಡೆಸುವ ಜವಾಬ್ದಾರಿಯನ್ನು ಹೊಂದಿರುತ್ತದೆ. ಸ್ಥಳೀಯ ದಿನಪತ್ರಿಕೆಗಳು, ಮಾಧ್ಯಮವು ನಗರ ಚುನಾವಣೆಗಳ ಕುರಿತು ಮಾಹಿತಿಯನ್ನು ನೀಡುತ್ತವೆ.

## ನನ್ನ ಮತಗಟ್ಟೆ ಎಲ್ಲಿದೆ ಎಂದು ಕಂಡುಹಿಡಿಯುವುದು ಹೇಗೆ?

- ನೀವು ಮತದಾರರ ಗುರುತಿನ ಚೀಟಿ ಹೊಂದಿದ್ದರೆ, ಮತದಾರರ ಪೋರ್ಟಲ್ ನಲ್ಲಿ ಪರಿಶೀಲಿಸಿ. https://voterportal.eci.gov.in
- ನಿಮ್ಮ ಖಾತೆಯನ್ನು ರಚಿಸಿ ಮತ್ತು ನಿಮ್ಮ ಬಳಕೆಯ ಐಡಿ ಮತ್ತು ಪಾಸ್ವರ್ಡ್ ಹಾಕಿ ಲಾಗಿನ್ ಮಾಡಿ
- ‘ಮತದಾರರ ಹುಡುಕಾಟ’ ‘ಎಲೆಕ್ಟೊರಲ್ ಸರ್ಚ್” ಟ್ಯಾಬ್ ಆಯ್ಕೆಮಾಡಿ ಮತ್ತು ನಿಮ್ಮ ವೋಟರ್ ಐಡಿ ಅಥವಾ EPIC ಸಂಖ್ಯೆ ವಿವರಗಳನ್ನು ನಮೂದಿಸಿ
- ನೀವು ಮತ ಚಲಾಯಿಸಬೇಕಾದ ಮತಗಟ್ಟೆ ಸೇರಿದಂತೆ ಇದಕ್ಕೆ ಸಂಬಂಧಿಸಿದ ಎಲ್ಲಾ ಮಾಹಿತಿಗಳು ಇಲ್ಲಿ ಲಭ್ಯವಿರುತ್ತದೆ.
- ಇಗಾಗಲೆ ನೀವು ನೋಂದಾಯಿತರಾಗಿದ್ದರೆ ನಿಮ್ಮ ನೋಂದಣಿಯನ್ನು ಬಳಸಿ, , ನಿಮ್ಮ ಮತಗಟ್ಟೆಯ ವಿವರಗಳನ್ನು ಕಂಡುಹಿಡಿಯಲು ನೀವು ಆನ್ಲೈನ್ ಚುನಾವಣಾ ಪೋರ್ಟಲ್ www.electoralsearch.eci.gov.in ಅನ್ನು ಬಳಸಬಹುದು.



# 3.4 ವಾರ್ಡ್ ಬಜೆಟ್ (ಆಯವ್ಯಯ) ಮತ್ತು ಹಂಚಿಕೆಗಳು



## ನನ್ನ ವಾರ್ಡಿನ ಬಜೆಟ್ ಅನ್ನು ನಾನು ಎಲ್ಲಿ ಕಂಡುಹಿಡಿಯಬಹುದು?

**ವಿಶಿಷ್ಟವಾಗಿ, ವಾರ್ಡ್ ಬಜೆಟ್ ನಿಮ್ಮ ನಗರದ ಬಜೆಟ್ ಪುಸ್ತಕದ ಒಂದು ಭಾಗವಾಗಿರುತ್ತದೆ. ಹೆಚ್ಚಿನ ಸಂದರ್ಭಗಳಲ್ಲಿ, ನಗರ ಬಜೆಟ್/ನಗರ ಬಜೆಟ್ ಪುಸ್ತಕವು ನಿಮ್ಮ ನಗರ ಸರ್ಕಾರದ ಜಾಲತಾಣದಲ್ಲಿ ಲಭ್ಯವಿರಬೇಕು. ನೀವು ನಗರ ಪಾಲಿಕೆಯ ಮುಖ್ಯ ಲೆಕ್ಕಾಧಿಕಾರಿಯನ್ನು ಸಹ ಸಂಪರ್ಕಿಸಬಹುದು ಅಥವಾ ಅದಕ್ಕಾಗಿ ಮಾಹಿತಿ ಹಕ್ಕು ಅಧಿನಿಯಮದಡಿ ಅರ್ಜಿ ಸಲ್ಲಿಸಬಹುದು.**

**ಭಾರತದ ಅನೇಕ ಸಣ್ಣ ನಗರಗಳಿಗೆ ಇದು ಅನ್ವಯಿಸದಿದ್ದರು, ಈ ಕೆಳಗಿನ ಹಂತಗಳ ಮೂಲಕ ನಿಮ್ಮ ವಾರ್ಡಿನ ಬಜೆಟ್ ನ ಮಾಹಿತಿಯನ್ನು ಪಡೆಯಬಹುದು:**

01 ನಿಮ್ಮ ವಾರ್ಡ್ ಹೆಸರು ಅಥವಾ ಸಂಖ್ಯೆಯನ್ನು ಹೊಂದಿರುವ ಬಜೆಟ್ ಸಾಲುಗಳನ್ನು ಹುಡುಕಿ

02 ಪ್ರಸ್ತಾವಿತ ಮೂಲಸೌಕರ್ಯ ಯೋಜನೆಗಳಲ್ಲಿ, ನಿಮ್ಮ ವಾರ್ಡ್ ಸಂಖ್ಯೆಯನ್ನು ನೇರವಾಗಿ ನಮೂದಿಸಿರಬಹುದು ಅಥವಾ ಒಂದಕ್ಕಿಂತ ಹೆಚ್ಚು ವಾರ್ಡಗಳನ್ನು ಒಳಗೊಂಡ ಪಟ್ಟಿಯಲ್ಲಿ ನಿಮ್ಮ ವಾರ್ಡ್ ಸಂಖ್ಯೆ ಕಾಣಿಸಬಹುದು.

03 ಒಂದೇ ಬಜೆಟ್ ಸಾಲಿನಲ್ಲಿ ಬಹು ವಾರ್ಡಗಳನ್ನು ಸೇರಿಸಿರಬಹುದು, ಅಂತಹ ಸಂದರ್ಭದಲ್ಲಿ ವಾರ್ಡವಾರು ಬಜೆಟ್ ಮೊತ್ತವನ್ನು ಲಗತ್ತಿಸಿರಬಹುದು.

04 ಕೆಲವು ಸಂದರ್ಭಗಳಲ್ಲಿ ವಾರ್ಡ್ ಸಂಖ್ಯೆಗಳು ಮತ್ತು ಹೆಸರುಗಳ ಬದಲಿಗೆ, ವಲಯ ಅಥವಾ ವಿಧಾನಸಭಾ ಕ್ಷೇತ್ರಗಳ ಹೆಸರನ್ನು ಹೇಳಿರಬಹುದು

05 ಅನೇಕ ನಗರಗಳಲ್ಲಿ ಬಜೆಟನ್ನು ವರ್ಗದ ಅನುಸಾರ ನಿಗದಿಪಡಿಸಲಾಗುತ್ತದೆ. ಉದಾಹರಣೆಗೆ, ಮಳೆನೀರಿನ ಚರಂಡಿಗಳನ್ನು ಸ್ವಚ್ಛಗೊಳಿಸುವುದು, ಘನತ್ಯಾಜ್ಯ ನಿರ್ವಹಣೆ, ರಸ್ತೆ ಕಾಮಗಾರಿ ಇತ್ಯಾದಿ.

ಬಜೆಟ್ ಪುಸ್ತಕಗಳು ಈ ಕೆಳಗಿನ  ವಿಷಯವನ್ನು ಒಳಗೊಂಡಿರುತ್ತವೆ: ವರ್ಗ, ಮುಖ್ಯ ಶೀರ್ಷಿಕೆ, ಉಪಶೀರ್ಷಿಕೆ, ಬಜೆಟ್ ಕೋಡ್, ವಿವರಗಳು, ಹಿಂದಿನ ಹಣಕಾಸು ವರ್ಷದ ಖಾತೆಗಳು, ಪ್ರಸ್ತುತ ಹಣಕಾಸು ವರ್ಷದ ಬಜೆಟ್ ಅಂದಾಜುಗಳು, ಪರಿಷ್ಕೃತ ಬಜೆಟ್ ಅಂದಾಜುಗಳು, ಬಾಕಿ ಮೊತ್ತಗಳು, ನಡೆಯುತ್ತಿರುವ ಕಾಮಗಾರಿ, ಹೊಸ ಕಾಮಗಾರಿ, ಇತ್ಯಾದಿ.

ನೀವು ಬೆಂಗಳೂರಿನವರಾಗಿದ್ದರೆ, ನಿಮ್ಮ ವಾರ್ಡಿನ ಬಜೆಟ್ ಮಾಹಿತಿಯನ್ನು www.ichangemycity.com ಮೂಲಕ ಡೌನ್ಲೋಡ್ ಮಾಡಬಹುದು.

ನಗರದ ಬಜೆಟ್ ಪುಸ್ತಕದಲ್ಲಿ ನಿಮ್ಮ ವಾರ್ಡಿನ ಬಜೆಟ್ ಅನ್ನು ಕಂಡುಹಿಡಿಯಲು ಸಾಧ್ಯವಾಗದಿದ್ದರೆ, ನೀವು ನಿಮ್ಮ ಕೌನ್ಸಿಲರ್, ವಾರ್ಡ್ ಇಂಜಿನಿಯರ್ , ನೋಡಲ್ ಅಧಿಕಾರಿ ಅಥವಾ ವಾರ್ಡ್ ಕಾರ್ಯದರ್ಶಿಯನ್ನು ಸಂಪರ್ಕಿಸಬಹುದು.

ನಿಮ್ಮ ನಗರಕ್ಕೆ ಸಂಬಂಧ ಪಟ್ಟ ಅಧಿಕಾರಿಗೆ ನೀವು **RTI (ಮಾಹಿತಿ ಹಕ್ಕು)** ಅರ್ಜಿಯನ್ನು ಸಲ್ಲಿಸಬಹುದು ಮತ್ತು ನಿಮ್ಮ ವಾರ್ಡಿನ ಬಜೆಟಿನ ವಿವರಗಳನ್ನು ಕೋರಿ ವಿನಂತಿಸಬಹುದು. ಉದಾಹರಣೆಗೆ, ನೀವು ಕರ್ನಾಟಕದ ಯಾವುದೇ ನಗರದ ನಿವಾಸಿಯಾಗಿದ್ದರೆ, ನೀವು ಮಾಹಿತಿ ಹಕ್ಕು ಅರ್ಜಿಯನ್ನು (RTI Online Application) ಮೂಲಕ ಸಲ್ಲಿಸಬಹುದು.

## ನಗರ ಆಯವ್ಯಯವನ್ನು (ಬಜೆಟ್) ಪಾಲಿಕೆಯ ಕೌನ್ಸಿಲ್ ಅಂಗೀಕರಿಸಿ, ರಾಜ್ಯ ಸರ್ಕಾರ ಅದನ್ನು ಅನುಮೋದಿಸಿದ ನಂತರ, ಅದು ಹೇಗೆ ನನ್ನ ವಾರ್ಡಿನ ಸಾರ್ವಜನಿಕ ಕಾಮಗಾರಿಗಳ ಮೇಲೆ ಪರಿಣಾಮ ಬೀರುತ್ತದೆ?

ಬಜೆಟಿನಲ್ಲಿ ವಿವಿಧ ಯೋಜನೆಗಳಿಗೆ ಅದಕ್ಕೆ ಅವಶ್ಯಕವಿರುವ ಸಂಪನ್ಮೂಲಗಳನ್ನು ನಿಗದಿಪಡಿಸಲಾಗಿರುತ್ತದೆ.

**01** ಯೋಜನೆ ಕೋಡ್ ಗಳನ್ನು (ಪಿ-ಕೋಡ್) ಬಜೆಟಿನಲ್ಲಿ ನಿಗದಿಪಡಿಸಲಾಗುತ್ತದೆ

**02** ನಾಗರಿಕ ಕೆಲಸಕ್ಕಾಗಿ ಕಾಮಗಾರಿ ಕೋಡ್ ಅನ್ನು ರಚಿಸಲಾಗಿದೆ (ಬೆಂಗಳೂರಿನಂತಹ ಕೆಲವು ನಗರಗಳಿಗೆ ಕಾಮಗಾರಿ ಕೋಡ್ ಹಂಚಿಕೆ ವಿಶಿಷ್ಟವಾಗಿದೆ)

**03** ಟೆಂಡರ್ ಕರೆಯಲಾಗುವುದು

# ಇದನ್ನು ನಿಗದಿಪಡಿಸಿದ ನಂತರ, ಸಾರ್ವಜನಿಕ ಕಾಮಗಾರಿಗಳ ಯೋಜನೆಯ ಪ್ರಕ್ರಿಯೆ ಪ್ರಾರಂಭವಾಗುತ್ತದೆ.

**04** ಗುತ್ತಿಗೆದಾರರಿಗೆ ಕಾಮಗಾರಿ ಆದೇಶ ನೀಡಲಾಗುವುದು

**05** ಗುತ್ತಿಗೆದಾರರು ಕಾಮಗಾರಿಯನ್ನು ಅನುಷ್ಠಾನಗೊಳಿಸುತ್ತಾರೆ

**06** ಗುಣಮಟ್ಟ ಮತ್ತು ಸಂಪೂರ್ಣತೆಗಾಗಿ ತಪಾಸಣೆಯ ನಂತರ ಗುತ್ತಿಗೆದಾರರಿಗೆ ಸಂಭಾವನೆಯನ್ನು ಪಾವತಿಸಲಾಗುತ್ತದೆ

ವಾರ್ಡ್ ಬಜೆಟ್ ಹಂಚಿಕೆಯ ಮಾದರಿ ಮತ್ತು ಬಳಕೆಯನ್ನು ಈ ಕೆಳಗೆ ನೀವು ನೋಡಬಹುದು. ನಿಗದಿಪಡಿಸಿದ ಬಜೆಟಿನ ಆಧಾರದ ಮೇಲೆ ಬಜೆಟ್ ಗಳನ್ನು ಸಾಮಾನ್ಯವಾಗಿ ಹೇಗೆ ಬಳಸಿಕೊಳ್ಳಲಾಗುತ್ತದೆ ಎಂಬುದರ ಕುರಿತು ಒಂದು ಕಿರು ನೋಟವನ್ನು ಇದು ನಿಮಗೆ ತಿಳಿಸುತ್ತದೆ.

| ವಾರ್ಡ್ ಸಂಖ್ಯೆ | ವಾರ್ಡ್ ಹೆಸರು | ಜಾಬ್ ಕೋಡ್* | ವಿವರಣೆ | ಬಜೆಟ್ ಶೀರ್ಷಿಕೆ | ಮೊತ್ತ(ರೂ ನಲ್ಲಿ) |
|---|---|---|---|---|---|
| 1 | ಕೆಂಪೇಗೌಡ ವಾರ್ಡ್ | 001-20-000034 | ವಾರ್ಡ್ ಸಂಖ್ಯೆ 1 ಯಲಹಂಕ ಓಲ್ಡ್ ಟೌನ್ ಕೆರೆಯ ಬದಿಯಲ್ಲಿರುವ ದೀಪಗಳ ನಿರ್ವಹಣೆ | P0287 ಎಂ ಮತ್ತು ಆರ್ ವಿದ್ಯುತ್ ಚಿತಾಗಾರಕ್ಕೆ | 7,00,000 |
| 1 | ಕೆಂಪೇಗೌಡ ವಾರ್ಡ್ | 001-20-000035 | ವಾರ್ಡ್ ಸಂಖ್ಯೆ 1 ಕೆಂಪೇಗೌಡ, ಕಂಬಗಳಿಗೆ ಬಣ್ಣ ಬಳಿಯುವುದು | P0298 ಎಂ ಮತ್ತು ಆರ್ ಉದ್ಯಾನವನಗಳು, ಆಟದ ಮೈದಾನ ಮತ್ತು ಸ್ಮಶಾನಗಳಲ್ಲಿ ವಿದ್ಯುತ್ ಸಂಪರ್ಕ. | 1,00,000 |
| 1 | ಕೆಂಪೇಗೌಡ ವಾರ್ಡ್ | 001-20-000013 | ಯಲಹಂಕ ವಲಯದ ವಾರ್ಡ್ ಸಂಖ್ಯೆ 01 ಪ್ಯಾಕೇಜ್ Y1 ರಲ್ಲಿ ಬೀದಿ ದೀಪ ವ್ಯವಸ್ಥೆಯ ಕಾರ್ಯಾಚರಣೆ ಮತ್ತು ನಿರ್ವಹಣೆ | P0300 ಎಂ ಮತ್ತು ಆರ್ ಕಾರ್ಯನಿರ್ವಹಿಸದ ಬೀದಿ ದೀಪಗಳ ಬದಲಾವಣೆ ಇತ್ಯಾದಿ (ಪ್ಯಾಕೇಜ್) | 23,90,000 |
| 4 | ಕೆಂಪೇಗೌಡ ವಾರ್ಡ್ | 001-20-000056 | ಯಲಹಂಕ ವಲಯದ ಉತ್ತರ ಭಾಗದ ಯಲಹಂಕ ಕೆರೆಯ ಸುತ್ತಮುತ್ತಲಿನ ಪ್ರದೇಶದಲ್ಲಿ ಉದ್ಯಾನವನದ ಅಭಿವೃದ್ಧಿ ಭಾಗ 04 | ಉದ್ಯಾನವನಗಳು/ರಸ್ತೆಯ ಸರ್ಕಲ್/ಮತ್ತು ವೃತ್ತಗಳ ಅಭಿವೃದ್ಧಿ (ಜನೋದಯ ಕಾಮಗಾರಿ) | 20,00,000 |

## ನನ್ನ ವಾರ್ಡಿಗೆ ಲಭ್ಯವಿರುವ ಬಜೆಟಿನ ಜ್ಞಾನವನ್ನು ಬಳಸಿಕೊಂಡು ನಾನು ಹೇಗೆ ಹೆಚ್ಚು ತೊಡಗಿಸಿಕೊಂಡಿರುವ ನಾಗರಿಕನಾಗಬಹುದು?

ಮೇಲಿನ ಜ್ಞಾನವು ನಿಮ್ಮ ವಾರ್ಡಿನ ಬಜೆಟ್ ಮತ್ತು ಪೌರ ಕಾಮಗಾರಿಗಳ ಪ್ರಕ್ರಿಯೆಯ ಬಗ್ಗೆ ತಿಳಿದುಕೊಳ್ಳಲು ಅನುವು ಮಾಡುವ ಮೂಲಕ ನಿಮ್ಮ ಸ್ಥಳೀಯ ಸರ್ಕಾರದ ಆಡಳಿತದ ಹೆಚ್ಚು ಹೊಣೆಗಾರಿಕೆ ಮತ್ತು ಪಾರದರ್ಶಕತೆಯ ಬೇಡಿಕೆ ಪ್ರಸ್ತಾಪಿಸಲು ನಿಮ್ಮನ್ನು ಸಜ್ಜುಗೊಳಿಸುತ್ತದೆ. ಅದಷ್ಟೇ ಅಲ್ಲದೇ, ಇದು ಉತ್ತಮ ಗುಣಮಟ್ಟದ ಕೆಲಸಗಳು ಮತ್ತು ಸೇವೆಗಳನ್ನು ನಾಗರಿಕರಿಗೆ ತಲುಪಿಸಲು ಸಹಾಯ ಮಾಡುತ್ತದೆ. ಬಜೆಟ್ ಚರ್ಚೆಗಳಲ್ಲಿ , ನಿಮ್ಮ ಕೌನ್ಸಿಲರ್ ಮತ್ತು ವಾರ್ಡ್ ಅಧಿಕಾರಿಗಳ ಜೊತೆಗೆ ಸಕ್ರಿಯವಾಗಿ ಮತ್ತು ಆತ್ಮವಿಶ್ವಾಸದಿಂದ ಭಾಗವಹಿಸಲು ಇದು ನಿಮಗೆ ಸಹಾಯ ಮಾಡುತ್ತದೆ.

**ಸಹಭಾಗಿತ್ವವನ್ನು ಪರಿಣಾಮಕಾರಿಯಾಗಿ ಪ್ರಾರಂಭಿಸಲು ನಿಮಗೆ ಈ ಕೆಳಗಿನ ನಕ್ಷೆಯು ಸಹಾಯ ಮಾಡಲಿದೆ.**



**01**

ನಿಮ್ಮ ನೆರೆಹೊರೆಯವರೊಂದಿಗೆ ತಂಡವನ್ನು ರಚಿಸಿ ಮತ್ತು ನಿಮ್ಮ ಕೌನ್ಸಿಲರ್ ಮತ್ತು ವಾರ್ಡ್ ಅಧಿಕಾರಿಗಳೊಂದಿಗೆ ಸಭೆಯನ್ನು ಆಯೋಜಿಸಿ ಅಥವಾ ವಾರ್ಡ್ ಸಮಿತಿ ಸಭೆಗೆ ಹಾಜರಾಗಿ ನಿಮ್ಮ ಕೌನ್ಸಿಲರ್ ಮತ್ತು ವಾರ್ಡ್ ಅಧಿಕಾರಿಗಳೊಂದಿಗೆ ಚರ್ಚೆಮಾಡಿ.

**02**



ಮಂಜೂರು ಮಾಡಲಾದ ಬಜೆಟನ್ನು ಬಳಸಿಕೊಳ್ಳಲು ಅಧಿಕಾರಿಗಳು ಕಾಮಗಾರಿ ಆರಂಭಿಸಿದ್ದಾರೆಯೇ ಎಂಬುದರ ಬಗ್ಗೆ ಮಾಹಿತಿ ಪಡೆಯಿರಿ



**03**

ಪ್ರಸ್ತುತ ನಡೆಯುತ್ತಿರುವ ಕಾಮಗಾರಿಗಳ ವಿವರವಾದ ಯೋಜನಾ ವರದಿಗಳನ್ನು (DPR) ಪಡೆಯಿರಿ




**04**

ಕಾಮಗಾರಿಗಳು ಪ್ರಾರಂಭವಾಗಿದ್ದರೆ, ಟೆಂಡರ್ ಮತ್ತು ಕೆಲಸದ ಆದೇಶಗಳ (WOs) ಮಾಹಿತಿಯನ್ನು ಕೇಳಿ



**05**

ಕೆಲಸದ ಆದೇಶಗಳನ್ನು (WOs) ನೀಡಿದ್ದರೆ, ಕೆಲಸವನ್ನು ಯಾವಾಗ ಪ್ರಾರಂಭಿಸಬಹುದು ಎಂಬ ಮಾಹಿತಿಯನ್ನು ತಿಳಿದುಕೊಳ್ಳಿ.



**06**

ಕಾಮಗಾರಿಗೆ ಜವಾಬ್ದಾರರಾಗಿರುವ ಗುತ್ತಿಗೆದಾರರ ವಿವರ ಪಡೆಯಿರಿ.



**07**

ನಿಮ್ಮ ವಾರ್ಡ್ ಸಮಿತಿಯ ಸಭೆಗಳ ಸಮಯದಲ್ಲಿ ಯೋಜನೆಗಳ ಗುಣಮಟ್ಟ ಮತ್ತು ಸ್ಥಿತಿಗತಿಯ ಕುರಿತು ಪ್ರತಿಕ್ರಿಯೆಯನ್ನು ಹಂಚಿಕೊಳ್ಳಿ.



**08**

ತುರ್ತು ಸಮಸ್ಯೆಗಳಿದ್ದರೆ ಅದನ್ನು ಪರಿಹರಿಸಲು ತಕ್ಷಣವೇ ನಿಮ್ಮ ಕೌನ್ಸಿಲರ್ ಅಥವಾ ವಾರ್ಡ್ ಇಂಜಿನಿಯರ್ ಗಮನಕ್ಕೆ ತನ್ನಿ.

ನಿಮ್ಮ ಕುಂದು ಕೊರತೆಗಳನ್ನು ಅಧಿಕಾರಿಗಳ ಗಮನಕ್ಕೆ ತರಲು ತೊಂದರೆ ಇದೆಯೇ? ಸಂಬಂಧಿಸಿದ **ಪೌರ ಅಧಿಕಾರಿಗಳಿಗೆ ಸಮಸ್ಯೆಯನ್ನು** ಹೇಗೆ ವರದಿ ಮಾಡುವುದು ಎಂಬುದರ ಕುರಿತು ಸೂಕ್ತ ಮಾರ್ಗದರ್ಶಿಗಾಗಿ **ಪುಟ 91** ಓದಿಕೊಳ್ಳಿ.

# 3.5 ಚಟುವಟಿಕೆಯ ಮನೆ




## ನಿಮ್ಮ ವಾರ್ಡಿಗಾಗಿ ನಾಗರಿಕ ಡೈರೆಕ್ಟರಿಯನ್ನು ರಚಿಸಿ

ಈ ಅಧ್ಯಾಯದಲ್ಲಿ ನೀವು ಇದುವರೆಗೆ ಅಧ್ಯಯನ ಮಾಡಿದ ವಿಷಯಗಳನ್ನು ಗಮನದಲ್ಲಿಟ್ಟುಕೊಂಡು ನಿಮ್ಮ ವಾರ್ಡಿಗೆ ಅಗತ್ಯವಿರುವ ಎಲ್ಲಾ ವಿವರಗಳೊಂದಿಗೆ ಒಂದು ಪೌರ ಡೈರೆಕ್ಟರಿಯನ್ನು ಸಿದ್ಧಪಡಿಸಿಕೊಳ್ಳಿ:

ವಾರ್ಡ್ ಸಂಖ್ಯೆ: ____________________
ವಾರ್ಡ್ ಹೆಸರು: ____________________

ಕೌನ್ಸಿಲರ್ ಹೆಸರು: ____________________
ಸಂಪರ್ಕ ಮಾಹಿತಿ / ಸಂಖ್ಯೆ: ____________________

ವಾರ್ಡ್ ಇಂಜಿನಿಯರ್ ಹೆಸರು: ____________________
ಸಂಪರ್ಕ ಮಾಹಿತಿ / ಸಂಖ್ಯೆ: ____________________

ಕಾರ್ಯನಿರ್ವಾಹಕ ಇಂಜಿನಿಯರ್ ಹೆಸರು: ____________________
ಸಂಪರ್ಕ ಮಾಹಿತಿ / ಸಂಖ್ಯೆ: ____________________

ವಲಯ ಆಯುಕ್ತರ ಹೆಸರು: ____________________
ಸಂಪರ್ಕ ಮಾಹಿತಿ / ಸಂಖ್ಯೆ: ____________________

ಆರೋಗ್ಯ ಅಧಿಕಾರಿಯ ಹೆಸರು: ____________________
ಸಂಪರ್ಕ ಮಾಹಿತಿ / ಸಂಖ್ಯೆ: ____________________

ನೈರ್ಮಲ್ಯ ಅಧಿಕಾರಿಯ ಹೆಸರು: ____________________
ಸಂಪರ್ಕ ಮಾಹಿತಿ / ಸಂಖ್ಯೆ: ____________________

ವಾರ್ಡ್ ಕಛೇರಿಯ ವಿಳಾಸ: ____________________
ಹಣಕಾಸು ವರ್ಷ*: ____________________
ವಾರ್ಡ್ ಗೆ ನಿಗದಿಪಡಿಸಲಾದ ಬಜೆಟ್: ____________________



ಪ್ರಗತಿಯಲ್ಲಿರುವ ಅಥವಾ ಪೂರ್ಣಗೊಂಡಿರುವ ನಾಗರಿಕ ಕಾಮಗಾರಿಗಳನ್ನು ಗುರುತಿಸಿ, ಅವುಗಳನ್ನು ಕೆಳಗೆ ಪಟ್ಟಿ ಮಾಡಿ. ನೀವು ಮೂರಕ್ಕಿಂತ ಹೆಚ್ಚು ಯೋಜನೆಗಳನ್ನು ನಮೂದಿಸಲು ಬಯಸಿದಲ್ಲಿ ಈ ಪುಟದ ನಕಲುಗಳನ್ನು ಸಹ ತೆಗೆದುಕೊಳ್ಳಬಹುದು.



ಕಾಮಗಾರಿ ವಿವರ 1: ____________________
ಸ್ಥಿತಿಗತಿ: ____________________
ಟಿಪ್ಪಣಿಗಳು: ____________________
ಕಾಮಗಾರಿ ವಿವರ 2: ____________________
ಸ್ಥಿತಿಗತಿ: ____________________
ಟಿಪ್ಪಣಿಗಳು: ____________________
ಕಾಮಗಾರಿ ವಿವರ 3: ____________________
ಸ್ಥಿತಿಗತಿ: ____________________
ಟಿಪ್ಪಣಿಗಳು: ____________________

ನಿಮ್ಮ ವಾರ್ಡಿನಲ್ಲಿ ಆದ್ಯತೆ ನೀಡಬೇಕಾದ 3 ಸಮಸ್ಯೆಗಳು:

- ____________________
- ____________________
- ____________________

*ಆರ್ಥಿಕ ವರ್ಷವು ಏಪ್ರಿಲ್ 1 ರಿಂದ ಮಾರ್ಚ್ 31 ರವರೆಗೆ ಇರುತ್ತದೆ. ಉದಾಹರಣೆಗೆ, 1 ಏಪ್ರಿಲ್ 2021 ರಿಂದ 31 ಮಾರ್ಚ್ 2022 ರವರೆಗೆ.

# 04

# ಸಕ್ರಿಯ ನಾಗರಿಕತ್ವ ಮತ್ತು ನೀವು

## ಉತ್ತಮ ನಾಗರಿಕರಾಗಲು ವಿವಿಧ ಮಾರ್ಗಗಳ ಅನ್ವೇಷಣೆ



ನಿಮಗಾಗಿ ಒಂದು ಚಿಕ್ಕ ಚಟುವಟಿಕೆ ಇಲ್ಲಿದೆ. ಕಳೆದ ಒಂದು ವರ್ಷದಲ್ಲಿ, ಈ ಕೆಳಗಿನ ಯಾವ ಸಮಸ್ಯೆಗಳನ್ನು ನೀವು ಎದುರಿಸಿದ್ದೀರಿ:

**01** ನೀರಿನ ಸಮಸ್ಯೆಗಳು



**02** ಅಸಮರ್ಪಕ ತ್ಯಾಜ್ಯ ನಿರ್ವಹಣೆ



**03** ಕಳಪೆ/ಅಸ್ತಿತ್ವದಲ್ಲಿಲ್ಲದ ಬೀದಿ ದೀಪ



**04** ಮುರಿದ ಮತ್ತು ಬಳಸಲಾಗದ ಪಾದಚಾರಿ ಮಾರ್ಗಗಳು



**05** ಗುಣಮಟ್ಟವಿಲ್ಲದ ರಸ್ತೆಗಳು



**06** ನಗರಗಳಲ್ಲಿ ಸಂಭವಿಸುವ ಪ್ರವಾಹ



ನೀವು ಬಹುಶಃ ಮೇಲಿನ ಕನಿಷ್ಠ ಎರಡು ಸಮಸ್ಯೆಗಳನ್ನು ಎದುರಿಸಿರಬಹುದು ಅಥವಾ ಅದಕ್ಕಿಂತ ಹೆಚ್ಚನ್ನೂ ಸಹ ಎದುರಿಸಿರಬಹುದು

ನಮ್ಮ ನಗರಗಳು ಬೆಳೆದಂತೆ, ನಗರಗಳ ಸಮಸ್ಯೆಗಳೂ ಹೆಚ್ಚುತ್ತವೆ. ನಮ್ಮ ಸರ್ಕಾರಗಳು ಈ ಸಮಸ್ಯೆಗಳನ್ನು ಪರಿಹರಿಸಲು ಪ್ರಯತ್ನಿಸುತ್ತಿದ್ದರೂ ಸಹ, ಇದರಲ್ಲಿ ನಾಗರಿಕರ ಭಾಗವಹಿಸುವಿಕೆ ಮತ್ತು ಸಕ್ರಿಯ ಪಾಲ್ಗೊಳ್ಳುವಿಕೆ ಹೆಚ್ಚು ಕಂಡುಬರುವುದಿಲ್ಲ. ನಾಗರಿಕರು ತಮ್ಮ ನೆರೆಹೊರೆಯವರು ಎದುರಿಸುತ್ತಿರುವ ಸವಾಲುಗಳನ್ನು ಗುರುತಿಸಿದಾಗ ಅಧಿಕಾರಿಗಳಿಗೆ, ಈ ನಿರ್ದಿಷ್ಟ ಸಮಸ್ಯೆಗಳನ್ನು ಪರಿಹರಿಸಲು, ನಗರ ಯೋಜನೆ ಮತ್ತು ಅಭಿವೃದ್ಧಿಗೆ ಕೆಳಗಿನಿಂದ ಮೇಲಕ್ಕೆ ಹರಿದು ಬರುವ ವಿಧಾನದಲ್ಲಿ ಸಮಸ್ಯೆಗಳನ್ನು ಪರಿಹರಿಸುವ ವಿಧಾನವನ್ನ ಅಳವಡಿಸಿಕೊಳ್ಳಲು ಅವಕಾಶ ನೀಡಿದಂತಾಗುತ್ತದೆ

**ಹಾಗಿದ್ದರೆ, ಮುಂದಿನ ಬಾರಿ ನಿಮ್ಮ ನೆರೆಹೊರೆಯಲ್ಲಿ ಪೌರ ಸಮಸ್ಯೆಗಳು ಕಂಡುಬಂದಲ್ಲಿ ಅದನ್ನು ಪರಿಹರಿಸಲು ಈ ನಾಲ್ಕು ಮಾರ್ಗಗಳನ್ನು ಅನುಸರಿಸಬಹುದು**





**ನಿಮ್ಮ ನಗರದ ಕುಂದುಕೊರತೆ ನಿರ್ವಹಣಾ ವೇದಿಕೆ ಬಳಸಿ**



**ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಗಳು (RWAs), ಸ್ವಸಹಾಯ ಗುಂಪುಗಳು, ನಾಗರಿಕ ಸಮಾಜ ಸಂಸ್ಥೆಗಳು (CSOs) ಇತ್ಯಾದಿಗಳೊಂದಿಗೆ ನಿರಂತರ ಸಂಪರ್ಕದಲ್ಲಿರಿ**



**ನಿಮ್ಮ ದೂರನ್ನು ಸಾಮಾಜಿಕ ಜಾಲತಾಣಗಳಲ್ಲಿ ಪೋಸ್ಟ್ ಮಾಡಿ ಸಂಬಂಧಿತ ನಾಗರಿಕ ಏಜೆನ್ಸಿಗಳನ್ನು ಟ್ಯಾಗ್ ಮಾಡುವುದು.**



**ವಾರ್ಡ್ ಸಮಿತಿ ಸಭೆಗಳಿಗೆ ಹಾಜರಾಗಿ ಮತ್ತು ನಿಮ್ಮ ವಾರ್ಡಿನ ಕೌನ್ಸಿಲರ್ ಅಥವಾ ನೋಡಲ್ ಅಧಿಕಾರಿ ಮತ್ತು ವಾರ್ಡ್ ಅಧಿಕಾರಿಯನ್ನು ಭೇಟಿ ಮಾಡಿ**

**(ವಾರ್ಡ್ ಸಮಿತಿಗಳ ಕುರಿತು ಹೆಚ್ಚಿನ ಮಾಹಿತಿಗಾಗಿ ವಿಭಾಗ 5 ಮತ್ತು 6 ಅನ್ನು ನೋಡಿ).**

ಪ್ರಜಾಪ್ರಭುತ್ವವು ಸರ್ಕಾರದ ಒಂದು ರೂಪವಲ್ಲ ಇದು ಸಹಬಾಳ್ವೆಯ ಸಂಕೇತವಾಗಿದ್ದು ನಮ್ಮ ಅನುಭವಗಳನ್ನೂ ಪರಸ್ಪರ ಹಂಚಿಕೊಳ್ಳುವ ರೂಪವಾಗಿದೆ. ಅಷ್ಟಲ್ಲದೇ ಇದು ಮೂಲಭೂತವಾಗಿ ನಮ್ಮ ಮತ್ತು ನಮ್ಮ ಸಹ ನಾಗರಿಕರಿಗೆ ನಾವು ತೋರುವ ಗೌರವಾಗಿದೆ.

**ಡಾ ಬಿ ಆರ್ ಅಂಬೇಡ್ಕರ್**



# 4.1 ಪೌರ ಸಮಸ್ಯೆಗಳನ್ನು ಪರಿಹರಿಸಲು ಸ್ಥಳೀಯ ಸರ್ಕಾರದ ಕುಂದುಕೊರತೆ ಪರಿಹಾರ ವೇದಿಕೆಯನ್ನು ನಾನು ಹೇಗೆ ಬಳಸುವುದು?



ನನ್ನ ಪ್ರದೇಶ/ವಾರ್ಡನಲ್ಲಿನ ಸಮಸ್ಯೆಯನ್ನು ನಾನು ವರದಿ ಮಾಡಬೇಕು







ನಿಮ್ಮ ವಾರ್ಡ್ ಸಂಖ್ಯೆ ನಿಮಗೆ ತಿಳಿದಿದೆಯೇ?

ಇಲ್ಲ →

ಸರ್ಕಾರೇತರ ಸಂಸ್ಥೆಗಳು (NGOs) ಅಥವಾ ಇತರ ನಾಗರಿಕ ಸಂಸ್ಥೆಗಳ ಜಾಲತಾಣ ಇದಕ್ಕೆ ಸಹಾಯ ಮಾಡಬಹುದು

ನಿಮ್ಮ ಪಾಲಿಕೆಯ ಜಾಲತಾಣದಲ್ಲಿ ನೀವು ಅದನ್ನು ಕಾಣಬಹುದು

ಹೌದು ↓



ನಿಮ್ಮ ನಗರದ ಪುರಸಭೆಯ ಕುಂದುಕೊರತೆ ಪರಿಹಾರ ವೇದಿಕೆಯನ್ನು ಗುರುತಿಸಿ

ಹೌದು ↓



ನಿಮ್ಮ ಖಾತೆಯನ್ನು ರಚಿಸಿ. ನಿಮ್ಮ ರುಜುವಾತುಗಳೊಂದಿಗೆ ಲಾಗ್ ಇನ್ ಮಾಡಿ ಮತ್ತು ನಿಮ್ಮ ದೂರನ್ನು ಪೋಸ್ಟ್ ಮಾಡಿ

↓



ನಿಮ್ಮ ವಾರ್ಡ್ ಎಂಜಿನಿಯರ್ ರವರನ್ನು ವಿಚಾರಿಸಿ ಅವರ ವಿವರಗಳು ನಿಮ್ಮ ನಗರ ಸರ್ಕಾರದ ಜಾಲತಾಣ ಲಭ್ಯವಿರುತ್ತವೆ

↓

ಸಂಬಂಧಪಟ್ಟ ವಾರ್ಡ್ ಎಂಜಿನಿಯರ್ ನಿಮ್ಮ ಸಮಸ್ಯೆಯನ್ನು ಪರಿಹರಿಸುತ್ತಾರೆ



ಹೌದು ↓

ನಿಮ್ಮ ಸಮಸ್ಯೆಯನ್ನು ಪರಿಹರಿಸಲಾಗಿದೆ

ಇಲ್ಲ →



ನಿಮ್ಮ ವಾರ್ಡ್ ಇಂಜಿನಿಯರ್ ಮತ್ತು ಕೌನ್ಸಿಲರ್‌ನೊಂದಿಗೆ ಸಮಸ್ಯೆಯ ಕುರಿತು ಚರ್ಚಿಸಿ

↓



ನಿಮ್ಮ ಸಮಸ್ಯೆಯನ್ನು ಇನ್ನೂ ಪರಿಹರಿಸಲಾಗದಿದ್ದರೆ, ಅದನ್ನು ನಿಮ್ಮ ವಲಯದ ಆಯುಕ್ತರು/ಮುಂದಿನ ಉನ್ನತ ಅಧಿಕಾರಿಗಳ ಅವಗಾಹನೆಗೆ ತನ್ನಿ

↓

ನಿಮ್ಮ ವಲಯದ ಆಯುಕ್ತರು/ ಮುಂದಿನ ಉನ್ನತ ಅಧಿಕಾರಿಗಳು ನಿಮ್ಮ ಸಮಸ್ಯೆಯ ಪರಿಹಾರದ ಕುರಿತು ವಾರ್ಡ್ ಇಂಜಿನಿಯರ್ ಜೊತೆ ಚರ್ಚಿಸುತ್ತಾರೆ



→ ನಿಮ್ಮ ಸಮಸ್ಯೆಯನ್ನು ಪರಿಹರಿಸಲಾಗಿದೆ




ನಿಮ್ಮ ನಗರ ಸರ್ಕಾರವು ಸಾಮಾನ್ಯವಾಗಿ ದರರಹಿತ ದೂರವಾಣಿ ಸಂಖ್ಯೆಗಳು, ಜಾಲತಾಣಗಳು ಅಥವಾ ಮೊಬೈಲ್ ಅಪ್ಲಿಕೇಶನ್ ರೂಪದಲ್ಲಿ ಕುಂದುಕೊರತೆ ಪರಿಹಾರ ವೇದಿಕೆಗಳನ್ನು ಹೊಂದಿರಬಹುದು.



ನೈರ್ಮಲ್ಯ ಮತ್ತು ತ್ಯಾಜ್ಯ ನಿರ್ವಹಣೆ ಸಮಸ್ಯೆಗಳನ್ನು ವರದಿ ಮಾಡಲು ನೀವು ಸ್ವಚ್ಛತಾ ಅಪ್ಲಿಕೇಶನ್ ಅನ್ನು ಸಹ ಬಳಸಬಹುದು. ಅಪ್ಲಿಕೇಶನ್ ನಿಮ್ಮ ವಾರ್ಡ್ ಸಂಖ್ಯೆ ಮತ್ತು ಸ್ಥಳವನ್ನು ಸ್ವಯಂಚಾಲಿತವಾಗಿ ಪತ್ತೆ ಮಾಡುತ್ತದೆ.



ಹಲವಾರು ದೂರುಗಳ ಹೊರತಾಗಿಯೂ ಸಮಸ್ಯೆಯುನ್ನು ಪರಿಹರಿಸಲಾಗದಿದ್ದರೆ, ನೀವು ಮುಂದಿನ ಕ್ರಮಕ್ಕಾಗಿ ಉನ್ನತ ಅಧಿಕಾರಿಗಳಿಗೆ ಮೇಲ್ಮನವಿ ಸಲ್ಲಿಸಬಹುದು.



ನಗರ ಸರ್ಕಾರದ ಅಧಿಕಾರಿಗಳನ್ನು ಹೇಗೆ ತ್ವರಿತವಾಗಿ ಅನುಸರಣೆ ಮಾಡಬೇಕೆಂದು ತಿಳಿಯಲು ಪುಟ 93 ಅನ್ನುನೋಡಿ.

ನೀವೂ ಸಹ ಇದನ್ನು ಪ್ರಾರಂಭಿಸಲು ಅನುಕೂಲವಾಗಲು, ವಿವಿಧ ನಗರ ಸರ್ಕಾರಗಳ ಕೆಲವು ಉಪಕ್ರಮಗಳು ಇಲ್ಲಿವೆ:

**ಬೆಂಗಳೂರು:** 'ಸಹಾಯ 2.0 (ನಮ್ಮ ಬೆಂಗಳೂರು)' ಅಪ್ಲಿಕೇಶನ್

**ಭುವನೇಶ್ವರ್:** ಭುವನೇಶ್ವರ್ ME ನಾಗರಿಕ ಸೇವೆಗಳು

**ಇಂದೋರ್:** ಇಂದೋರ್ 311 ಅಪ್ಲಿಕೇಶನ್

**ಸೊಲ್ಲಾಪುರ:** ಪರಿವರ್ತನ್ ಆ್ಯಪ್

## ಯೋಗಕ್ಷೇಮ ಸಲಹೆಗಳು:



ನಿಮ್ಮ ನೆರೆಹೊರೆಯಲ್ಲಿ ಕಸದ ರಾಶಿಗಳು (GVP), ಅನಧಿಕೃತ ಕಸದ ಡಂಪ್ ಯಾರ್ಡ್‌ಗಳು, ಕಸವನ್ನು ಸುಡುವುದು ಇತ್ಯಾದಿಗಗಳು ನಿಮಗೆ ಕಂಡುಬಂದಲ್ಲಿ, ನಿಮ್ಮ ಸಂಬಂಧಪಟ್ಟ ವಾರ್ಡ್ ಎಂಜಿನಿಯರ್, ಕೌನ್ಸಿಲರ್ ಅಥವಾ ಘನ ತ್ಯಾಜ್ಯ ನಿರ್ವಹಣೆಯ ಏಜೆನ್ಸಿಯೊಂದಿಗೆ ಮಾತನಾಡಿ, ನಿಮ್ಮ ನೆರೆಹೊರೆಯನ್ನು ಸ್ವಚ್ಛವಾಗಿರುವಂತೆ ನೋಡಿಕೊಳ್ಳಿ. ಇದಲ್ಲದೇ, ಪ್ಲೇ ಸ್ಟೋರ್ ಅಥವಾ ಆಪ್ ಸ್ಟೋರ್ ನಿಂದ ಸ್ವಚ್ಛತಾ ಆ್ಯಪ್ ಡೌನ್ಲೋಡ್ ಮಾಡಿ ಅದರ ಮೂಲಕವೂ ಸಹ ನೀವು ಈ ವಿಷಯದ ಬಗ್ಗೆ ದೂರು ದಾಖಲಿಸಬಹುದು.

## 4.2 ನಾಗರಿಕ ಸಮಸ್ಯೆಗಳನ್ನು ಪರಿಹರಿಸಲು ನಾನು ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಗಳು(RWA), ನಾಗರಿಕ ಸಮಾಜದ ಸಂಸ್ಥೆಗಳು(CSO) ಮತ್ತು ಸ್ವ ಸಹಾಯ ಗುಂಪುಗಳನ್ನು(SHG) ಹೇಗೆ ಬಳಸಿಕೊಳ್ಳಬಹುದು?

❖ ನಿಮ್ಮ ಪ್ರದೇಶದಲ್ಲಿ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಗಳು (RWAs) ಮತ್ತು ಸ್ವ-ಸಹಾಯ ಗುಂಪುಗಳನ್ನು (SHGs) ಈ ಕೆಳಗಿನ ವಿಕಲ್ಪಗಳೊಂದಿಗೆ ನೀವು ಪತ್ತೆ ಮಾಡಬಹುದು:

**01** ವಾರ್ಡ್ ಕಚೇರಿಯನ್ನು ಸಂಪರ್ಕಿಸುವುದು



**02** ನಿಮ್ಮ ನೆರೆಹೊರೆಯವರು ಮತ್ತು ಪ್ರದೇಶದ ಇತರ ನಿವಾಸಿಗಳನ್ನು ಕೇಳುವುದು




**03** ಇಂಟರ್ನೆಟ್ / ಅಂತರಜಾಲದ ಮುಖೇನ ಹುಡುಕುವುದು




**04** ನಗರಮಟ್ಟದಲ್ಲಿ ಲಭ್ಯವಿರುವ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಗಳ ಮತ್ತು ಸ್ಥಳೀಯ ಮಟ್ಟದ ಮಾಹಿತಿಯನ್ನು ವೀಕ್ಷಿಸುವುದು



❖ RWA ಸಭೆಗಳು ಮತ್ತು ಇತರ ಚಟುವಟಿಕೆಗಳಲ್ಲಿ ಭಾಗವಹಿಸಿ.

❖ RWA ಮುಖೇನ ನಿಮ್ಮ ನೆರೆಹೊರೆಯ ಸಮಸ್ಯೆಗಳನ್ನು ನಿಮ್ಮ ವಾರ್ಡ್ ಅಧಿಕಾರಿಗಳ ಗಮನಕ್ಕೆ ತನ್ನಿ

❖ ನಿಮ್ಮ ಪ್ರದೇಶವು RWA ಅನ್ನು ಹೊಂದಿಲ್ಲದಿದ್ದರೆ, ನಿಮ್ಮ ನೆರೆಹೊರೆಯವರು ಮತ್ತು ನಿವಾಸಿಗಳೊಂದಿಗೆ ಕೈಜೋಡಿಸುವ ಮೂಲಕ ನೀವೂ ಸಹ ಒಂದು ಹೊಸ RWA ರಚಿಸಬಹುದು.

❖ ನಿಮ್ಮ ಸಮಸ್ಯೆಗಳು ಇನ್ನೂ ಬಗೆಹರಿಯದಿದ್ದರೆ, ನಗರಾಡಳಿತದ ಉನ್ನತ ಅಧಿಕಾರಿಗಳಿಗೆ ದೂರನ್ನು ವರ್ಗಾಯಿಸಬಹುದು.

**ನಾಗರಿಕ ಸಮಸ್ಯೆಗಳನ್ನು ಪರಿಹರಿಸಲು ನಿಮ್ಮ ನೆರೆಹೊರೆಯಲ್ಲಿ ಸಮಾನ ಮನಸ್ಕ ಜನರನ್ನು ಒಟ್ಟುಗೂಡಿಸಲು ಯೋಚಿಸುತ್ತಿರುವಿರಾ? ನಾವು ನಿಮಗಾಗಿ ಸೂಕ್ತ ಮಾರ್ಗದರ್ಶನವನ್ನು ನೀಡಲಿದ್ದೇವೆ. ಅದಕ್ಕಾಗಿ 84 ನೇ ಪುಟವನ್ನು ನೋಡಿ.**

**ನಿಮ್ಮ ನೆರೆಹೊರೆಯಲ್ಲಿ ಸಮಸ್ಯೆಯನ್ನು ಎದುರಿಸುತ್ತಿರುವಿರಾ? ದೇಶಾದ್ಯಂತ ತಮ್ಮ ಪ್ರದೇಶಗಳಲ್ಲಿನ ಸಮಸ್ಯೆಗಳನ್ನು ಸುಧಾರಿಸಲು ಸಕ್ರಿಯವಾಗಿ ತೊಡಗಿಸಿಕೊಂಡಿರುವ ನಾಗರಿಕರಿಂದ ಸ್ಫೂರ್ತಿ ಪಡೆಯಿರಿ. ಚೆನ್ನೈನ ಪೆರುಂಗುಡಿ ಡಂಪಿಂಗ್ ಗ್ರೌಂಡ್ ನಲ್ಲಿ ಅನುಚಿತ ತ್ಯಾಜ್ಯ ವಿಲೇವಾರಿ, ಅಂತರ್ಜಲ ಮಾಲಿನ್ಯ ಮತ್ತು ನೆರೆಹೊರೆ ನಿವಾಸಿಗಳ ಮೇಲೆ ಆರೋಗ್ಯದ ದುಷ್ಪರಿಣಾಮಗಳು ಬೀಳುತ್ತಿರುವ ಬಗ್ಗೆ ನಾಗರಿಕರು ಧ್ವನಿ ಎತ್ತಿದ್ದಾರೆ. ಅದೇ ರೀತಿ ಬೆಂಗಳೂರು ನಗರದಲ್ಲಿ ಆರೋಗ್ಯದ ದೃಷ್ಟಿಯಿಂದ, ಕಸ ಸುರಿಯುವುದನ್ನು ವಿರೋಧಿಸಿ, ಹೊರವಲಯದ ಮಾವಳ್ಳಿ ಗ್ರಾಮದ ನಿವಾಸಿಗಳು ಪ್ರತಿಭಟನೆ ನಡೆಸಿದರು.**



ನನ್ನ ಪ್ರದೇಶ/ವಾರ್ಡನಲ್ಲಿನ ಸಮಸ್ಯೆಯನ್ನು ನಾನು ವರದಿ ಮಾಡಬೇಕು







ನಿಮ್ಮ ವಾರ್ಡ್ ಸಂಖ್ಯೆ ನಿಮಗೆ ತಿಳಿದಿದೆಯೇ?

**ಇಲ್ಲ**

ಸರ್ಕಾರೇತರ ಸಂಸ್ಥೆಗಳು (NGOs) ಅಥವಾ ಇತರ ನಾಗರಿಕ ಸಂಸ್ಥೆಗಳ ಜಾಲತಾಣ ಇದಕ್ಕೆ ಸಹಾಯ ಮಾಡಬಹುದು

ನಿಮ್ಮ ಪಾಲಿಕೆಯ ಜಾಲತಾಣದಲ್ಲಿ ನೀವು ಅದನ್ನು ಕಾಣಬಹುದು

**ಹೌದು**



ನಿಮ್ಮ ಸ್ಥಳೀಯರೊಂದಿಗೆ, ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಗಳು ಮತ್ತು ನಾಗರಿಕ ಸಮಾಜದ ಸಂಸ್ಥೆಗಳು ಗುರುತಿಸಿ ಮತ್ತು ನಿರಂತರ ಸಂಪರ್ಕದಲ್ಲಿರಿ.

**ಹೌದು**



ನಿಮ್ಮ ಸ್ಥಳೀಯರೊಂದಿಗೆ, ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಗಳು ಮತ್ತು ನಾಗರಿಕ ಸಮಾಜದ ಸಂಸ್ಥೆಗಳ ಸಭೆಗಳಿಗೆ ಹಾಜರಾಗಿ ಮತ್ತು ಅವರ ಎಲ್ಲಾ ಚಟುವಟಿಕೆಗಳಲ್ಲಿ ಪಾಲ್ಗೊಳ್ಳಿ



ನಿಮ್ಮ ಸಮಸ್ಯೆಗಳನ್ನು ಗುಂಪಾಗಿ ಚರ್ಚಿಸಿ ಮತ್ತು ನಿಮ್ಮ ವಾರ್ಡ್ ಅಧಿಕಾರಿಗಳ ಅವಗಾಹನೆಗೆ ತನ್ನಿ

ಸಂಬಂಧಪಟ್ಟ ವಾರ್ಡ್ ಎಂಜಿನಿಯರ್ ನಿಮ್ಮ ಸಮಸ್ಯೆಯನ್ನು ಪರಿಹರಿಸುತ್ತಾರೆ



**ಇಲ್ಲ**



ನಿಮ್ಮ ವಾರ್ಡ್ ಇಂಜಿನಿಯರ್ ಮತ್ತು ಕೌನ್ಸಿಲರ್ ಗಮನಕ್ಕೆ ತನ್ನಿ



ನಿಮ್ಮ ಸಮಸ್ಯೆಯನ್ನು ಇನ್ನೂ ಪರಿಹರಿಸಲಾಗದಿದ್ದರೆ, ಅದನ್ನು ನಿಮ್ಮ ವಲಯ ಆಯುಕ್ತರು/ಮುಂದಿನ ಉನ್ನತ ಅಧಿಕಾರಿಗಳ ಅವಗಾಹನೆಗೆ ತನ್ನಿ

ನಿಮ್ಮ ವಲಯದ ಆಯುಕ್ತರು/ಮುಂದಿನ ಉನ್ನತ ಅಧಿಕಾರಿಗಳು ನಿಮ್ಮ ಸಮಸ್ಯೆಯ ಪರಿಹಾರದ ಕುರಿತು ವಾರ್ಡ್ ಇಂಜಿನಿಯರ್ ಜೊತೆ ಚರ್ಚಿಸುತ್ತಾರೆ



**ಹೌದು**



ನಿಮ್ಮ ಸಮಸ್ಯೆಯನ್ನು ಪರಿಹರಿಸಲಾಗಿದೆ

# 4.3 ನಾಗರಿಕ ಸಮಸ್ಯೆಗಳನ್ನು ಪರಿಹರಿಸಲು ನಾನು ಸಾಮಾಜಿಕ ಮಾಧ್ಯಮವನ್ನು ಹೇಗೆ ಬಳಸಬಹುದು?

01




❖ ಇಂಟರ್ನೆಟ್ ನಲ್ಲಿ ನಿಮ್ಮ ನಗರ ಸರ್ಕಾರದ ಮಾಹಿತಿಯನ್ನು ತ್ವರಿತವಾಗಿ ತಿಳಿಯಲು ಮತ್ತು ಸಂಪರ್ಕಿಸಲು ವಿವಿಧ ಸಾಮಾಜಿಕ ಮಾಧ್ಯಮ ವೇದಿಕೆಗಳಲ್ಲಿ (ಮೆಟಾ, ಎಕ್ಸ್, ಇತ್ಯಾದಿ) ಬಳಸಿ

02




❖ ನಿಮ್ಮ ಸಮಸ್ಯೆಯ ಬಗ್ಗೆ ಬರೆಯಿರಿ ಮತ್ತು ಸಂಬಂಧಿತ ಸರ್ಕಾರಿ ಅಧಿಕಾರಿಗಳನ್ನು ಟ್ಯಾಗ್ ಮಾಡಿ.

03




❖ ಉದಾಹರಣೆಗೆ, ಬೆಂಗಳೂರಿನ ನಿವಾಸಿಗಳು @BBMPAdmn, @BBMPSWMSplComm, @BBMPSplHealth. ಸಂಪರ್ಕಿಸಬಹುದು

04



❖ ದೂರುಗಳ ನಿವಾರಣೆಯ ಕುರಿತು ನಿರಂತರವಾಗಿ ವಿಚಾರಿಸಿ ಸ್ಥಿತಿಗತಿಗಳನ್ನು ತಿಳಿದುಕೊಳ್ಳಿ

05



❖ ನಿಮ್ಮ ಸಮಸ್ಯೆಯನ್ನು ಇನ್ನೂ ಪರಿಹರಿಸಲಾಗದಿದ್ದರೆ, ಅದನ್ನು ಮುಂದಿನ ಉನ್ನತ ಅಧಿಕಾರಿ ಅಥವಾ ನಗರ ಸರ್ಕಾರದ ಚುನಾಯಿತ ಸದಸ್ಯರ ಗಮನಕ್ಕೆ ತರಬಹುದು.




ಹೆಚ್ಚಿನ ಮಾಹಿತಿಗಾಗಿ 94ನೇ ಪುಟವನ್ನು ನೋಡಿ.

## ಯೋಗಕ್ಷೇಮ ಸಲಹೆಗಳು

ನಿಮ್ಮ ಸಾಮಾಜಿಕ ಮಾಧ್ಯಮದ ಜ್ಞಾನ ಮತ್ತು ಸಂಘಟನಾ ಕೌಶಲ್ಯಗಳನ್ನು ಬಳಸಿ, ಪರಿಸರದ ಸಂರಕ್ಷಣೆಗಾಗಿ ನಿಮ್ಮ ನೆರೆಹೊರೆಯನ್ನು ಸಂಘಟಿಸಿ! ಪ್ರಸ್ತುತ ಸಮಸ್ಯೆಗಳ ಮೇಲೆ ಪರಿಣಾಮಕಾರಿ ಪ್ರಭಾವ ಬೀರುವ ಪ್ರಚಾರಗಳು ಮತ್ತು ಅಭಿಯಾನಗಳನ್ನು ನೀವು ನಡೆಸಬಹುದು ಅಥವಾ ನೀವು ಸ್ಥಳೀಯ ಸರ್ಕಾರದೊಂದಿಗೆ ಜೊತೆಗೂಡಿ ಸುಸ್ಥಿರವಾದ ನೆರೆಹೊರೆಗಳನ್ನು ನಿರ್ಮಿಸಬಹುದು. ನಾಗರಿಕರಿಗೆ ಮತ್ತು ಪರಿಸರಕ್ಕೆ ದುಷ್ಪರಿಣಾಮ ಬೀರುವಂತಹ ಯೋಜನೆಗಳ ವಿರುದ್ಧವೂ ಧ್ವನಿ ಎತ್ತಬಹುದು. ಇದೇ ತರಹ ನೀವು ಕೈಗೊಳ್ಳಬಹುದಾದ ಪರಿಸರ ಮತ್ತು ಜನಪರ ಕಾರ್ಯಗಳು ಅಸೀಮಿತವಾಗಿವೆ.

# 4.4 ನಾಗರಿಕ ಸಮಸ್ಯೆಗಳನ್ನು ಪರಿಹರಿಸಲು ನಾನು ವಾರ್ಡ್ ಸಮಿತಿ ಸಭೆಗಳನ್ನು ಹೇಗೆ ಬಳಸಬಹುದು?

**ವಾರ್ಡ್ ಸಮಿತಿಗಳ ಕುರಿತು ಇನ್ನಷ್ಟು ತಿಳಿದುಕೊಳ್ಳಲು, ಮುಂದಿನ ಅಧ್ಯಾಯವನ್ನು ನೋಡಿ**

**ನಿರಾಸಕ್ತೆ ನ್ಯಾನ್ಸಿ**




ಇದೆಲ್ಲವೂ ಸೈದ್ಧಾಂತಿಕವಾಗಿ ಕೇಳಿಸಿಕೊಳ್ಳಲು ಉತ್ತಮವಾಗಿದೆ ಆದರೆ ವಾಸ್ತವವಾಗಿ ಇದು ಕಾರ್ಯರೂಪದಲ್ಲಿರುವ ಉದಾಹರಣೆಗಳಿವೆಯೇ? ಹಾಗೆಯೆ ನಾಗರಿಕರು ಇದನ್ನು ಪ್ರಮಾಣೀಕರಿಸಿದ್ದಾರೆಯೇ? ಅಂತೆಯೇ ಇದು ನಿಜವಾಗಿಯೂ ಎಲ್ಲಾದರೂ ಬದಲಾವಣೆಯ ಪ್ರಭಾವ ಬೀರಿದೆಯೇ?

**ಸಕ್ರಿಯ ಶಿವ**




ಖಂಡಿತವಾಗಿಯೂ ಸಾಧ್ಯ! ಇದು ಸ್ವಲ್ಪ ಸಮಯ ಮತ್ತು ಶ್ರಮವನ್ನು ತೆಗೆದುಕೊಳ್ಳುತ್ತದೆ, ನಾಗರಿಕರು ತಮ್ಮ ನೆರೆಹೊರೆ ಮತ್ತು ನಗರಗಳನ್ನು ಹೇಗೆ ಯಶಸ್ವಿಯಾಗಿ ಬದಲಾಯಿಸಿದ್ದಾರೆ ಎಂಬುದರ ಕುರಿತು ಹಲವಾರು ಸತ್ಯ ಕಥೆಗಳಿವೆ! ಅದರಲ್ಲಿ ನನ್ನ ಮೆಚ್ಚಿನ ಎರಡು ಕಥೆಗಳು ಇಂತಿವೆ!

## ಸಕ್ರಿಯ ನಾಗರಿಕರ ಸಕ್ರಿಯ ಭಾಗವಹಿಸುವಿಕೆಯ ಫಲವಾಗಿ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಮೊದಲ ಬಾರಿಗೆ ವಾರ್ಡ್ ಗಳಿಗೆ ಪ್ರತ್ಯೇಕ ಮೊತ್ತ ಹಂಚಿಕೆಯನ್ನು ಮಾಡಲಾಯಿತು



**2015 ರಲ್ಲಿ, ಜನಾಗ್ರಹವು ಸಂಸ್ಥೆಯು ನನ್ನ ನಗರ ನನ್ನ ಬಜೆಟ್** ಅಭಿಯಾನವನ್ನು ಪ್ರಾರಂಭಿಸಿದ್ದು, ಈ ಅಭಿಯಾನವು ನಗರದಾದ್ಯಂತ ಹಲವಾರು ಸಂಘ ಸಂಸ್ಥೆಗಳ, ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಗಳ ಹಾಗು ಬೆಂಗಳೂರು ವಾರ್ಡ್ ಸಮಿತಿ ಬಳಗದೊಂದಿಗೆ ನಾಗರಿಕರ ಸಹಭಾಗಿತ್ವದ ಬಜೆಟ್ ಕುರಿತು ಅಭಿಪ್ರಾಯ ಸಂಗ್ರಹಣೆ ಮಾಡುವ ಪ್ರಕ್ರಿಯೆಯಾಗಿದೆ.

ನನ್ನ ನಗರ ನನ್ನ ಬಜೆಟ್





**2021-2022 ರಲ್ಲಿ, ಬೆಂಗಳೂರಿನ ಮಹಾನಗರ ಪಾಲಿಕೆಯು ವಾರ್ಡ್ ಸಮಿತಿಗಳಿಗೆ 120 ಕೋಟಿ ರೂಪಾಯಿಗಳನ್ನು, ಅಂದರೆ ಪ್ರತಿ ವಾರ್ಡಿಗೆ 60 ಲಕ್ಷ ರೂ ಮೀಸಲಿಟ್ಟಿದ್ದು,** ಇದು ನಾಗರಿಕರ ಭಾಗವಹಿಸುವಿಕೆಗೆ ಪ್ರಾಮುಖ್ಯತೆ ನೀಡುವ ಭಾರತದಲ್ಲಿ ಸಹಭಾಗಿತ್ವದ ಬಜೆಟಿಗೆ ಮೊದಲ ಗೆಲುವು ಎಂದರೆ ತಪ್ಪಾಗಲಾರದು. ಈ ಬಜೆಟಿನಲ್ಲಿ ನಾಗರಿಕರ ಭಾಗವಹಿಸುವಿಕೆಯ ಮೂಲಕ ಹೆಚ್ಚಿನ ಪಾರದರ್ಶಕತೆ ಮತ್ತು ಹೊಣೆಗಾರಿಕೆಗೆ ಒತ್ತು ನೀಡಿದ್ದಾರೆ. ಇದು ದೇಶದಾದ್ಯಂತ, ನಗರ ಬಜೆಟ್ ನಲ್ಲಿ ನಾಗರಿಕರ ಅಗತ್ಯಗಳು ಮತ್ತು ಆಕಾಂಕ್ಷೆಗಳನ್ನು ಪ್ರತಿಬಿಂಬಿಸಲು ಸಹಾಯ ಮಾಡುತ್ತದೆ. ನಾಗರಿಕ ಭಾಗವಹಿಸುವಿಕೆಯಿಂದ ಪರ್ವತಗಳನ್ನೂ ಸಹ ಭೇದಿಸಬಹುದು ಎಂಬುದಕ್ಕೆ ಇದು ಸಮಯೋಚಿತವಾದ ಉದಾಹರಣೆಯಾಗಿದೆ.

# ನಿಮಗಿದು ಗೊತ್ತೇ?

**ನನ್ನ ನಗರ ನನ್ನ ಬಜೆಟ್ 2023 ಅಭಿಯಾನವನ್ನು ಕರ್ನಾಟಕದ ಮೂರು ನಗರಗಳಲ್ಲಿ - ಬೆಂಗಳೂರು, ಮಂಗಳೂರು ಮತ್ತು ಕಲಬುರಗಿ - ನಡೆದಿದ್ದು, ಈ ಅಭಿಯಾನವನ್ನು ನಾಗರಿಕರ ಗುಂಪುಗಳು ಸ್ವತಃ ತಾವೇ ಮುನ್ನಡೆಸಿದ್ದಾರೆ. ಈ ಮೂರು ನಗರಗಳಲ್ಲಿ, ನಾಗರಿಕ ಗುಂಪುಗಳು ಮತ್ತು ನಾಗರಿಕ ಸಮಾಜ ಸಂಸ್ಥೆಗಳು ಪಾಲಿಕೆಯ ವರ್ಷದ ಬಜೆಟಿನಲ್ಲಿ ತಮಗೆ ಪ್ರಮುಖವಾಗಿ ಅವಶ್ಯಕವಿರುವ ತ್ಯಾಜ್ಯದ ಮರುಬಳಕೆ, ಮಳೆನೀರು ಕೊಯ್ಲು, ಉದ್ಯಾನವನಗಳ ನಿರ್ವಹಣೆ ಮತ್ತು ಮಳೆ ನೀರು ಕಾಲುವೆಯಲ್ಲಿ ಹೂಳು ಎತ್ತುವುದು ಇತ್ಯಾದಿಗಳಂತಹ ವಾರ್ಡ್ ಮಟ್ಟದ ಪರಿಸರ ರಕ್ಷಣೆ ಸಂಬಂಧಿತ ವಿಷಯಗಳಿಗೆ ಆದ್ಯತೆ ನೀಡಿ ಸಲಹೆಗಳನ್ನು ನೀಡಿದರು.**




## ಬಾಣಸವಾಡಿ ವಾರ್ಡಿನ ಸರ್ವಾಂಗೀಣ ಅಭಿವೃದ್ಧಿಗೆ ಸಹಾಯ ಮಾಡುತ್ತಿರುವ ವ್ಯಕ್ತಿಯನ್ನು ಭೇಟಿ ಮಾಡಿ



**ಅಮಿತ್ ನಿಗ್ಲಿ ಬೆಂಗಳೂರಿನ ಬಾಣಸವಾಡಿ ವಾರ್ಡ್ #27 ನಿವಾಸಿ.**

ಅವರು ಹತ್ತು ವರ್ಷಗಳ ಹಿಂದೆ, ಅವರ ವಾರ್ಡಿನ ಸಮಸ್ಯೆಗಳ ಕುರಿತ ವಿವಿಧ ವ್ಯವಸ್ಥೆಗಳ ಮತ್ತು ಪ್ರಕ್ರಿಯೆಗಳ ಬಗ್ಗೆ ಕಲಿಯುವ ಮೂಲಕ ತಮ್ಮ ಸಕ್ರಿಯ ನಾಗರಿಕತ್ವದ ಪ್ರಯಾಣವನ್ನು ಪ್ರಾರಂಭಿಸಿದರು. ಇದಕ್ಕೆ, ಅವರ ವಾರ್ಡಿನ RWAಗಳು ಹಾಗು ನಾಗರಿಕರು ಸಹಕರಿಸಿದರು. “ಮಾಹಿತಿ ಸಂಗ್ರಹವು ಮೊದಲ ಹೆಜ್ಜೆಯಾಗಿತ್ತು. ಪ್ರತಿ ಸಮಸ್ಯೆಗೆ ಸರಿಯಾದ ವ್ಯಕ್ತಿಯನ್ನು ಹೇಗೆ ಸಂಪರ್ಕಿಸಬೇಕು ಎಂಬುದನ್ನು ಅರ್ಥಮಾಡಿಕೊಳ್ಳುವುದು ಎರಡನೆಯ ಹೆಜ್ಜೆಯಾಗಿತ್ತು ,”ಎಂದು ಅವರು ಹೇಳುತ್ತಾರೆ. “ಉದಾಹರಣೆಗೆ, ಬೆಂಗಳೂರಿನಲ್ಲಿ ಬೀದಿದೀಪಗಳ ಸಮಸ್ಯೆ ಮತ್ತು ನಿರ್ವಹಣೆ ಸಲುವಾಗಿ ಪ್ರತಿಯೊಬ್ಬರು ಬೆಸ್ಕಾಂಗೆ ಕರೆ ಮಾಡುತ್ತಾರೆ. ಆದರೆ ವಾಸ್ತವದಲ್ಲಿ ಬೆಸ್ಕಾಂ ವಿದ್ಯುತ್ ವಿತರಣೆಯ ಹೊಣೆ ಮಾತ್ರ ಹೊಂದಿದ್ದು, ಬಿಬಿಎಂಪಿಯು ಬೀದಿ ದೀಪ ನಿರ್ವಹಣೆಯ ಜವಾಬ್ದಾರಿ ಹೊಂದಿರುತ್ತದೆ. ಈ ಸೂಕ್ಷ್ಮ ತಿಳುವಳಿಕೆಯ ಕೊರತೆಯು ಅನೇಕ ಬಾರಿ ಸಮಸ್ಯೆಗಳನ್ನು ಪರಿಹರಿಸಲು ತಡೆಯಾಗಿರುತ್ತದ. ಈ ಜ್ಞಾನವನ್ನು ಪಡೆಯುವುದರಿಂದ, ನಾಗರಿಕರು ಸಬಲರಾಗುತ್ತಾರೆ.”

ಅಮಿತ್ ಅವರು ತಮ್ಮ ಪ್ರದೇಶದ ವಾರ್ಡ್ ಸಮಿತಿ ಸಭೆಗಳಿಗೆ ಹೋಗಲು ಪ್ರಾರಂಭಿಸಿದರು. ಈ ಮೂಲಕ ವಾರ್ಡ್ ಸಮಿತಿ ಸಭೆಗಳ ಅಪಾರ ಸಾಮರ್ಥ್ಯವನ್ನು ನೇರವಾಗಿ ವೀಕ್ಷಿಸಿದರು, ಅದು ಹೇಗೆ ಎಂದರೆ, ಉದ್ಯಾನವನದಲ್ಲಿ ತ್ಯಾಜ್ಯವನ್ನು ತೆರವುಗೊಳಿಸುವ ಸಮಸ್ಯೆಯನ್ನು ವಾರ್ಡ್ ಸಮಿತಿ ಸಭೆಗಳ ಮುಖಾಂತರ ಎರಡೇ ದಿನಗಳಲ್ಲಿ ಪರಿಹರಿಸಲಾಯಿತು!



ಈ ರೀತಿಯ ಸಣ್ಣ ಗೆಲುವುಗಳು ಅವರನ್ನು ಬಾಣಸವಾಡಿ ರೈಸಿಂಗ್ ಸಂಘಟನೆಯನ್ನು ಪ್ರಾರಂಭಿಸಲು ಉತ್ತೇಜಿಸಿದವು. “ನಾನು ಪಯಣ ಪ್ರಾರಂಭಿಸಿದಾಗ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಗಳಿಗೆ (RWA) ಗಳಿಗೆ ಮನೆಮಾಲೀಕರು ಮಾತ್ರ ಸೇರಬೇಕು, ಬಾಡಿಗೆದಾರರು ಅಥವಾ ಅಪಾರ್ಟ್ಮೆಂಟ್ ನಿವಾಸಿಗಳು ಸೇರುವಂತಿಲ್ಲ ಎಂದು ತಿಳಿದುಕೊಂಡೆ. ಬಾಣಸವಾಡಿ ರೈಸಿಂಗ್ ಒಂದು ಅನೌಪಚಾರಿಕ ವೇದಿಕೆಯಾಗಿದ್ದು, ವಾರ್ಡಿನಲ್ಲಿರುವ ಪ್ರತಿಯೊಬ್ಬರ ಭಾಗವಹಿಸಬಹುದು. ನಾವು ವಾಟ್ಸಾಪ್ ಗುಂಪಿನೊಂದಿಗೆ ಪ್ರಾರಂಭಿಸಿದ್ದೇವೆ ಮತ್ತು ನಿವಾಸಿಗಳೊಂದಿಗೆ ಮಾಹಿತಿಯನ್ನು ಹಂಚಿಕೊಂಡಿದ್ದೇವೆ, ಅದು ಅವರಿಗೆ ಸಬಲತೆಯನ್ನು ನೀಡಲು ಪ್ರಾರಂಭಿಸಿತು ಮತ್ತು ಹೆಚ್ಚಿನದನ್ನು ಮಾಡಲು ಬಯಸುವಂತೆ ಮಾಡಿತು. ತದನಂತರ, ಬಾಣಸವಾಡಿ ರೈಸಿಂಗ್ ವಿಕೇಂದ್ರೀಕರಣಗೊಂಡು ದೊಡ್ಡದಾಯಿತು. ಈಗ ಒಂದು ವಿಭಾಗಕ್ಕೆ 250 ನಾಗರಿಕರಂತೆ, ಒಟ್ಟಾಗಿ 14 ವಾಟ್ಸಾಪ್ ಗುಂಪುಗಳನ್ನೂ ಹೊಂದಿದ್ದೇವೆ. ಸಬಲೀಕರಣವು ವಾರ್ಡಿನಾದ್ಯಂತ ವಿಸ್ತಾರವಾದ ವ್ಯಾಪ್ತಿಯನ್ನು ತೆಗೆದುಕೊಂಡಿದೆ.



**ನಮ್ಮ ದೇಶದ ಅಮಿತ್ ರಂತವರ ಶಕ್ತಿ ಹೆಚ್ಚಾಗಲಿ! ಅವರುಗಳು ಪ್ರಾರಂಭಿಸಿದ ನಾಗರಿಕ ಗುಂಪುಗಳು ಮತ್ತಷ್ಟು ಬೆಳೆಯಲಿ**

# 4.5 ಚಟುವಟಿಕೆಯ ಮನೆ




## ಸಕ್ರಿಯ ನಾಗರಿಕತ್ವದ ಪ್ರತಿಜ್ಞೆಯನ್ನು ತೆಗೆದುಕೊಳ್ಳಿ



ನೀವು ಇದನ್ನು ಇನ್ನೂ ಓದುತ್ತಿದ್ದರೆ, ನೀವು ಬಹುಶಃ ನಾಗರಿಕ ಭಾಗವಹಿಸುವಿಕೆಯ ಮತ್ತು ಚಟುವಟಿಕೆಯ ರೂಪಾಂತರಿಸುವ ಶಕ್ತಿಯನ್ನು ನಂಬುತ್ತೀರಿ.

ನಿಮ್ಮ ನಂಬಿಕೆಯನ್ನು ಮತ್ತೊಮ್ಮೆ ದೃಢೀಕರಿಸಿ ಮತ್ತು ಈ ಪ್ರತಿಜ್ಞೆಯೊಂದಿಗೆ ಸಕ್ರಿಯ ನಾಗರಿಕರಾಗಲು ಬದ್ಧರಾಗಿರಿ.

## ಸಕ್ರಿಯ ನಾಗರಿಕತ್ವದ ಪ್ರತಿಜ್ಞೆ





- ನಾನು ಸಕ್ರಿಯ ನಾಗರಿಕತ್ವ ಪ್ರತಿಜ್ಞೆಯನ್ನು ತೆಗೆದುಕೊಳ್ಳುತ್ತೇನೆ
- ನಾನು ಭಾರತದ ಮತ್ತು ನಾನು ವಾಸಿಸುವ ನಗರದ ಪ್ರಜೆ
- ನಾನು ಪ್ರಜಾಪ್ರಭುತ್ವ ಹಾಗು ಕಾನೂನಿನ ನಿಯಮಗಳನ್ನು ನಂಬುತ್ತೇನೆ
- ಸರ್ಕಾರ ಮತ್ತು ನನ್ನ ಸಹ ನಾಗರಿಕರಿಗೆ ಸಂಬಂಧಿಸಿದ ನನ್ನ ಹಕ್ಕುಗಳು ಮತ್ತು ಕರ್ತವ್ಯಗಳ ಬಗ್ಗೆ ಆಳವಾಗಿ ಕಾಳಜಿ ವಹಿಸುತ್ತೇನೆ
- ನಾನು ನನ್ನ ವಾರ್ಡ್ ಸಮಿತಿ ಸಭೆಗಳಿಗೆ ಹಾಜರಾಗುತ್ತೇನೆ ಮತ್ತು ನನ್ನ ನೆರೆಹೊರೆ ಮತ್ತು ನಗರವನ್ನು ವಾಸಿಸಲು ಉತ್ತಮ ಸ್ಥಳವನ್ನಾಗಿ ಮಾಡಲು ನಗರ ಸರ್ಕಾರದೊಂದಿಗೆ ಸಹಕರಿಸುತ್ತೇನೆ

## ನಾನು ಪ್ರತಿಜ್ಞೆ ಮಾಡುತ್ತೇನೆ



ನಾನು ಅರ್ಹತೆ ಹೊಂದಿದ ನಂತರ ಎಲ್ಲಾ ಚುನಾವಣೆಗಳಲ್ಲಿ ಮತ ಚಲಾಯಿಸುತ್ತೇನೆ



ನನ್ನ ನೆರೆಹೊರೆಯಲ್ಲಿ ನಡೆಯುವ ನಾಗರಿಕ ವಿಷಯಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತೇನೆ



ಸರ್ಕಾರದೊಂದಿಗೆ ರಚನಾತ್ಮಕವಾಗಿ ತೊಡಗಿಸಿಕೊಳ್ಳಲು ಮತ್ತು ಬದಲಾವಣೆಯ ಅಗತ್ಯವಿರುವ ನೀತಿಗಳ ಕುರಿತ ಪ್ರತಿಕ್ರಿಯೆಯಲ್ಲಿ ತೊಡಗಿಸಿಕೊಳ್ಳುವೆ



ನನ್ನ ಸಹ ನಾಗರಿಕರೊಂದಿಗೆ ತೊಡಗಿಸಿಕೊಳ್ಳುತ್ತೇನೆ ಮತ್ತು ಅವರ ಹಕ್ಕುಗಳನ್ನು ಗೌರವಿಸುತ್ತೇನೆ

## ಈ ಕೆಳಗಿನವುಗಳ ಮೂಲಕ ನಾನು ಸಾರ್ವಜನಿಕ ಸ್ಥಳಗಳ ಬಗ್ಗೆ ಕಾಳಜಿ ಮತ್ತು ಗೌರವವಹಿಸುತ್ತೇನೆ



ಎಲ್ಲೆಂದರಲ್ಲಿ ಕಸ ಹಾಕುವುದಿಲ್ಲ



ಕಸವನ್ನು ಜವಾಬ್ದಾರಿಯುತವಾಗಿ ವಿಲೇವಾರಿ ಮಾಡುತ್ತೇನೆ




ಸಂಚಾರ ನಿಯಮಗಳನ್ನು ಪಾಲಿಸುತ್ತೇನೆ



ತ್ಯಾಜ್ಯವನ್ನು ಕಡಿಮೆ ಮಾಡುತ್ತೇನೆ ಮತ್ತು ಪರಿಸರದ ಮೇಲೆ ಕಾಳಜಿ ವಹಿಸುತ್ತೇನೆ



ನಾಗರಿಕ ಸರತಿ ಸಾಲುಗಳನ್ನು ಅನುಸರಿಸುತ್ತೇನೆ




ಲಂಚವನ್ನು ಎಂದಿಗೂ ಪಾವತಿಸುವುದಿಲ್ಲ ಹಾಗೆಯೇ ನಾನು ಉಳಿಸಿಕೊಂಡಿರುವ ತೆರಿಗೆಗಳನ್ನು ಪಾವತಿಸುತ್ತೇನೆ



ಇತರ ನಾಗರಿಕ ಕರ್ತವ್ಯಗಳನ್ನು ತಿಳಿದುಕೊಂಡು, ಅದರಂತೆಯೇ ಅನುಸರಿಸುತ್ತೇನೆ ಮತ್ತು ಕಾನೂನಿನ ನಿಯಮಗಳನ್ನು ಪಾಲಿಸುತ್ತೇನೆ




ನನ್ನ ನೆರೆಹೊರೆಯಲ್ಲಿ, ನನ್ನ ನಗರದಲ್ಲಿ ಮತ್ತು ನನ್ನ ದೇಶದಲ್ಲಿ - ನಾನು ನೋಡಲು ಬಯಸುವ ಬದಲಾವಣೆ ತರಲು ನಾನು ಪ್ರತಿಜ್ಞೆ ಮಾಡುತ್ತೇನೆ.

# ನಾನು ಸಕ್ರಿಯ ನಾಗರಿಕನಾಗಿರಲು ಪ್ರತಿಜ್ಞೆ ಮಾಡುತ್ತೇನೆ



# 05

# ವಾರ್ಡ್ ಸಮಿತಿಗಳು ಅಂದರೆ ಏನು ಮತ್ತು ಇವು ಹೇಗೆ ಕಾರ್ಯನಿರ್ವಹಿಸುತ್ತವೆ.

**ಬನ್ನಿ ಹಾಗಿದ್ದರೆ, ವಾರ್ಡ್ ಸಮಿತಿಗಳು ಎಂದರೇನು ಮತ್ತು ನೀವು ಏಕೆ ವಾರ್ಡ್ ಸಮಿತಿಗಳ ಬಗೆ ಕಾಳಜಿ ವಹಿಸಬೇಕು ಎಂದು ತಿಳಿದುಕೊಳ್ಳೋಣ.**

ನಿಮ್ಮ ಬೀದಿಯ ಮೂಲೆ ಅಂಗಡಿಯ ಬಳಿ ನಡೆಯುವಾಗ ಮುರಿದ ಕಾಲುದಾರಿಯಿಂದಾಗಿ ನಿಮ್ಮ ಪಾದಗಳು ತಿರುಚಿದ ಸಮಯವನ್ನು ನೆನಪಿಸಿಕೊಳ್ಳಿ ಅಥವಾ  ವಾರದ ಮೊದಲನೇ ದಿನದಂದು ಗುಂಡಿಗಳಿಂದ ಕೂಡಿದ ಮುಖ್ಯ ರಸ್ತೆಯಲ್ಲಿ ಪ್ರಯಾಣಿಸುವಾಗ ನಿಮಗಾದ ಅನುಭವವನ್ನು ನೆನಪಿಸಿಕೊಳ್ಳಿ ಅಥವಾ ಪ್ರತಿ ಬಾರಿಯೂ ನಿಮ್ಮ ನೆರೆಯ ನಿರ್ಲಕ್ಷಿತ ಉದ್ಯಾನವನಕ್ಕೆ ಬೆಳಕಿಲ್ಲದ ರಸ್ತೆಯಲ್ಲಿ ನಡೆದುಕೊಂಡು ಹೋಗುವ ಅನುಭವ ನೆನಪಿಸಿಕೊಳ್ಳಿ





**ಹೆಚ್ಚಿನ ಜನರಂತೆ, ನೀವು ಬಹುಶಃ ಹತಾಶೆಯನ್ನು ಅನುಭವಿಸಿದ್ದೀರಿ, ಏನನ್ನಾದರೂ ಮಾಡಲು ಬಹಿಸಿದರು ಸಹ, ನಂತರ ಏನು ಮಾಡುವುದು ಬೇಡ ಎನ್ನುವ ಭಾವನೆಯು ನಿಮ್ಮಲ್ಲಿ ಮೂಡಿರಬಹುದು. ಈ ವಿಷಯಗಳನ್ನು ಸರಿಪಡಿಸುವುದು ಹೇಗೆ? ನೀವು ಯಾರಿಗೆ ದೂರು ನೀಡುತ್ತೀರಿ? ದೂರು ನೀಡುವುದು ಹೇಗೆ? ಮತ್ತು ಆ ದೂರು ಪರಿಹರಿಸಲ್ಪಟ್ಟಿದೆಯೇ ಇಲವೋ ಎಂಬುದನ್ನು ಅನುಸರಣೆ ಮಾಡಿ ಹೇಗೆ ಖಚಿತಪಡಿಸಿಕೊಳ್ಳುತ್ತೀರಿ?**



***ವಾರ್ಡ್ ಸಮಿತಿಗಳು ಎಲ್ಲಾ ವಾರ್ಡ್ ಸಮಸ್ಯೆಗಳಿಂದಾಗಿ ಆಗಿರುವ ಅಸಮಾಧಾನವನ್ನು ಪರಿಹರಿಸುವ ಮಾರ್ಗವಾಗಿದೆ. ಈ ಮೂಲಕ ಜನರಿಗೆ ಅಧಿಕಾರವನ್ನು ನೀಡುತ್ತದೆ ಹಾಗು ಆಡಳಿತವನ್ನು ಸಾಮಾನ್ಯ ಜನರ ಮನೆ ಬಾಗಿಲಿಗೆ ತರುವ ವೇದಿಕೆಯಾಗಿದೆ.***

ವಾರ್ಡ್ ಸಮಿತಿಗಳನ್ನು ಆಡಳಿತದ ನಾಲ್ಕನೇ ಹಂತವೆಂದು ಪರಿಗಣಿಸಲಾಗುತ್ತದೆ, ಇದು ನಾಗರಿಕರಿಗೆ 'ಪ್ರಥಮ ಹಂತದ' ಪ್ರಜಾಪ್ರಭುತ್ವವನ್ನು ಖಾತ್ರಿಪಡಿಸುತ್ತದೆ. ಇವು ಒಳಗೊಳ್ಳುವಿಕೆಯ ಮತ್ತು ಸಹಯೋಗದ ವೇದಿಕೆಗಳಾಗಿ, ವಾರ್ಡ್ ಸಮಿತಿಗಳು ನಾಗರಿಕ ಸೌಕರ್ಯಗಳಿಗೆ ಸಂಬಂಧಿಸಿದ ಸರಳ ದೈನಂದಿನ ವಿಷಯಗಳನ್ನು ಪರಿಹರಿಸುವ ಸಾಮರ್ಥ್ಯವನ್ನು ಹೊಂದಿವೆ. ಹವಾಮಾನ ಬದಲಾವಣೆ, ಸಾರ್ವಜನಿಕ ಆರೋಗ್ಯ, ಮಹಿಳಾ ಸುರಕ್ಷತೆ ಮತ್ತು ಭವಿಷ್ಯಕ್ಕಾಗಿ ವಾಸಯೋಗ್ಯ ಆವಾಸಸ್ಥಾನಗಳಂತಹ 21 ನೇ ಶತಮಾನದ ನಗರಗಳ ಕಠಿಣ ಸಮಸ್ಯೆಗಳಿಗೆ ಹೆಚ್ಚು ಅಗತ್ಯವಿರುವ ತಳಮಟ್ಟದ ಸಂಪರ್ಕವನ್ನು ಒದಗಿಸುತ್ತದೆ.

ವಾರ್ಡ್ ಸಮಿತಿಯು ನಾಗರಿಕರು ಮತ್ತು ಅಧಿಕಾರಿಗಳನ್ನು ಒಟ್ಟಿಗೆ ಸೇರಿಸುವ ವೇದಿಕೆಯಾಗಿದೆ, ಅದು ನಿಮ್ಮಂತಹ ಹಾಗು ನನ್ನಹಂತಹ ಸಾಮಾನ್ಯ ವ್ಯಕ್ತಿಗಳಿಗೆ ತಮ್ಮ ನೆರೆಹೊರೆಯಲ್ಲಿನ ಸಮಸ್ಯೆಗಳನ್ನು ನಿರ್ವಹಿಸುವ ಮತ್ತು ಅಭಿವೃದ್ಧಿ ಪಡಿಸಲು ಚರ್ಚೆಗಳನ್ನು ನಡೆಸುವ ಅವಕಾಶ ನೀಡುತ್ತದೆ. ಇದು ನಿಮ್ಮ ನೆರೆಹೊರೆಗಳು ಮತ್ತು ನಮ್ಮ ನಗರಗಳ ಉತ್ತಮ ಭವಿಷ್ಯವನ್ನು ನಿರ್ಮಿಸಲು ಬರುವ ಸವಾಲುಗಳನ್ನು ಎದುರಿಸುವುದಕ್ಕೆ ಸಹಾಯ ಮಾಡುವುದಲ್ಲದೆ ನಾಗರಿಕರನ್ನು ಸ್ಥಳೀಯಮಟ್ಟದಲ್ಲಿ ಸಕ್ರಿಯವಾಗಿ ಭಾಗವಹಿಸುವುದಕ್ಕೂ ಪ್ರೋತ್ಸಾಹ ನೀಡುತ್ತದೆ

**ಈ ಅಧ್ಯಾಯದಲ್ಲಿ, ನಾವು ತಿಳಿದುಕೊಳ್ಳುವ ವಿಷಯಗಳೆಂದರೆ:**

**01** ವಾರ್ಡ್ ಸಮಿತಿಗಳ ಸಂರಚನೆ ಹೇಗಿರುತ್ತದೆ



**02** ವಾರ್ಡ್ ಸಮಿತಿ ಸದಸ್ಯರ ಪಾತ್ರಗಳು ಮತ್ತು ಜವಾಬ್ದಾರಿಗಳು



**03** ಬದಲಾವಣೆಯನ್ನು ತರಲು ನೀವು ಅವರೊಂದಿಗೆ ಹೇಗೆ ತೊಡಗಿಸಿಕೊಳ್ಳಬಹುದು



ಜಗತ್ತಿನಲ್ಲಿ ನೀವು ನೋಡಲು ಬಯಸುವ ಬದಲಾವಣೆ,
ನಿಮ್ಮಿಂದಲೇ ಪ್ರಾರಂಭವಾಗಲಿ

**ಮಹಾತ್ಮ ಗಾಂಧಿ**



## 5.1 ವಾರ್ಡ್ ಸಮಿತಿಗಳು ಏಕೆ ಪ್ರಮುಖವಾಗಿವೆ?

ನಮ್ಮೆಲರಿಗೂ ತಿಳಿದಿರುವಂತೆ ನಮ್ಮಲ್ಲಿ ಅನೇಕರು - ನಿರಾಸಕ್ತ ನಾಗರಿಕರಾದ ನ್ಯಾನ್ಸಿಯವರಂತೆ ನಮ್ಮ ನಗರದ ಪರಿಸ್ಥಿತಯ ಬಗೆ ಅಸಮಾಧಾನ ಹೊಂದಿದ್ದು, ಅದನ್ನು ಸರಿಪಡಿಸಬೇಕಾದ ಜವಾಬ್ದಾರಿ ಸರ್ಕಾರದ್ದಾಗಿದ್ದು ಮತ್ತು ಸರ್ಕಾರವೇ ಇದನೆಲ್ಲ ಸರಿಪಡಿಸಬೇಕೆಂದು ದೃಢವಾಗಿ ನಂಬಿರುತ್ತೇವೆ.






### ನಿಮಗೊಂದು ಪ್ರಶ್ನೆ?

ವಿಷಯಗಳನ್ನು ಸುಧಾರಿಸಲು ನನಿಮಗಿಂತ ಯಾರು ಹೆಚ್ಚು ಪ್ರೇರಿತರಾಗಬೇಕು? ನೆರೆಹೊರೆಯಲ್ಲಾಗುವ ಪ್ರತಿಯೊಂದು ಬದಲಾವಣೆಯಿಂದ ನೇರವಾಗಿ ಯಾರು ಪ್ರಭಾವಿತರಾಗುವುದು ನೀವೇ ಅಲ್ಲವೇ? ಅಥವಾ ನಿಮ್ಮ ಪ್ರದೇಶದಲ್ಲಿ ನಡೆಯುತ್ತಿರುವ ಘಟನೆಗಳಿಂದ ದೂರವಿರುವ ಸರ್ಕಾರಿ ಅಧಿಕಾರಿಯೇ?

ವಾರ್ಡ್ ಸಮಿತಿಗಳು (WC) ನಾಗರಿಕರಿಗೆ ತಮ್ಮ ನೆರೆಹೊರೆಯ ಜ್ಞಾನವನ್ನು ಪರಿಣಾಮಕಾರಿಯಾದ ಬದಲಾವಣೆಗೆ ಬಳಸಿಕೊಳ್ಳಲು ಅವಕಾಶವನ್ನು ನೀಡುತ್ತವೆ. ನಗರ ಸರ್ಕಾರಗಳ ಜೊತೆ ಕೈ ಜೋಡಿಸಿ ಸಮಸ್ಯೆಗಳನ್ನು ಪರಿಹರಿಸುವ ಅವಕಾಶವನ್ನು ನೀಡುವುದಲ್ಲದೆ, ನಾಗರಿಕರ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು, ನಗರದ ಅಭಿವೃದಿಗಾಗಿ ಯೋಜನೆಗಳನ್ನು ರೂಪಿಸಲು ಸಹ ಒಂದು ಅವಕಾಶವನ್ನು ನೀಡುತ್ತದೆ. ನಮ್ಮ ನಗರಗಳ ಬೆಳವಣಿಗೆಯು ಅವುಗಳನ್ನು ನಿರ್ವಹಿಸುವ ಸರ್ಕಾರದ ಸಾಮರ್ಥ್ಯವನ್ನು ಮೀರಿಸುತ್ತಿರುವ ಸಂದರ್ಭದಲ್ಲಿ, ವಿಕೇಂದ್ರೀಕೃತ ಆಡಳಿತವನ್ನು ಬಲಪಡಿಸುವ ಕಾರ್ಯವನ್ನು , ವಾರ್ಡ್ ಸಮಿತಿಗಳು ಮಾಡುವುದು ಅತ್ಯಂತ ಅವಶ್ಯಕವಾದುದು.



## ವಾರ್ಡ್ ಸಮಿತಿಗಳು:


ಪಾರದರ್ಶಕತೆಯನ್ನು ಉತ್ತೇಜಿಸುತ್ತವೆ .


ಹೊಣೆಗಾರಿಕೆಯನ್ನು ಖಚಿತಪಡಿಸುತ್ತವೆ.


ಸಹಭಾಗಿತ್ವದ ಪ್ರಜಾಪ್ರಭುತ್ವದ ಮೂಲಕ ನಿರ್ಧಾರ ತೆಗೆದುಕೊಳ್ಳುವುದಕ್ಕೆ ಆದ್ಯತೆ ನೀಡುತ್ತವೆ.


ತನ್ನ ಕಾರ್ಯವೈಖರಿಯ ವಿನ್ಯಾಸದ ಮೂಲಕ ಎಲ್ಲರ ಭಾಗವಹಿಸುವಿಕೆಯನ್ನು ಪ್ರೋತ್ಸಾಹಿಸುತ್ತವೆ.


ನಗರದ ತಳಮಟ್ಟದ ಯೋಜನೆ ಮತ್ತು ಬಜೆಟನ್ನು ಉತ್ತಮಗೊಳಿಸುತ್ತವೆ.


ಸ್ಥಳೀಯ ಸಮಸ್ಯೆಗಳಿಗೆ ಸ್ಥಳೀಯವಾಗಿಯೆ ಪರಿಹಾರಗಳನ್ನು ಪ್ರತಿಪಾದಿಸುತ್ತವೆ.


ನಗರದ ಆಡಳಿತವನ್ನು ನಾಗರಿಕರ ಮನೆ ಬಾಗಿಲಿಗೆ ತೆಗೆದುಕೊಂಡು ಬರುತ್ತವೆ.

### ಯಾವುದೇ ಎರಡು ವಾರ್ಡ್ ಒಂದೇ ರೀತಿ ಇರುವುದಿಲ್ಲ

ಯಾವುದೇ ಎರಡು ನಗರಗಳು ಅಥವಾ ಬೇರೆ ಬೇರೆ ರಾಜ್ಯಗಳು ಒಂದೇ ರೀತಿ ಇರುವುದಿಲ್ಲ. ಗಾತ್ರ, ಸ್ಥಳ ಮತ್ತು ಜನಸಂಖ್ಯೆಯು ಪ್ರತಿ ವಾರ್ಡಿಗೆ ವಿವಿಧ ಸಮಸ್ಯೆಗಳನ್ನು ಸೃಷ್ಟಿಸುತ್ತದೆ. ಒಂದೇ ಸ್ಥಿರವಾದ ಪರಿಹಾರ ಎಲ್ಲ ಸಮಸ್ಯೆಗಳಿಗೆ ಇರುವುದಿಲ್ಲ. ಆಯಾ ರಾಜ್ಯಗಳ ಕಾನೂನುಗಳನುಸಾರ ವಾರ್ಡ್ ಸಮಿತಿಗಳ ಸಂಯೋಜನೆ, ಕಾರ್ಯಗಳು ಮತ್ತು ಜವಾಬ್ದಾರಿಗಳು ನಿಗದಿಪಡಿಸಲಾಗಿರುತ್ತದೆ, ಅಂದರೆ ರಾಜ್ಯದಿಂದ ರಾಜ್ಯಕ್ಕೆ ವಿಭಿನ್ನವಾಗಿರುತ್ತದೆ.

## 5.2 ವಾರ್ಡ್ ಸಮಿತಿಯು ಯಾವ ವಿಷಯಗಳ ಕುರಿತು ಮೇಲ್ವಿಚಾರಣೆ ಮಾಡುತ್ತದೆ?

ನಾಗರಿಕರು ಮತ್ತು ಸ್ಥಳೀಯ ಸರ್ಕಾರವು ಈ ಕೆಳಗಿನ ಸಮಸ್ಯೆಗಳ ಮೇಲೆ ಒಟ್ಟಾಗಿ ಕೆಲಸ ಮಾಡಲು ಸಹಕರಿಸುವ ವೇದಿಕೆ ವಾರ್ಡ್ ಸಮಿತಿಗಳಿಗಿವೆ:


ಸಾರ್ವಜನಿಕ ಮೂಲಸೌಕರ್ಯ


ಘನ ತ್ಯಾಜ್ಯ ನಿರ್ವಹಣೆ


ನೈರ್ಮಲ್ಯ


ನೀರು


ಸಾರ್ವಜನಿಕ ಆರೋಗ್ಯ


ಆಯವ್ಯಯ ಮತ್ತು ಆದಾಯ

ಗಮನಿಸಿ, ಮೇಲಿನ ಪಟ್ಟಿಯು ರಾಜ್ಯ ಮತ್ತು ನಗರ ಕಾನೂನುಗಳನ್ನು ಅವಲಂಬಿಸಿ ಬೇರೆ ಬೇರೆ ವಾರ್ಡ್ ಸಮಿತಿಗಳಿಗೆ ವಿಭಿನ್ನವಾಗಿರಬಹುದು.

# ನಿಮಗಿದು ಗೊತ್ತೇ?

ವಿವಿಧ ಸರ್ಕಾರಿ ಇಲಾಖೆಗಳ ಮತ್ತು ವಿವಿಧ ಪೌರ ಸಂಸ್ಥೆಗಳ ಅಧಿಕಾರಿಗಳು (ವಿದ್ಯುತ್, ನೀರು ಸರಬರಾಜು, ಪೊಲೀಸ್, ಇತ್ಯಾದಿ) ಬೆಂಗಳೂರಿನಲ್ಲಿ ನಡೆಯುವ ವಾರ್ಡ್ ಸಮಿತಿ ಸಭೆಗಳಲ್ಲಿ ಭಾಗವಹಿಸುತ್ತಾರೆ. ಇದರಿಂದ,  ನಾಗರಿಕರಿಗೆ ಒಂದೇ ಸ್ಥಳದಲ್ಲಿ ಮತ್ತು ಒಂದೇ ಸಮಯದಲ್ಲಿ ಅನೇಕ ಇಲಾಖೆಗಳೊಂದಿಗೆ ಸಂಪರ್ಕ ಬೆಳಸಲು ಸುಲಭವಾಗುತ್ತದೆ.

## ಬೆಂಗಳೂರಿನ ವಾರ್ಡನಲ್ಲಿನ ಬದುಕಿನ ಒಂದು ಕಿರುನೋಟ



# 5.3 ಯಶಸ್ಸಿನ ಕಥೆ

## ಶ್ರೀಮತಿ ಪೂಂಗೊತ್ತೈ ಅವರ ಪ್ರಯಾಣ: ಆಸಕ್ತ ನಾಗರಿಕರಿಂದ ಸಕ್ರಿಯ ನಾಗರಿಕರಾಗುವ ಕಡೆ





ಎಲ್ಲರಂತೆಯೇ, ಶ್ರೀಮತಿ ಪೂಂಗೊತ್ತೈ ಕೂಡ ತಾವು ನೋಡುವ ದೈನಂದಿನ ಸಮಸ್ಯೆಗಳನ್ನು ಹೇಗೆ ಪರಿಹರಿಸುವುದು ಎಂಬ ಸಂದಿಗ್ಧತೆಯನ್ನು ಎದುರಿಸಿದರು: ಇದಕ್ಕೆ ಮುಖ್ಯ ಕಾರಣ, ಸಮಸ್ಯೆಗಳನ್ನು ಪರಿಹರಿಸುವುದಕ್ಕೆ ಬೇಕಾದ ಮಾಹಿತಿ ಮತ್ತು ಸಲಹೆಗಳ ಕೊರತೆ.

**"ನಾನು ಚಲಿಸುವಾಗ ಅಥವಾ ವಾಹನ ಚಾಲನೆಯಲ್ಲಿದ್ದಾಗ ಕಳಪೆ ರಸ್ತೆಯ ಗುಣಮಟ್ಟ, ಒಳಚರಂಡಿ ಮತ್ತು ನೈರ್ಮಲ್ಯದಂತಹ ಸಮಸ್ಯೆಗಳನ್ನು ನಾನು ನೋಡುತ್ತಿದ್ದೆ, ಆದರೆ ಆ ಕ್ಷಣದಲ್ಲಿ ಅದನ್ನು ಪರಿಹರಿಸಲು ಸಮಯವಿರಲಿಲ್ಲ. ನಾವೆಲ್ಲರೂ ಎದುರಿಸುವ ಒಂದು ಸವಾಲು ಎಂದರೆ ನಾವು ಈ ಸಮಸ್ಯೆಗಳನ್ನು ಹೇಗೆ ಪರಿಹರಿಸುವುದೆಂದು?"**

ಶ್ರೀಮತಿ ಪೂಂಗೊತ್ತೈ ತಮ್ಮ ನೆರೆಹೊರೆಯವರನ್ನು ಸಂಪರ್ಕಿಸಿ, ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಕ್ಕೆ ಸೇರಿದರು. ಇಲ್ಲಿ ಅವರು ವಾರ್ಡ್ ಸಮಿತಿಗಳ ಬಗ್ಗೆ ತಿಳಿದುಕೊಂಡರು. ಸಕ್ರಿಯ ಪ್ರಜೆಯಾಗವ ನಿಲುವನ್ನು ತೆಗುದುಕೊಂಡ ಮೇಲೆ ಹಿಂತಿರುಗಿ ನೋಡುವ ಪ್ರಶ್ನೆಯೇ ಇಲ್ಲ ಎನುತ್ತಾರೆ ಅವರು!

ವಾರ್ಡ್ ಸಮಿತಿ ಸಭೆಗಳ ಮೂಲಕ, ಶ್ರೀಮತಿ ಪೂಂಗೋತ್ತೈ ಮತ್ತು ಅವರ ನೆರೆಹೊರೆಯವರು ತಮ್ಮ ವಾರ್ಡಿನ ಸಮಸ್ಯೆಗಳನ್ನು ಮತ್ತು ಅಗತ್ಯಗಳನ್ನು ಪರಿಹರಿಸುವಲ್ಲಿ ಯಶಸ್ವಿಯಾಗಿದ್ದಾರೆ.



ಅವರ ಅನೇಕ ಸಾಧನೆಗಳಲ್ಲಿ ಬೆಂಗಳೂರಿನ ನೈಸ್ ರಸ್ತೆಯ ನಾಲೆಯಲ್ಲಿ ಮೋರಿ (ಕಲ್ವರ್ಟ್) ನಿರ್ಮಿಸಿದ್ದು ಒಂದು ಉದಾಹರಣೆಯಾಗಿದೆ. "ನಾವು ವಾರ್ಡ್ ಸಮಿತಿಯ ಮೂಲಕ ಮೋರಿಯ ಅಗತ್ಯತೆಯನ್ನು ಚರ್ಚಿಸಿದೆವು. ನಂತರ ಅದರ ಪರಿಹಾರಕ್ಕೆ ಬಜೆಟನ್ನು ನಿಗದಿಪಡಿಸಿ, ಅದನ್ನು ನಿರ್ಮಿಸಲಾಯಿತು. ನಾವು ಈ ಸ್ಥಳದಲ್ಲಿ ಮಳೆನೀರು ಕೊಯ್ಲು ಹೊಂಡವನ್ನು ಒಳಚರಂಡಿ ವ್ಯವಸ್ಥೆಗಳಲ್ಲಿ ಸ್ಥಾಪಿಸುವಲ್ಲಿ ಸಹ ಯಶಸ್ವಿಯಾಗಿದ್ದೇವೆ."

ಶ್ರೀಮತಿ ಪೂಂಗೊತ್ತೈ ಅವರು ಈಗ ವಾರ್ಡ್ ಸಮಿತಿಗಳ ಪ್ರತಿಪಾದಕರಾಗಿದ್ದಾರೆ. ಈ ಮೊದಲು ಅವರು ಬಿಬಿಎಂಪಿಯ ಕುಂದುಕೊರತೆ ಪರಿಹಾರ ವೇದಿಕೆಯಾದ "ಸಹಾಯ"ವನ್ನು(Sahaaya) ಬಳಸಿದ್ದರು. "ನಾವು ಸಂಸದರು ಮತ್ತು ಶಾಸಕರನ್ನು ಸಹ ಸಂಪರ್ಕಿಸಲು ಪ್ರಯತ್ನಿಸಿದ್ದೇವೆ, ಆದರೆ ನಮಗೆ ವಾರ್ಡ್ ಸಮಿತಿಗಳು ಹೆಚ್ಚು ಪರಿಣಾಮಕಾರಿಯಾಗಿವೆ ಎಂದೆನಿಸುತ್ತದೆ. ನೀವು ನೇರವಾಗಿ ಆಯಾ ಸಮಸ್ಯೆಗಳಿಗೆ ಸಂಭಂದ ಪಟ್ಟ ಅಧಿಕಾರಿಗಳನ್ನು ಭೇಟಿ ಮಾಡಿ ಪರಿಹಾರವನ್ನು ಕಂಡು ಹಿಡಿದುಕೊಳ್ಳಬಹುದು."

ನಾಗರಿಕರ ಸಮಸ್ಯೆಗಳ ಪರಿಹಾರಗಳಲ್ಲಿ ತೊಡಗಿಸಿಕೊಳ್ಳಲು ಬಯಸುವವರಿಗೆ ಅವರು ಮಾಡುವ ಸಲಹೆ ಏನು? "ಮೊದಲು, ನಿಮ್ಮ ನೆರೆಹೊರೆಯವರು ಮತ್ತು ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಗಳೊಂದಿಗೆ ಸಂಪರ್ಕ ಬೆಳಿಸಿ ಮತ್ತು ಅದರ ಸಭೆಗಳಲ್ಲಿ ಭಾಗವಹಿಸಲು ಪ್ರಾರಂಭಿಸಿ. ನೀವು ನಿಮ್ಮ ವಾರ್ಡ್ ಕಚೇರಿಗೆ ಭೇಟಿ ನೀಡಿ, ನಿಮ್ಮನ್ನು ನೀವೇ ಸ್ವತಃ ಪರಿಚಯಿಸಿಕೊಳ್ಳುವ ಮೂಲಕ ನೇರವಾಗಿ ವಾರ್ಡ್ ಅಧಿಕಾರಿಗಳೊಂದಿಗೆ ಮಾತನಾಡಬಹುದು. ಇದೆ, ನಿಮ್ಮ ನೆರೆಹೊರೆಯ ಸಮಸ್ಯೆಗಳನ್ನು ಪರಿಹರಿಸುವ ಏಕೈಕ ಮಾರ್ಗವಾಗಿದೆ."

## ಯೋಗಕ್ಷೇಮ ಸಲಹೆಗಳು



**ನಿಮ್ಮ ನೆರೆಹೊರೆಯ ಮೂಲಸೌಕರ್ಯ ಯೋಜನೆಗಳಲ್ಲಿ ಪರಿಸರ ಸ್ನೇಹಿ ವಸ್ತುಗಳನ್ನು ಮಾತ್ರ ಬಳಸಲು ಬಯಸುವಿರಾ? ಹಾಗಾದರೆ, ನಿಮ್ಮ ವಾರ್ಡ್ ಸಮಿತಿ ಸಭೆಯ ಗಮನಕ್ಕೆ ತನ್ನಿ. ನಿಮ್ಮ ಪ್ರದೇಶದಲ್ಲಿ ತ್ಯಾಜ್ಯ ವಿಂಗಡಣೆಯು ಅಪೇಕ್ಷಿತ ಮಟ್ಟದಲ್ಲಿ ಇಲ್ಲ ಎಂದು ಭಾವಿಸುತ್ತೀರಾ? ವಾರ್ಡ್ ಸಮಿತಿಗಳು ಒಂದು ಸಾಂಸ್ಥಿಕ ವೇದಿಕೆಯಾಗಿದ್ದು, ಹಸಿರು ನೆರೆಹೊರೆಗಳು ಮತ್ತು ನಗರಗಳನ್ನು ನಿರ್ಮಿಸುವ ಕಾರ್ಯದಲ್ಲಿ ಈ ವಾರ್ಡ್ ಸಮಿತಿಗಳು ಒಂದು ಪ್ರಬಲ ಸಾಧನವೆಂದು ಹೇಳಬಹುದು.**

## 5.4 ವಾರ್ಡ್ ಸಮಿತಿಯ ಕಾರ್ಯಗಳೇನು?

ವಾರ್ಡ್ ಸಮಿತಿಗಳು ಸಾಮಾನ್ಯವಾಗಿ ಕುಂದುಕೊರತೆ ಪರಿಹಾರದ ವೇದಿಕೆಗಳೆಂದೇ ತಪ್ಪಾಗಿ ಗುರುತಿಸಲ್ಪಡುತ್ತವೆ, ಆದರೆ ಅವುಗಳ ಕಾರ್ಯ ವ್ಯಾಪ್ತಿಯು ಇದನ್ನು ಮೀರಿದೆ. ವಾರ್ಡ್ ಸಮಿತಿಗಳ ಕಾರ್ಯಗಳು ಮತ್ತು ಜವಾಬ್ದಾರಿಗಳು ರಾಜ್ಯದಿಂದ ರಾಜ್ಯಕ್ಕೆ ಬದಲಾದರು, ಅವುಗಳ ಪ್ರಮುಖ ಕಾರ್ಯಗಳು ಇಂತಿವೆ

**01** ವಾರ್ಷಿಕ ವಾರ್ಡ್ ಯೋಜನೆಗಳು ಮತ್ತು ವಾರ್ಡ್ ಬಜೆಟನ್ನು ಸಿದ್ಧಪಡಿಸುವುದು

**02** ನಾಗರಿಕರ ಅಗತ್ಯತೆಗಳ ಆಧಾರದ ಮೇಲೆ ಅಭಿವೃದ್ಧಿ ಕಾರ್ಯಗಳಿಗೆ ಆದ್ಯತೆಯನ್ನು ಸೂಚಿಸುವುದು

**03** ಘನ ತ್ಯಾಜ್ಯ ನಿರ್ವಹಣೆ ಮತ್ತು ನೈರ್ಮಲ್ಯದ ಮೇಲ್ವಿಚಾರಣೆ

**04** ಉದ್ಯಾನವನಗಳು ಮತ್ತು ಬೀದಿದೀಪಗಳ ನಿರ್ವಹಣೆಯ ಮೇಲ್ವಿಚಾರಣೆ

**05** ಸರ್ಕಾರದ ಯೋಜನೆಗಳ ಅನುಷ್ಠಾನಕ್ಕೆ ನೆರವು ನೀಡುವುದು

**06** ಪೌರ ಯೋಜನೆಗಳು ವಾರ್ಡಗಳ ಅವಶ್ಯಕತೆಗಳನ್ನು ಪ್ರತಿಬಿಂಬಿಸುತ್ತವೆಯೇ ಎಂಬುದನ್ನು ದೃಢೀಕರಿಸುವುದು

**07** ಪೂರ್ಣಗೊಂಡ ಯೋಜನೆಗಳ ಗುಣಮಟ್ಟದ ಬಗ್ಗೆ ಸರ್ಕಾರಕ್ಕೆ ಪ್ರತಿಕ್ರಿಯೆ ನೀಡುವುದು

**08** ಸಮಾಜ ಕಲ್ಯಾಣ ಕಾರ್ಯಕ್ರಮಗಳಿಗೆ ನಾಗರಿಕರನ್ನು ಸಜ್ಜುಗೊಳಿಸುವುದು

**09** ವಾರ್ಡಿನ ವಿವಿಧ ಗುಂಪುಗಳ ನಡುವಿನ ಸಾಮರಸ್ಯ ಮತ್ತು ಏಕತೆಯನ್ನು ಉತ್ತೇಜಿಸುವುದು.

*ಮೂಲ: ಮಾದರಿ ನಗರ ರಾಜ್ ಮಸೂದೆ, ಕೇಂದ್ರ ನಗರ ವ್ಯವಹಾರಗಳ ಸಚಿವಾಲಯ*

## 5.5 ವಾರ್ಡ್ ಸಮಿತಿಗಳಿಗೆ ಕಾನೂನಿನ ಆಧಾರವೇನು?

ವಾರ್ಡ್ ಸಮಿತಿಗಳು ಸಂವಿಧಾನಾತ್ಮಕವಾಗಿ ಕಡ್ಡಾಯವಾಗಿ ರಚಿಸಲ್ಪಟ್ಟ ನಾಗರಿಕ ವೇದಿಕೆಯಾಗಿವೆ.

ನಗರಾಡಳಿತದ ವಿಕೇಂದ್ರೀಕರಣವನ್ನು 74 ನೇ ಸಂವಿಧಾನಿಕ ತಿದ್ದುಪಡಿ ಕಾಯಿದೆಯಲ್ಲಿ ಪ್ರಸ್ತಾಪಿಸಲಾಗಿದೆ ಮತ್ತು ಮೂರು ಲಕ್ಷ ಅಥವಾ ಅದಕ್ಕಿಂತ ಹೆಚ್ಚಿನ ಜನಸಂಖ್ಯೆಯಿರುವ ನಗರ ಸರ್ಕಾರಗಳಲ್ಲಿ ವಾರ್ಡ್ ಸಮಿತಿಗಳನ್ನು ರಚಿಸಬೇಕೆಂದು 243S ಅನುಚ್ಛೇದ ಹೇಳುತ್ತದೆ.



## 5.6 ವಾರ್ಡ್ ಸಮಿತಿಗಳನ್ನು ಹೇಗೆ ರಚಿಸಲಾಗಿದೆ*?

- ಕೌನ್ಸಿಲರ್ ಗಳಿಗೆ ಚುನಾವಣೆ ನಡೆಯುತ್ತದೆ
- ನಗರ ಸಭೆಯ ಪರಿಷತ್ತನ್ನು (ಕೌನ್ಸಿಲ್) ರಚಿಸಲಾಗುತ್ತದೆ
- ಪಾಲಿಕೆಯ ಆಯುಕ್ತರು ಕೌನ್ಸಿಲ್ ನ ಮೊದಲ ಸಭೆಯನ್ನು ನಡೆಸುತ್ತಾರೆ
- ವಾರ್ಡ್ ಸಮಿತಿ ರಚನೆ ಪ್ರಕ್ರಿಯೆ ಆರಂಭವಾಗುತ್ತದೆ.
- ವಾರ್ಡ್ ಸಮಿತಿ ಸದಸ್ಯರ ನಾಮನಿರ್ದೇಶನ/ಚುನಾವಣೆ ಮಾಡಲಾಗುತ್ತದೆ, ನಂತರ ಕೊನೆಯ ತೀರ್ಮಾನ ತೆಗುದುಕೊಂಡು, ಅವರ ಹೆಸರುಗಳನ್ನು ಘೋಷಿಸಲಾಗುತ್ತದೆ
- ಆಯುಕ್ತರು ಎಲ್ಲ ವಾರ್ಡ್ ಸಮಿತಿಗಳಿಗೆ ಕಾರ್ಯದರ್ಶಿಗಳನ್ನು ನೇಮಿಸುತ್ತಾರೆ
- ನಗರದಲ್ಲಿ ವಾರ್ಡ್ ಸಮಿತಿಗಳನ್ನು ರಚಿಸಲಾಗುತ್ತದೆ




* ಈ ಪ್ರಕ್ರಿಯೆಯು ವಿವರಣಾತ್ಮಕವಾಗಿದ್ದು ರಾಜ್ಯದಿಂದ ರಾಜ್ಯಕ್ಕೆ ಬದಲಾಗುತ್ತದೆ.

## 5.7 ವಾರ್ಡ್ ಸಮಿತಿಗಳನ್ನು ರಚಿಸುವ ಜವಾಬ್ದಾರಿ ಯಾರದ್ದು?

ರಾಜ್ಯ ಸರ್ಕಾರವು ಪುರಸಭೆಯ ಕಾನೂನನ್ನು ಅಂಗೀಕರಿಸಿದ ನಂತರ, ನಿಮ್ಮ ನಗರದ ಸರ್ಕಾರವು ವಾರ್ಡ್ ಸಮಿತಿಗಳ ಸ್ಥಾಪನೆಯ ಜವಾಬ್ದಾರಿಯನ್ನು ಹೊಂದಿರುತ್ತದೆ.

## 5.8 ವಾರ್ಡ್ ಸಮಿತಿಯ ಸಾಂಸ್ಥಿಕ ರಚನೆ ಹೇಗಿದೆ?

ವಾರ್ಡ್ ಸಮಿತಿ ಸಂರಚನೆಯು ಈ ಕೆಳಗಿನಂತಿದೆ:




## 5.9 ವಾರ್ಡ್ ಸಮಿತಿಯ ಸಂಯೋಜನೆ ಏನು?

ವಾರ್ಡ್ ಸಮಿತಿಗಳನ್ನು ರಚಿಸಲು ರಾಜ್ಯ ಸರ್ಕಾರವು ಮಹಾನಗರ ಪಾಲಿಕೆ/ನಗರ ಸಭೆ/ಪುರಸಭೆಯ ಕಾನೂನನ್ನು ಅಂಗೀಕರಿಸಿ, ಅದರ ರಚನೆಯ ನಿಯಮಗಳನ್ನು ಅಧಿಸೂಚನೆಯಲ್ಲಿ ಹೊರಡಿಸಬೇಕು. ಇದು ಸಂಯೋಜನೆಯ ಚೌಕಟ್ಟು, ಪ್ರತಿನಿಧಿ, ಸಭೆಗಳ ಆವರ್ತನ, ಸ್ಥಳ ಇತ್ಯಾದಿಗಳನ್ನು ಒಳಗೊಂಡಿರುತ್ತದೆ ಮತ್ತು ಇದು ರಾಜ್ಯದಿಂದ ರಾಜ್ಯಕ್ಕೆ ಬದಲಾಗುತ್ತದೆ.

ವಾರ್ಡ್ ಸಮಿತಿಗಳ ರಚನೆಯು ಸಮಾಜದ ಎಲ್ಲಾ ವರ್ಗಗಳನ್ನು ಪ್ರತಿನಿಧಿಸುವ ನಾಗರಿಕರನ್ನು ಒಳಗೊಂಡಿರುತ್ತದೆ, ಆದರೆ, ಅವುಗಳ ಸಂಯೋಜನೆಯು ರಾಜ್ಯದ ಕಾನೂನುಗಳನ್ನು ಅವಲಂಬಿಸಿರುತ್ತದೆ. ಅಲ್ಲದೆ, ಬೇರೆ ಬೇರೆ ನಗರ ಸ್ಥಳೀಯ ಸಂಸ್ಥೆಗಳ(ದೊಡ್ಡ ಮತ್ತು ಚಿಕ್ಕ ನಗರಗಳು) ನಿಯಮಗಳು ಒಂದೇ ರೀತಿ ಇರುವುದಿಲ್ಲ.

ಉದಾಹರಣೆಗೆ, ಕರ್ನಾಟಕದಲ್ಲಿ, ಮಹಾನಗರ ಪಾಲಿಕೆಗಳ ನಿಯಮಗಳನುಸಾರ ವಾರ್ಡ್ ಸಮಿತಿಗಳು ಈ ಕೆಳಗೆ ತಿಳಿಸಲಾದ ವರ್ಗಗಳ ನಾಗರಿಕ ಸದಸ್ಯರುಗಳನ್ನು ಒಳಗೊಂಡಿರುತ್ತದೆ:




## 5.10 ನಾನು ವಾರ್ಡ್ ಸಮಿತಿ ಸದಸ್ಯನಲ್ಲದಿದ್ದರೂ ವಾರ್ಡ್ ಸಮಿತಿ ಸಭೆಗಳಲ್ಲಿ ಭಾಗವಹಿಸಬಹುದೇ?

**ಹೌದು!**

**ಆಯಾ ರಾಜ್ಯದ ಕಾನೂನಿನ ನಿರ್ಬಂಧಗಳಿಗೆ ಒಳಪಟ್ಟು, ಸಾಮಾನ್ಯವಾಗಿ, ವಾರ್ಡಿನ ಎಲ್ಲಾ ನಿವಾಸಿಗಳು ವಾರ್ಡ್ ಸಮಿತಿ ಸಭೆಗಳಲ್ಲಿ ಭಾಗವಹಿಸಬಹುದು. ಪ್ರತಿಯೊಬ್ಬರೂ ಸಭೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಬೇಕು. ನೀವು ಎದುರಿಸುತ್ತಿರುವ ವಾರ್ಡಿಗೆ ಸಂಬಂಧಿಸಿದ ಸಮಸ್ಯೆಯ ಬಗ್ಗೆ ನಿಮ್ಮ ವಾರ್ಡ್ ಸಮಿತಿ ಸದಸ್ಯರನ್ನು ಸಂಪರ್ಕಿಸಬಹುದು ಮತ್ತು ಸಭೆಗಳ ಸಮಯದಲ್ಲಿ ಚರ್ಚಿಸಬಹುದು.**

## 5.11 ನನಗೀಗ ಸಂಪೂರ್ಣ ಮನವರಿಕೆಯಾಗಿದೆ, ಹಾಗಾದರೆ, ನಾನು ನನ್ನ ವಾರ್ಡಿನ ವಾರ್ಡ ಸಮಿತಿ ಸದಸ್ಯನಾಗುವುದು ಹೇಗೆ?

ನಿಮ್ಮ ನಗರ ಸರ್ಕಾರ ವಾರ್ಡ್ ಸಮಿತಿಗಳಿಗೆ ಅಧಿಸೂಚನೆಯನ್ನು ನೀಡಿದ ನಂತರ, ವಾರ್ಡ್ ಸಮಿತಿಯ ಸದಸ್ಯತ್ವ ಪಡೆಯಲು ಅರ್ಜಿಗಳನ್ನು ಕರೆಯಲಾಗುತ್ತದೆ. ವಾರ್ಡ್ ಸಮಿತಿ ಸದಸ್ಯರಾಗಲು, ಪಾಲಿಕೆಯು ವಾರ್ಡ್ ಸಮಿತಿ ಅರ್ಜಿಗಳನ್ನು ಆಹ್ವಾನಿಸಿದಾಗ ನಿಮಗೆ ಸಂಬಂಧಪಟ್ಟ ವರ್ಗದ ಆಧಾರದ ಮೇಲೆ ನೀವೇ ನಾಮನಿರ್ದೇಶನ ಮಾಡಿ, ಪುರಸಭೆಯ ಆಯುಕ್ತರಿಗೆ ನಾಮನಿರ್ದೇಶನ ಅರ್ಜಿ ಸಲ್ಲಿಸಬೇಕು.



ನೀವು ಯಾವ ವಾರ್ಡ್ ಸಮಿತಿಯ ಸದಸ್ಯತ್ವವನ್ನು ಬಯಸುತ್ತೀರೋ , ಆ ವಾರ್ಡಿನ  ನೋಂದಾಯಿತ ಮತದಾರರಾಗಿರಬೇಕು.

## ತೊಡಗಿಸಿಕೊಂಡ ನಾಗರಿಕ ತನ್ವಿರ್ ಹೇಳುತ್ತಾರೆ

ನಿಮ್ಮ ಅರ್ಜಿಯೊಂದಿಗೆ ನೀವು ಸಲ್ಲಿಸಬೇಕಾದ ದಾಖಲೆಗಳ ಪಟ್ಟಿಯು ರಾಜ್ಯದಿಂದ ರಾಜ್ಯಕ್ಕೆ ಬದಲಾಗುತ್ತದೆ. ಉದಾಹರಣೆಗೆ, ಕರ್ನಾಟಕದ ಕೆಲವು ನಗರಗಳಿಗೆ ಈ ಕೆಳಗಿನ ದಾಖಲೆಗಳ ಅಗತ್ಯವಿರುತ್ತವೆ:



**ಪಾಸ್ಪೋರ್ಟ್ ಅಳತೆಯ ಛಾಯಾ ಚಿತ್ರಗಳು**




**ಮತದಾರರ ಐಡಿ (EPIC ಸಂಖ್ಯೆ)**



**ಮತದಾರರ ಪಟ್ಟಿಯಲ್ಲಿ ಮತದಾರರೆಂದು ನೊಂದಾಯಿಸಲ್ಪಟ್ಟ ದಾಖಲೆ**




**ಮೀಸಲಾತಿ ಕೋರಿದರೆ ತಹಶೀಲ್ದಾರರು ನೀಡಿದ ಜಾತಿ ಪ್ರಮಾಣ ಪತ್ರವನ್ನು ಲಗತ್ತಿಸಬೇಕು**




**RWA/NGO ವರ್ಗದ ಅಡಿಯಲ್ಲಿ ಮೀಸಲಾತಿಯನ್ನು ಪಡೆಯಲಿಚ್ಛಿಸುವವರು, ಸಂಘದ ಅಧ್ಯಕ್ಷ/ಕಾರ್ಯದರ್ಶಿಯಿಂದ ಶಿಫಾರಸು ಪತ್ರ (NGO ನೋಂದಣಿಯ ಪ್ರತಿಯೊಂದಿಗೆ)**



**ಅನುಭವ ಅಥವಾ ಪ್ರಶಸ್ತಿಗಳ ಹೊಂದಿದಲ್ಲಿ, ಅದಕ್ಕೆ ಸಂಬಂಧಿಸಿದ ದಾಖಲೆಗಳು.**



# 5.12 ವಾರ್ಡ್ ಸಮಿತಿ vs ವಾರ್ಡ್ ಗಳ ಸಮಿತಿಗಳು vs ಏರಿಯಾ ಸಭೆಗಳು:





**ವಾರ್ಡ್ ಗಳ ಸಮಿತಿ:**

- ಎರಡು ಅಥವಾ ಮೂರು ವಾರ್ಡ್‌ಗಳ ಗುಂಪುಗಳು ಸೇರಿ ವಾರ್ಡ್‌ಗಳ ಸಮಿತಿಯಾಗುತ್ತದೆ.
- ಚುನಾಯಿತ ಪ್ರತಿನಿಧಿಗಳನ್ನು ಒಳಗೊಂಡಿರುತ್ತದೆ ಮತ್ತು ಸರ್ಕಾರೇತರ ಸಂಸ್ಥೆಗಳ ಪ್ರತಿನಿಧಿಗಳನ್ನು ನಾಮನಿರ್ದೇಶನ ಮಾಡಬಹುದು.
- ಬಹು ಕೌನ್ಸಿಲರ್ ವ್ಯವಸ್ಥೆ (ಒಂದೇ ವಾರ್ಡ್‌ನಲ್ಲಿ ಒಂದಕ್ಕಿಂತ ಹೆಚ್ಚು ಕೌನ್ಸಿಲರ್ ಗಳು ಇರಬಹುದು)
- ಯಾವುದಾದರು ಒಂದು ವಾರ್ಡಿನಿ ಕೌನ್ಸಿಲರ್ ಅಧ್ಯಕ್ಷರಾಗಿ ಆಯ್ಕೆಯಾಗುತ್ತಾರೆ.



**ವಾರ್ಡ್ ಸಮಿತಿ**

- ಪ್ರತಿ ವಾರ್ಡ್‌ಗೆ ಒಂದು ವಾರ್ಡ್ ಸಮಿತಿ.
- ವಾರ್ಡ್ ಸಮಿತಿ ಸದಸ್ಯರು (ಆ ವಾರ್ಡಿನ ನಾಗರಿಕರು) ಆ ವಾರ್ಡಿನ ಅಧ್ಯಕ್ಷರಾದ ಕೌನ್ಸಿಲರ್ ಗೆ ಸಹಾಯ ಮಾಡುತ್ತಾರೆ.



**ಏರಿಯಾ ಸಭೆಗಳು**

- ನಿರ್ದಿಷ್ಟವಾದ ಮತಗಟ್ಟೆಯ ಅಡಿಯಲ್ಲಿರುವ ನಿವಾಸಿಗಳು ಏರಿಯಾ ಸಭೆಯ ಸದಸ್ಯರಾಗಿರುತ್ತಾರೆ*
- ಪ್ರತಿ ಪ್ರದೇಶದಿಂದ 1 ಪ್ರತಿನಿಧಿಯನ್ನು ಏರಿಯಾ ಸಭೆಯ ಪ್ರತಿನಿಧಿಯಾಗಿ (ASR) ಆಯ್ಕೆ ಮಾಡಲಾಗುತ್ತದೆ.
- ASR ಸಾಮಾನ್ಯವಾಗಿ ವಾರ್ಡ್ ಸಮಿತಿಗಳಲ್ಲಿ ತಮ್ಮ ಪ್ರದೇಶವನ್ನು ಪ್ರತಿನಿಧಿಸುತ್ತಾರೆ.
- ರಾಜ್ಯದ ಕಾನೂನುಗಳನ್ನು ಅವಲಂಭಿಸಿ, ವಾರ್ಡ್ ಸಮಿತಿಗಳಲ್ಲಿ ಏರಿಯಾ ಸಭೆಗಳನ್ನು, ಏರಿಯಾ ಸಭೆ 1, 2 ಮುಂತಾದ ಹಲವು ಏರಿಯಾ ಸಭೆಗಳಾಗಿ ವಿಂಗಡಿಸಲಾಗಿರುತ್ತದೆ.

* ಒಂದು ವಾರ್ಡ್ ಅನೇಕ ಮತಗಟ್ಟೆಗಳನ್ನು ಒಳಗೊಂಡಿದೆ.

## 5.13 ವಾರ್ಡ್ ಸಮಿತಿ ಸದಸ್ಯನಾಗಿ ನನ್ನ ಹಕ್ಕುಗಳು ಮತ್ತು ಕರ್ತವ್ಯಗಳೇನು?

01



ವಾರ್ಡ್‌ಗಳಿಗೆ ಸಂಬಂಧಿಸಿದ ಯಾವುದೇ ವಿಷಯದ ಬಗ್ಗೆ (ಆಯವ್ಯಯಗಳ, ಹಂಚಿಕೆಗಳ ಮತ್ತು ತೆರಿಗೆಗಳ ಸಂಪೂರ್ಣ ಮಾಹಿತಿ ಸೇರಿದಂತೆ) ಸಂಬಂಧಿತ ಅಧಿಕಾರಿಗಳಿಂದ ಮಾಹಿತಿಯನ್ನು ಪಡೆಯಬಹುದು.

02



ನಿಮ್ಮ ವಾರ್ಡಿನ ವ್ಯಾಪ್ತಿಯಲ್ಲಿ ಬರುವ ಭೂ ಅಭಿವೃದ್ಧಿ ಮತ್ತು ವಲಯ ನಿಯಮಗಳಿಗೆ ಸಲಹೆ ನೀಡುವ ಹಕ್ಕು.



ಸದಸ್ಯರು ತಮ್ಮ ವಾರ್ಡಗಳಿಗೆ ನಗರ ಸರ್ಕಾರದಿಂದ ಆರ್ಥಿಕ ಮತ್ತು ಆಡಳಿತಾತ್ಮಕ ಬೆಂಬಲವನ್ನು ಪಡೆಯುವ ಹಕ್ಕನ್ನು ಸಹ ಹೊಂದಿರುತ್ತಾರೆ.

ವಾರ್ಡ್ ಸಮಿತಿಗಳು ಸ್ಥಳೀಯ ಅಭಿವೃದ್ಧಿಗಾಗಿ ವಾರ್ಡಿನ ಆದಾಯದ ಕೆಲವು ಭಾಗಗಳನ್ನು ಉಳಿಸಿಕೊಳ್ಳಬಹುದು. ಇದು ಆಯಾ ರಾಜ್ಯದ ಕಾನೂನುಗಳನ್ನು ಆಧರಿಸಿರುತ್ತದೆ

ಮಾದರಿ ನಗರ್ ರಾಜ್ ಮಸೂದೆಯಲ್ಲಿ ಇದನ್ನು ಶಿಫಾರಸು ಮಾಡಲಾಗಿದೆ. ಆದರೆ ಇದು ಸಂಪೂರ್ಣವಾಗಿ ಪ್ರತ್ಯೇಕ ರಾಜ್ಯಗಳ ವಿವೇಚನೆಗೆ ಒಳಪಟ್ಟಿರುತ್ತದೆ ಮತ್ತು ರಾಜ್ಯಗಳು ಅವರದೇ ಪ್ರತ್ಯೇಕ ನಿಯಮಗಳನ್ನು ಹೊಂದಬಹುದು.

## ನಿಮಗಿದು ಗೊತ್ತೇ?

- **ವಾರ್ಡ್ ಸಮಿತಿಗಳ ಅವಧಿಯು ಚುನಾಯಿತ ಪರಿಷತ್ ಅವಧಿಯೊಂದಿಗೆ ಸಹ-ವಿಸ್ತೃತವಾಗಿದೆ. (ಉದಾಹರಣೆ: ಕರ್ನಾಟಕ ಮಹಾನಗರ ಪಾಲಿಕೆಗಳ ಪರಿಷತ್ 5 ವರ್ಷ ಅವಧಿ ಹೊಂದಿರುವುದರಿಂದ ವಾರ್ಡ್ ಸಮಿತಿಗಳ ಅವಧಿಯೂ ಸಹ 5 ವರ್ಷ ಆಗಿರುತ್ತದೆ.)**
- **ವಾರ್ಡ್ ಕೌನ್ಸಿಲರ್ ನಗರಸಭೆಯಲ್ಲಿ ತಮ್ಮ ವಾರ್ಡನ್ನು ಪ್ರತಿನಿಧಿಸುತ್ತಾರೆ ಮತ್ತು ಸಮಿತಿಯ ಅಧ್ಯಕ್ಷರೂ ಸಹ ಆಗಿರುತ್ತಾರೆ.**
- **ಆಯುಕ್ತರಿಂದ ನೇಮಕಗೊಂಡ ನಗರಾಡಳಿತದ ಅಧಿಕಾರಿಯೊಬ್ಬರು ವಾರ್ಡ್ ಸಮಿತಿಯ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸುತ್ತಾರೆ. ಆದರೆ ವಾರ್ಡ್ ಸಮಿತಿಯ ನಿರ್ಧಾರಗಳಲ್ಲಿ ಅವರಿಗೆ ಮತದಾನದ ಅವಕಾಶವಿರುವುದಿಲ್ಲ.**

# 5.14 ವಾರ್ಡ್ ಸಮಿತಿ ಸಭೆಗಳು ಹೇಗೆ ನಡೆಯುತ್ತವೆ?

01




ಅಧ್ಯಕ್ಷರು ಮತ್ತು ವಾರ್ಡ್ ಸಮಿತಿ ಸದಸ್ಯರೊಂದಿಗೆ ಸಮಾಲೋಚಿಸಿ, ವಾರ್ಡ್ ಸಮಿತಿ ಸಭೆಯ ಕಾರ್ಯದರ್ಶಿ ಕಾರ್ಯಸೂಚಿಯನ್ನು ಪ್ರಕಟಿಸುತ್ತಾರೆ

02




ಸಭೆಯ ಸೂಚನೆಯನ್ನು ಕನಿಷ್ಠ ಒಂದು ವಾರದ ಮುಂಗಡವಾಗಿ ನೀಡಬೇಕು.

03




ವಾರ್ಡಿನಲ್ಲಿ ಇರುವ ಎಲ್ಲಾ ನಗರ ಸರ್ಕಾರಿ ಕಚೇರಿಗಳ ಸೂಚನಾ ಫಲಕಗಳಲ್ಲಿ ಸಭೆಯ ಪ್ರಕಟಣೆಗಳನ್ನು ಹಾಕಬೇಕು.

04



ನಗರ ಸರ್ಕಾರದ ನಿಯಮಗಳಿಗೆ ಒಳಪಟ್ಟು ವಾರ್ಡಿನ ನಿವಾಸಿಗಳು ವಾರ್ಡ್ ಸಮಿತಿ ಸಭೆಯಲ್ಲಿ ಭಾಗವಹಿಸಬಹುದು

05



ಕೆಲವು ನಗರಗಳಲ್ಲಿ, ಮಾಧ್ಯಮದವರನ್ನು ಸಹ ಈ ಸಭೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಲು ಪ್ರೋತ್ಸಾಹಿಸಲಾಗುತ್ತದೆ.

06



ಸಭೆಯ ನಿರ್ಣಯದ ಠರಾವುಗಳನ್ನು ತಯಾರಿಸಬೇಕು ಮತ್ತು ಸಭೆಯ ನಡಾವಳಿಗಳನ್ನು ಸಾರ್ವಜನಿಕರಿಗೆ ಲಭ್ಯವಾಗುವಂತೆ ನೋಡಿಕೊಳಬೇಕು.

07



ಈ ನಡಾವಳಿಗಳನ್ನು ವಾರ್ಡ್ ಸಮಿತಿಯ ಕಚೇರಿಯಲ್ಲಿ ಇಡಬೇಕು ಮತ್ತು ಮುಂದಿನ ಸಭೆಯಲ್ಲಿ ಅದನ್ನು ಪ್ರಸ್ತಾಪನೆ ಮಾಡಬೇಕು.

08



ಉಪಸಮಿತಿಗಳು ವಾರ್ಡ್ ಸಮಿತಿ ಸಭೆಗಳ ನಡಾವಳಿಗಳ ಮಾಹಿತಿಯನ್ನು ಸೂಕ್ತ ಕಾರ್ಯಗಳಲ್ಲಿ ಬಳಸಿಕೊಳ್ಳಬಹುದು.

09



ಸರಿಯಾಗಿ ನಡೆಸದ ಸಭೆಗಳ (ಅಥವಾ ಸಭೆಗಳ ಆಯೋಜನೆಯ ಕೊರತೆ) ಕುರಿತು ಸೂಕ್ತ ಕ್ರಮಕ್ಕಾಗಿ ವಾರ್ಡ್ ಸಮಿತಿಯ ಅಧ್ಯಕ್ಷರು ಅಥವಾ ಆಯುಕ್ತರು/ವಲಯ ಆಯುಕ್ತರಿಗೆ ತಿಳಿಸಬಹುದು.

ಮಾದರಿ ನಗರ್ ರಾಜ್ ಮಸೂದೆಯಲ್ಲಿ ಇದನ್ನು ಶಿಫಾರಸು ಮಾಡಲಾಗಿದೆ. ಆದರೆ ಇದು ಸಂಪೂರ್ಣವಾಗಿ ಪ್ರತ್ಯೇಕ ರಾಜ್ಯಗಳ ವಿವೇಚನೆಗೆ ಒಳಪಟ್ಟಿರುತ್ತದೆ ಮತ್ತು ರಾಜ್ಯಗಳು ಅದರದೇ ಪ್ರತ್ಯೇಕ ನಿಯಮಗಳನ್ನು ಹೊಂದಬಹುದು.

## ವಾರ್ಡ ಸಮಿತಿ ಸಭೆ ಸೂಚನೆಯ ಮಾದರಿ ಸ್ವರೂಪ

< ನಗರ ಪಾಲಿಕೆಯ ಹೆಸರನ್ನು ನಮೂದಿಸಿ>

ಉಲ್ಲೇಖ. ಸಂ: .............................                                        ದಿನಾಂಕ............................

**ವಾರ್ಡ್ ಸಮಿತಿ ಸಭೆ ಸೂಚನೆ**

ವಿಷಯ: ವಾರ್ಡ ಸಂ.................ಯ ವಾರ್ಡ್ ಸಮಿತಿ ಸಭೆಗೆ ಹಾಜರಾಗಲು ಆಹ್ವಾನ
ಉಲ್ಲೇಖ: ................ ನಗರ ಪಾಲಿಕೆಯ ಆದೇಶ/ಅಧಿಸೂಚನೆ ಸಂಖ್ಯೆ ..........................
ದಿನಾಂಕದಂದು..................

ಮೇಲಿನ ವಿಷಯಕ್ಕೆ ಸಂಭಂದಿಸಿದಂತೆ, ನಾಗರಿಕರಿಗೆ ಮೂಲಭೂತಸೌಕರ್ಯ ಸೇವೆಗಳನ್ನು ಪರಿಣಾಮಕಾರಿಯಾಗಿ ತಲುಪಿಸಲು ವಾರ್ಡ್ ಸಮಿತಿಗಳನ್ನು ರಚಿಸಲಾಗಿದ್ದು, ನಗರದ ಆಡಳಿತ ಮತ್ತು ವಾರ್ಡಿಗೆ ಸಂಭಂದಪಟ್ಟ ಅಭಿವೃದ್ಧಿ ಯೋಜನೆಗಳ ಅನುಷ್ಠಾನದಲ್ಲಿ ನಾಗರಿಕರು ತಮ್ಮ ಅಭಿಪ್ರಾಯಗಳನ್ನು ಮತ್ತು ಸಲಹೆಗಳನ್ನು ಒದಗಿಸಲು ಒಂದು ವೇದಿಕೆಯನ್ನು ನೀಡಲಾಗುತ್ತದೆ, ಅಂತೆಯೇ, ವಾರ್ಡ್ ಸಮಿತಿಗಳ ಉತ್ತಮ ಕಾರ್ಯನಿರ್ವಹಣೆಗಾಗಿ ಕಾರ್ಯದರ್ಶಿಗಳನ್ನು ನೇಮಕ ಮಾಡಲಾಗಿದೆ. ಹಾಗೆಯೇ, ಅಧ್ಯಕ್ಷರ ಹಾಗೂ ಸದಸ್ಯರ ಸಲಹೆಯಂತೆ ವಾರ್ಡ್ ಸಮಿತಿ ಸಭೆಯನ್ನು ಕರೆಯಲಾಗಿದೆ.

ಆದ್ದರಿಂದ ವಾರ್ಡ ಸಂ................................ಯ ವಾರ್ಡ್ ಸಮಿತಿಯ ಅಧ್ಯಕ್ಷರು, ಸದಸ್ಯರು ಹಾಗೂ ಸಂಬಂಧಪಟ್ಟ ಅಧಿಕಾರಿಗಳು < ದಿನಾಂಕ ಬರಿಯಿರಿ> ರಂದು < ಸ್ಥಳ ಹೆಸರಿಸಿ > ನಲ್ಲಿ < ಸಮಯ ತಿಳಿಸಿ>ಗಂಟೆಗೆ, ಅಗತ್ಯ ಮಾಹಿತಿ ಮತ್ತು ದಾಖಲೆಗಳೊಂದಿಗೆ, ಅಭಿವೃದ್ಧಿ ಯೋಜನೆಗಳು ಮತ್ತು ಜನರ ಕುಂದುಕೊರತೆಗಳ ನಿವಾರಣೆಯ ಬಗೆಗಿನ ಚರ್ಚೆಯಲ್ಲಿ ಭಾಗವಹಿಸಿಬೇಕೆಂದು ಕೋರಲಾಗಿದೆ.

ಈ ಸಭೆಯಲ್ಲಿ, ವಾರ್ಡಿನಲ್ಲಿ ಪ್ರಸ್ತುತ ನಡೆಯುತ್ತಿರುವ ಅಭಿವೃದ್ಧಿ ಕಾಮಗಾರಿಗಳ ಕುರಿತು, ವಿವಿಧ ಯೋಜನೆಗಳಿಗೆ ಫಲಾನುಭವಿಗಳನ್ನು ಗುರುತಿಸುವುದು, ಇತರೆ ಯಾವುದೇ ಸಮಸ್ಯೆಗಳ ಕುರಿತು ಚರ್ಚಿಸಲಾಗುವುದು. ಈ ಸಭೆಯಲ್ಲಿ ವಾರ್ಡಿನ ಎಲ್ಲಾ ನಿವಾಸಿಗಳು ಭಾಗವಹಿಸಬಹುದು ಹಾಗೂ ಎಲ್ಲಾ ನಿವಾಸಿಗಳು ವಾರ್ಡ್‌ನ ಅಭಿವೃದ್ಧಿಗೆ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿಬೇಕೆಂದು ವಿನಂತಿಸುತ್ತೇವೆ. ಹಾಗಾಗಿ ಅಧಿಕಾರಿಗಳು ಅಗತ್ಯ ದಾಖಲೆಗಳೊಂದಿಗೆ ಸಭೆಗೆ ಹಾಜರಾಗುವಂತೆ ಕೋರಲಾಗಿದೆ.

**ಸಭೆಯ ಕಾರ್ಯಸೂಚಿ/ಚರ್ಚಾ ವಿಷಯಗಳ ಪಟ್ಟಿ**

1.
2.
3.
4.
5.

**ವಾರ್ಡ್ ಸಮಿತಿ ಕಾರ್ಯದರ್ಶಿ,**
**ವಾರ್ಡ್ ಸಂಖ್ಯೆ....................**

## ವಾರ್ಡ್ ಸಮಿತಿ ಸಭೆಯ ಮಾದರಿ ಕಾರ್ಯಸೂಚಿ

ದಿನಾಂಕ:........................

ವಾರ್ಡ್ 33 | ಕದ್ರಿ, ದಕ್ಷಿಣ

**ಮಾದರಿ ಕಾರ್ಯಸೂಚಿ**

**ಉದ್ದೇಶ:** ವಾರ್ಡ್ ಕಾಮಗಾರಿಗಳಲ್ಲಿ ಒಂದಾದ ಮಳೆನೀರು ಕಾಲುವೆಗಳಲ್ಲಿ ಹೂಳು ತೆಗೆಯುವುದರ ಬಗ್ಗೆ ಪರಿಶೀಲನೆ

**ಸ್ಥಳ:** ಸರ್ಕಾರಿ ಶಾಲೆ, ಕದ್ರಿ

**ದಿನಾಂಕ:** 20 ಏಪ್ರಿಲ್, 2023

**ಸಮಯ:** ಬೆಳಿಗ್ಗೆ 11:00 ಕ್ಕೆ

| ಸಮಯ | ಕಾರ್ಯಸೂಚಿ | ಪ್ರಭಾರ |
|---|---|---|
| ಬೆಳಿಗ್ಗೆ 11.00 - 11.10 | ಸಭೆಯ ಪರಿಚಯ ಮತ್ತು ಕಾರ್ಯಸೂಚಿಯನ್ನು ತಿಳಿಸುವುದು | ಅಧ್ಯಕ್ಷರು |
| ಬೆಳಿಗ್ಗೆ 11.10 - 11.20 | ಕಳೆದ ಸಭೆಯ ನಿರ್ಣಯಗಳ (MoM) ಆಧಾರದ ಮೇಲೆ ಕ್ರಮ ತೆಗೆದುಕೊಂಡ ವರದಿಯ (ATR) ಪುನರಾವಲೋಕನ ಮಾಡುವುದು | ನಿಯೋಜಿತ ವಾರ್ಡ್ ಸಮಿತಿ ಸದಸ್ಯರು |
| ಬೆಳಿಗ್ಗೆ 11.20 - 11.30 | ಕಾರ್ಯಸೂಚಿ ಅಂಶಗಳನ್ನು ಚರ್ಚಿಸುವುದು | ಅಧ್ಯಕ್ಷರು / ವಾರ್ಡ್ ಸಮಿತಿ ಸದಸ್ಯರು |
| ಬೆಳಿಗ್ಗೆ 11.30 - 11.50 | ಚರ್ಚೆಗೆ ಅವಕಾಶ | ಎಲ್ಲರೂ, ಅಧ್ಯಕ್ಷರಿಂದ ನಿರ್ವಹಣೆ |
| ಬೆಳಿಗ್ಗೆ 11.50 - 12.00 | ವಾರ್ಡ್ ಸಮಿತಿ ಪ್ರಭಾರರೊಂದಿಗೆ ಮುಕ್ತಾಯದ ಅಭಿಪ್ರಾಯ ಮತ್ತು ಪಟ್ಟಿ ಮಾಡಲಾದ ಕ್ರಿಯೆಗಳ ಸಾರಾಂಶವನ್ನು ಮಂಡನೆ ಮಾಡುವುದು | ನಿಯೋಜಿತ ವಾರ್ಡ್ ಸಮಿತಿ ಸದಸ್ಯ |

**ವಾರ್ಡ್ ಸಮಿತಿ ಕಾರ್ಯದರ್ಶಿ,**
**ವಾರ್ಡ್ ಸಂಖ್ಯೆ...................**

## ವಾರ್ಡ್ ಸಮಿತಿ ಪ್ರತಿನಿಧಿಗಳ ಮಾದರಿ ಪೌರ ಕೈಪಿಡಿ

| ಏಜೆನ್ಸಿ | ಇಲಾಖೆ | ಹೆಸರು | ಹುದ್ದೆ | ದೂರವಾಣಿ |
|---|---|---|---|---|
| ಬಿಬಿಎಂಪಿ | ಬಿಬಿಎಂಪಿ ಕೌನ್ಸಿಲ್ | ಕೆ ನಾಗಭೂಷಣ | ಕೌನ್ಸಿಲರ್ | 012345789 |
| ಬಿಬಿಎಂಪಿ | ಅಭಿಯಂತರರು | ಸುರೇಶ್ ದೇವತ್ರಾಜ್ | ಸಹಾಯಕ ಅಭಿಯಂತರರು | 012345789 |
| ಬಿಬಿಎಂಪಿ | ಅಭಿಯಂತರರು (ಪ್ರಮುಖ ರಸ್ತೆ) | ನಾಗರಾಜ್ | ಸಹಾಯಕ ಅಭಿಯಂತರರು | 012345789 |
| ಬಿ.ಡಬ್ಲ್ಯೂ.ಎಸ್.ಎಸ್.ಬಿ. | ಬಿ.ಡಬ್ಲ್ಯೂ.ಎಸ್.ಎಸ್.ಬಿ. | ಹರಿಕುಮಾರ್ | ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು | 012345789 |
| ಬಿ.ಡಬ್ಲ್ಯೂ.ಎಸ್.ಎಸ್.ಬಿ. | ಬಿ.ಡಬ್ಲ್ಯೂ.ಎಸ್.ಎಸ್.ಬಿ. | ರಾಜೇಶ್ವರ್ ಮೇಟಿ | ಸಹಾಯಕ ಅಭಿಯಂತರರು | 012345789 |
| ಬಿಬಿಎಂಪಿ | ಆರೋಗ್ಯ | ರಘುನಾಥ ಟಿ | ಆರೋಗ್ಯ ನಿರೀಕ್ಷಕರು | 012345789 |
| ಬಿಬಿಎಂಪಿ | ತೋಟಗಾರಿಕೆ | ಚಂದ್ರ ಶೇಖರ್ | ಅಧೀಕ್ಷಕರು | 012345789 |
| ಬಿಬಿಎಂಪಿ | ವಿದ್ಯುತ್ | ರಾಜೇಂದ್ರ ನಾಯಕ್ | ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು | 012345789 |
| ಬಿಬಿಎಂಪಿ | ವಿದ್ಯುತ್ | ಬಾಬು ರೆಡ್ಡಿ | ಸಹಾಯಕ ಅಭಿಯಂತರರು | 012345789 |
| ಬಿಬಿಎಂಪಿ | ಅರಣ್ಯ | ಗೋಪಾಲ | RFO | 012345789 |
| ಬೆಸ್ಕಾಂ | ವಿದ್ಯುತ್ | ಶಿವಾನಂದ | ಕಿರಿಯ ಅಭಿಯಂತರರು | 012345789 |
| ಪೊಲೀಸ್ | ಕಾನೂನು ಮತ್ತು ಸುವ್ಯವಸ್ಥೆ | ಮೇರಿಶೈಲ | ಪೋಲೀಸ್ ಇನ್ಸ್‌ಪೆಕ್ಟರ್ | 012345789 |

## ಸಭೆಯ ನಡಾವಳಿಗಳ ಸ್ವರೂಪ

< ನಗರ ಪಾಲಿಕೆಯ ಹೆಸರನ್ನು ನಮೂದಿಸಿ>

ಉಲ್ಲೇಖ. ಸಂ............ ದಿನಾಂಕ:.................

**ವಾರ್ಡ್ ಸಮಿತಿ ಸಭೆ ನಡಾವಳಿಗಳು**

ಸದಸ್ಯರು ಮತ್ತು ಅಧಿಕಾರಿಗಳ ಸಮ್ಮುಖದಲ್ಲಿ<ದಿನಾಂಕ ಸೇರಿಸಿ> ರಂದು < ಸ್ಥಳ ತಿಳಿಸಿ > ನಲ್ಲಿ < ಸಮಯ ಬರೆಯಿರಿ > ನಡೆದ ವಾರ್ಡ ಸಂ. ................................... ಯ ವಾರ್ಡ್ ಸಮಿತಿ ಸಭೆಯಲ್ಲಿ ನಡೆದ ಚರ್ಚೆಗಳು ಮತ್ತು ನಿರ್ಣಯಗಳು ಈ ಕೆಳಗಿನಂತಿವೆ

ಉಪಸ್ಥಿತರಿರುವ ಸದಸ್ಯರು/ಅಧಿಕಾರಿಗಳು/ವಿಶೇಷ ಆಹ್ವಾನಿತರು:

| ಕ್ರ.ಸಂ. | ಹೆಸರು | ಹುದ್ದೆ |
|---|---|---|
| 1 | | |
| 2 | | |
| 3 | | |

ಹಿಂದಿನ ವಾರ್ಡ್ ಸಮಿತಿ ಸಭೆಯಲ್ಲಿ ಕ್ರಮ ಕೈಗೊಂಡ ವರದಿಯ ನಿರ್ಣಯಗಳನ್ನು ಪ್ರಸ್ತುತ ಸಭೆಯಲ್ಲಿ ಪ್ರಸ್ತಾಪಿಸುವುದು.

| ಕ್ರ.ಸಂ. | ವಿಷಯ/ ಸಮಸ್ಯೆಗಳು/ ದೂರುಗಳ ವಿವರಗಳು | ಕಾರ್ಯ ನಿರ್ವಹಿಸುವ ಅಧಿಕಾರಿಯ ಹೆಸರು, ಹುದ್ದೆ ಮತ್ತು ದೂರವಾಣಿ ಸಂಖ್ಯೆ | ಮುಕ್ತಾಯಗೊಂಡ ಅಂದಾಜು ದಿನಾಂಕ | ಸಮಸ್ಯೆ/ದೂರು ಮತ್ತು ವಿವರಗಳ ಪ್ರಸ್ತುತ ಸ್ಥಿತಿ |
|---|---|---|---|---|
| 1 | | | | |
| 2 | | | | |
| 3 | | | | |

ಪ್ರಸ್ತುತ ವಾರ್ಡ್ ಸಮಿತಿ ಸಭೆಯಲ್ಲಿ ಚರ್ಚಿಸಿದ ವಿಷಯಗಳು/ಸಮಸ್ಯೆಗಳು ಮತ್ತು ಅದಕ್ಕೆ ಸಂಬಂಧಿಸಿದಂತೆ ತೆಗೆದುಕೊಂಡ ನಿರ್ಧಾರಗಳು:

| ಕ್ರ.ಸಂ | ವಿಷಯ/ ಸಮಸ್ಯೆಗಳು/ ದೂರುಗಳ ವಿವರಗಳು | ತೆಗೆದುಕೊಂಡ ನಿರ್ಧಾರ | ಕಾರ್ಯ ನಿರ್ವಹಿಸುವ ಅಧಿಕಾರಿಯ ಹೆಸರು, ಹುದ್ದೆ ಮತ್ತು ದೂರವಾಣಿ ಸಂಖ್ಯೆ | ಮುಕ್ತಾಯಗೊಳ್ಳುವ ಅಂದಾಜು ದಿನಾಂಕ |
|---|---|---|---|---|
| 1 | | | | |
| 2 | | | | |
| 3 | | | | |

..................................................

**ವಾರ್ಡ್ ಸಮಿತಿ ಕಾರ್ಯದರ್ಶಿ,**

**ವಾರ್ಡ್ ಸಂಖ್ಯೆ...................**

**ಪ್ರತಿ::**

1. ನಗರ ಪಾಲಿಕೆ ಆಯುಕ್ತರು, ವಾರ್ಡ್ ಸಮಿತಿಗಳ ನೋಡಲ್ ಅಧಿಕಾರಿಯ ಮೂಲಕ
2. ನಗರ ಸಭೆಯ ಜಾಲತಾಣದಲ್ಲಿ ಪ್ರಕಟಿಸಲು ಆ ನಗರ ಸಭೆಯ ಐಟಿ ಸಂಯೋಜಕರು
3. ವಾರ್ಡ್ ಸಮಿತಿಯ ಕಡತ ಸಂ:...............



# 5.15 ವಾರ್ಡ್ ಸಮಿತಿಗಳ ಬಗ್ಗೆ ಇರುವ ತಪ್ಪು ಕಲ್ಪನೆಗಳನ್ನು ತಿಳಿದುಕೊಳ್ಳೋಣ

ವಾರ್ಡ್ ಸಮಿತಿಗಳು ಮುಳುಗಿರುವ ಕೆಲವು ಸಾಮಾನ್ಯ ತಪ್ಪು ಕಲ್ಪನೆಗಳನ್ನು ತಿಳಿದುಕೊಳ್ಳೋಣ.

## ತಪ್ಪು ಕಲ್ಪನೆ



- ವಾರ್ಡ್ ಸಮಿತಿ ಸದಸ್ಯರು ಮಾತ್ರ ವಾರ್ಡ್ ಸಮಿತಿ ಸಭೆಗಳಿಗೆ ಹಾಜರಾಗಬಹುದು.




- ಕೌನ್ಸಿಲರ್ ಗಳ ಮಾಹಿತಿ ಸುಲಭವಾಗಿ ಸಿಗುವುದಿಲ್ಲ.



- ಮಾಜಿ ಕೌನ್ಸಿಲರ್ ಗಳು ವಾರ್ಡ್ ಸಮಿತಿಗಳನ್ನು ನಿಯಂತ್ರಿಸುತ್ತಾರೆ ಮತ್ತು ನಾಗರಿಕರನ್ನು ಭಾಗವಹಿಸಲು ಬಿಡುವುದಿಲ್ಲ.



- ವಾರ್ಡ್ ಸಮಿತಿ ಸಭೆಗಳು ಕೇವಲ ಕುಂದುಕೊರತೆಗಳ ಪರಿಹಾರಕ್ಕೆ ಸಂಬಂಧಿಸಿದ್ದು.

- ವಾರ್ಡ್ ಸಮಿತಿಗಳು ಕೌನ್ಸಿಲರ್ ಗಳ ಮತ್ತು ಅಧಿಕಾರಿಗಳ ಅಧಿಕಾರವನ್ನು ಕುಗ್ಗಿಸುತ್ತದೆ.

## ವಾಸ್ತವ



- ವಾರ್ಡಿನ ಯಾವುದೇ ನಾಗರಿಕರು ರಾಜ್ಯ/ನಗರ ಸರ್ಕಾರದ ನಿಯಮಗಳಿಗೆ ಒಳಪಟ್ಟು ವಾರ್ಡ್ ಸಮಿತಿ ಸಭೆಗಳಲ್ಲಿ ಹಾಜರಾಗಬಹುದು ಮತ್ತು ಭಾಗವಹಿಸಬಹುದು.



- ನಿಮ್ಮ ನಗರವು ಚುನಾಯಿತ ಕೌನ್ಸಿಲ್ ಹೊಂದಿದ್ದರೆ, ಕೌನ್ಸಿಲರ್ ಗಳ ಬಗ್ಗೆ ಎಲ್ಲಾ ಮಾಹಿತಿಯು ನಗರ ಸರ್ಕಾರದ ವೆಬ್ಸೈಟ್ ಅಥವಾ ಅಂತರ್ಜಾಲತಾಣದಲ್ಲಿ ಲಭ್ಯವಿರುತ್ತದೆ. ಹಾಗು ನಗರ ಪಾಲಿಕೆಯ ಕೌನ್ಸಿಲ್ ಕಾರ್ಯದರ್ಶಿ ಕಚೇರಿಯಲ್ಲಿಯೂ ವಿವರಗಳು ಲಭ್ಯವಿರುತ್ತದೆ.



- ಚುನಾಯಿತ ಕೌನ್ಸಿಲರ್ ವಾರ್ಡ್ ಸಮಿತಿಯ ಅಧ್ಯಕ್ಷರಾಗಿದ್ದು, ಅವರ ನೇತೃತ್ವದಲ್ಲಿ ಮಾತ್ರ ವಾರ್ಡ್ ಸಮಿತಿ ಸಭೆಗಳನ್ನು ನಡೆಸಲಾಗುತ್ತದೆ.



- ವಾರ್ಡ್ ಸಮಿತಿಗಳು ನಾಗರಿಕ ಸೌಲಭ್ಯದ ಕಾಮಗಾರಿಗಳ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ, ವಾರ್ಡಿಗಾಗಿ ಯೋಜನೆಗಳನ್ನು ಸಿದ್ಧಪಡಿಸುವುದು ಮತ್ತು ಬಜೆಟ್ ಪ್ರಕ್ರಿಯೆಗಳ ಜವಾಬ್ದಾರಿಯನ್ನು ಹೊಂದಿವೆ. ವಾಸ್ತವವಾಗಿ, 2021 ರಲ್ಲಿ, ಬೆಂಗಳೂರಿನ ಪ್ರತಿ ವಾರ್ಡ್ ಸಮಿತಿಯು ರಸ್ತೆಗಳು, ಫುಟ್ಪಾತ್ಗಳು ಮತ್ತು ಚರಂಡಿಗಳ ಸ್ಥಳೀಯ ಅಗತ್ಯಗಳಿಗೆ ಆದ್ಯತೆ ನೀಡಲು ₹ 60 ಲಕ್ಷಗಳ ಬಜೆಟ್ ಅನ್ನು ಪಡೆದುಕೊಂಡಿವೆ.

- ವಾರ್ಡ್ ಸಮಿತಿಗಳು ವ್ಯವಸ್ಥೆಯನ್ನು ಬಲಪಡಿಸುತ್ತವೆ ಮತ್ತು ಕೌನ್ಸಿಲರ್ ಗಳು , ಸರ್ಕಾರಿ ಅಧಿಕಾರಿಗಳು ಮತ್ತು ನಾಗರಿಕರು ನಡುವೆ ಸಹಯೋಗದೊಂದಿಗೆ ಕೆಲಸ ಮಾಡಲು ಪ್ರೋತ್ಸಾಹಿಸುತ್ತೇವೆ.

## 5.16 ಯಶಸ್ಸಿನ ಕಥೆ

### ಮಂಗಳೂರು ಪಂಚನಾಡಿ ವಾರ್ಡಿನ ನಿವಾಸಿಗಳು ಒಟ್ಟಾಗಿ ಒಂದೆಡೆ ಸೇರಿದಾಗ ಅವರ ಪ್ರದೇಶದ ಮುಖ್ಯರಸ್ತೆಗಳು ಬೆಳಕಿನಿಂದ ಕಂಗೊಳಿಸಿದವು!



ಮಂಗಳೂರಿನ ಪಂಚನಾಡಿ ವಾರ್ಡಿನ ಸಂತೋಷನಗರ ಮುಖ್ಯ ರಸ್ತೆಯು ಬೀದಿ ದೀಪಗಳಿಲ್ಲದೆ ಕತ್ತಲ ಆವರಿಸಿದ ರಸ್ತೆಯಾಗಿತ್ತು. ನಿವಾಸಿಗಳು ಈ ಕತ್ತಲೆಯಿಂದ ಬೇಸತ್ತು ತಾವು ಕಾಣಬಯಸುವ ಬದಲಾವಣೆ ನೋಡಲು ಒಟ್ಟಾಗಿ ಬಂದರು.

**ಅವರು ಆ ಪ್ರದೇಶದ ನಿವಾಸಿಗಳನ್ನು ಸಂಪರ್ಕಿಸಿ ಕತ್ತಲೆಯಿಂದ ಆವೃತವಾದ ರಸ್ತೆಯಲ್ಲಿ 5 ಎಲ್ಇಡಿ ಬೀದಿದೀಪಗಳನ್ನು ಅಳವಡಿಸುವಂತೆ ಮನವಿ ಪತ್ರವನ್ನು ಸಿದ್ಧಪಡಿಸಿ ಅದಕ್ಕೆ ಸ್ಥಳೀಯರಿಂದ 20 ಸಹಿಗಳನ್ನು ಪಡೆದರು. ಈ ಪತ್ರವನ್ನು ಏಪ್ರಿಲ್ 2022 ರಲ್ಲಿ ತಮ್ಮ ವಾರ್ಡ್ ಸಮಿತಿಗೆ ಸಲ್ಲಿಸಲಾಯಿತು. ಇದಕ್ಕೆ ಸಕಾರಾತ್ಮಕವಾಗಿ ಪ್ರತಿಕ್ರಿಯಿಸಿದ ಕಾರ್ಪೋರೇಟರ್ ಶ್ರೀಮತಿ ಸಂಗೀತಾ ಆರ್ ನಾಯಕ್ ಅವರು ಬೀದಿದೀಪಗಳ ಅಳವಡಿಕೆಗೆ ಒಪ್ಪಿಗೆ ನೀಡಿದರು ಮತ್ತು ವಾರ್ಡ್ ನಿಧಿಯಿಂದ ಅನುದಾನವನ್ನು ಅನುಮೋದಿಸಿದರು.**

ನಾಗರಿಕರು ತಮ್ಮ ಕಾರ್ಪೊರೇಟರ್ ಮತ್ತು ಇತರ ಅಧಿಕಾರಿಗಳೊಂದಿಗೆ ನಿರಂತರವಾಗಿ ಈ ವಿಷಯದ ಮೇಲೆ ಸಂಪರ್ಕದಲ್ಲಿದ್ದ ಫಲವಾಗಿ 40 ದಿನಗಳಲ್ಲಿ ಬೀದಿದೀಪಗಳನ್ನು ಅಳವಡಿಸಿ ಸಂತೋಷನಗರ ಮುಖ್ಯರಸ್ತೆಗಳು ಬೆಳಕಿನಿಂದ ಕಂಗೊಳಿಸಿದವು!

ಪಂಚನಾಡಿ ವಾರ್ಡಿನ ನಾಗರಿಕರು ಭರವಸೆಯ ಬೆಳಕಾಗಿ ಇತರರಿಗೆ ಮಾದರಿಯಾಗಿದ್ದಾರೆ. ಅವರು ಸಾಮೂಹಿಕ ಸಹಭಾಗಿತ್ವದ ಶಕ್ತಿಯನ್ನು ವಿವರಿಸುತ್ತಾರೆ ಮತ್ತು ಸಕ್ರಿಯ ನಾಗರಿಕರು, ಪರಿಣಾಮಕಾರಿ ವಾರ್ಡ್ ಸಮಿತಿಗಳು ಮತ್ತು ಜನಪರವಾದ ಕಾರ್ಪೊರೇಟರ್‌ಗಳು ಒಟ್ಟಾಗಿ ಕೆಲಸ ಮಾಡಿದಾಗ ವಾರ್ಡ್‌ಗಳಲ್ಲಿ ಆಗಬಹುದಾದ ಎಲ್ಲಾ ಅದ್ಭುತ ಸಂಗತಿಗಳಿಗೆ ಮಾದರಿಯಾಗುತ್ತಾರೆ.



## ಯೋಗಕ್ಷೇಮ ಸಲಹೆಗಳು

**ನಿಮ್ಮ ಬೀದಿಗಳು ಕತ್ತಲೆಯಲ್ಲಿರಬಹುದು ಆದರೆ, ನೀವು ಖಂಡಿತ ಕತ್ತಲೆಯಲ್ಲಿ ಇರಬೇಕಾಗಿಲ್ಲ!**

**ಈ ಕೈಪಿಡಿಯೊಂದಿಗೆ, ನಿಮ್ಮ ನೆರೆಹೊರೆಯಲ್ಲಿ ಉರಿಯದ ಬೀದಿ ದೀಪಗಳನ್ನು ಸರಿಪಡಿಸಲು ನಿಮಗೆ ಅಗತ್ಯವಿರುವ ಎಲ್ಲ ಮಾಹಿತಿ ನೀವು ಹೊಂದಿದ್ದೀರಿ. ಹಾಗಾದರೆ, ಸತ್ಕಾರ್ಯ ಪ್ರಾರಂಭಿಸಲು, ನಿಮ್ಮ ನಗರ ಸರ್ಕಾರದಲ್ಲಿ ಸಂಬಂಧಿಸಿದ ಕುಂದುಕೊರತೆ ನಿವಾರಣಾ ಇಲಾಖೆಯ ಸಂಪರ್ಕ ಮಾಹಿತಿಯನ್ನು ನೋಡಿ ಮತ್ತು ದೂರು ಸಲ್ಲಿಸಿ. ಸಮಸ್ಯೆ ಬಗೆಹರಿಯದೆ ಉಳಿದಿದ್ದರೆ ನಿಮ್ಮ ವಾರ್ಡ್ ಸಮಿತಿ ಸಭೆಗಳಲ್ಲಿ ಪ್ರಸ್ತಾಪಿಸಿ. ಪರಿಹಾರಕ್ಕಾಗಿ ನೀವು ನಿಮ್ಮ ಕೌನ್ಸಿಲರ್, ವಾರ್ಡ್ ಇಂಜಿನಿಯರ್ ಅಥವಾ ಎಲೆಕ್ಟ್ರಿಕಲ್ ಇಂಜಿನಿಯರ್ ಅನ್ನು ಸಹ ಸಂಪರ್ಕಿಸಬಹುದು.**

## ಸ್ವಚ್ಛವಾದ ಕೆರೆಗಳಿಂದ ತಂಪಾದ ನಗರಗಳಿಗೆ : ಹುಬ್ಬಳ್ಳಿ-ಧಾರವಾಡದ ಕಥೆ



ಹೆಚ್ಚುತ್ತಿರುವ ಮಾಲಿನ್ಯದ ಸಮಸ್ಯೆಯನ್ನು ನಿಭಾಯಿಸಲು ಹುಬ್ಬಳ್ಳಿ-ಧಾರವಾಡ ನಾಗರಿಕರು ಒಗ್ಗೂಡಿದರು.

2 ಜೂನ್ 2022 ರಂದು, ಹುಬ್ಬಳ್ಳಿ-ಧಾರವಾಡ ವಾರ್ಡ್ ಸಮಿತಿ ಬಳಗದ ಸಾಮೂಹಿಕ ನೇತೃತ್ವದಲ್ಲಿ ಮತ್ತು ನ್ಯಾಷನಲ್ ಕ್ಯಾಡೆಟ್ ಕಾರ್ಪ್ಸ್ (NCC) ಸಹಯೋಗದೊಂದಿಗೆ, ಸ್ವಯಂಸೇವಕರು ಧಾರವಾಡದ ಜನಪ್ರಿಯ ಸಾಧನಕೆರೆ ಉದ್ಯಾನವನದಲ್ಲಿ ಸುಮಾರು 25 ಚೀಲಗಳಷ್ಟು ಕಸವನ್ನು ಸಂಗ್ರಹಿಸಿದರು.

ಇದೇ ಉಪಕ್ರಮದಲ್ಲಿ 30 ವಾರ್ಡ್ ಸಮಿತಿ ಬಳಗ ಸದಸ್ಯರು ತಮ್ಮ ನಗರಾಡಳಿತದೊಂದಿಗೆ ಕೈಜೋಡಿಸಿ ಹುಬ್ಬಳ್ಳಿಯ ಸಾರ್ವಜನಿಕ ಉದ್ಯಾನದಲ್ಲಿ ಸ್ವಚ್ಛತಾ ಅಭಿಯಾನ ನಡೆಸಿದರು. ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯ ವಲಯ ಅಧಿಕಾರಿಗಳು ಕೂಡ ಅಭಿಯಾನದಲ್ಲಿ ಭಾಗವಹಿಸಿದ್ದು, ಉದ್ಯಾನವನದಿಂದ 10 ಚೀಲಗಳಷ್ಟು ಕಸವನ್ನು ಸಂಗ್ರಹಿಸಿದರು. ಈ ಪ್ರದೇಶದಲ್ಲಿ ಗೊಬ್ಬರದ ಘಟಕವನ್ನು ಸ್ಥಾಪಿಸಲು ನಾಗರಿಕರು ವಲಯ ಆಯುಕ್ತರಿಗೆ ಮನವಿ ಮಾಡಿದರು; ಮನವಿಯನ್ನು ವಲಯ ಆಯುಕ್ತರು ಸಕಾರಾತ್ಮಕವಾಗಿ ಸ್ವೀಕರಿಸಿದ್ದಾರೆ.

**ಇದು ಸಾಮೂಹಿಕ ಒಳಿತಿಗಾಗಿ ಸಕ್ರಿಯ ಭಾಗವಹಿಸುವಿಕೆಯ ಒಂದು ಜೀವಂತ ಉದಾಹರಣೆ!**

**ನಿರಾಸಕ್ತೆ ನ್ಯಾನ್ಸಿ**




ಓಹ್ ವಾವ್! ಈ ಕಥೆಗಳು ಸ್ಫೂರ್ತಿದಾಯಕವಾಗಿವೆ. ನಾಗರಿಕರು ತಮ್ಮ ನೆರೆಹೊರೆಗಳಲ್ಲಿ ಬದಲಾವಣೆಯನ್ನು ತರುವುದರಲ್ಲಿ ಸಫಲರಾಗುವುದರ ಜೊತೆಗೆ ಅವರ ಪ್ರಯತ್ನಗಳು ಎಲ್ಲರಿಗೂ ಹಸಿರುಮಯ, ಆರೋಗ್ಯಕರ ಪರಿಸರಕ್ಕೆ ಕಾರಣವಾದವು. ಈ ತರಹದ ಕೆಲಸಗಳನ್ನು ನಾನು ಹೇಗೆ ಮಾಡಬಹುದು? ನಾನು ಎಲ್ಲಿಂದ ಪ್ರಾರಂಭಿಸಲಿ?

**ತೊಡಗಿಸಿಕೊಂಡ ತನ್ವಿರ್**




ಇದು ನಿಮ್ಮಿಂದ ಕೇಳಲು ಚೆನ್ನಾಗಿದೆ! ಬದಲಾವಣೆಯು ನಮ್ಮ ಮನೆಯಿಂದಲೇ ಪ್ರಾರಂಭವಾಗುತ್ತದೆ ಮತ್ತು ಅದನ್ನು ಪ್ರಾರಂಭಿಸಲು ಒಂದು ಮಾರ್ಗವೆಂದರೆ ನಿಮ್ಮ ದೈನಂದಿನ ಜೀವನದಲ್ಲಿ ನಿಮ್ಮ ಕಾರ್ಯಗಳು ಮತ್ತು ನಡವಳಿಕೆಯ ಬಗ್ಗೆ ಹೆಚ್ಚು ಗಮನ ಹರಿಸುವುದು. ಇದರ ಜೊತೆ, ನೀವು ತೆಗೆದುಕೊಳ್ಳುವ ಪ್ರತಿಯೊಂದು ಸಣ್ಣ ಹೆಜ್ಜೆಯು ಸುಸ್ಥಿರ ನೆರೆಹೊರೆಯನ್ನು ನಿರ್ಮಿಸುವಲ್ಲಿ ದೊಡ್ಡ ವ್ಯತ್ಯಾಸವನ್ನು ಮಾಡುತ್ತದೆ.

## ನೀವು ಎಷ್ಟು ಪರಿಸರ ಸ್ನೇಹಿಯಾಗಿದ್ದೀರಿ ಎಂಬುದನ್ನು ಕಂಡುಹಿಡಿಯೋಣ!

**ನೀವು ಕಛೇರಿಗೆ ನಡೆದು ಸಾಗುತ್ತೀರಾ, ಸೈಕಲ್ ಅಥವಾ ಸಾರ್ವಜನಿಕ ಸಾರಿಗೆಯನ್ನು ಬಳಸುತ್ತೀರಾ?**

☐ ಹೌದು ☐ ಇಲ್ಲ



---

**ನೀವು ಮೆಟ್ಟಿಲು ಬಳಸುತ್ತೀರಾ ಅಥವಾ ಲಿಫ್ಟ್ ಬಳಸುತ್ತೀರಾ?**

☐ ಹೌದು, ನಾನು ಮೆಟ್ಟಿಲುಗಳನ್ನು ಬಳಸುತ್ತೇನೆ ☐ ಇಲ್ಲ, ನಾನು ಲಿಫ್ಟ್ ಗಳನ್ನು ಬಳಸುತ್ತೇನೆ



---

**ನೀವು ಟ್ರೆಡ್ ಮಿಲ್ ಬದಲಿಗೆ ಹೊರಾಂಗಣದಲ್ಲಿ ಓಡುತ್ತೀರಾ?**

☐ ಹೌದು ☐ ಇಲ್ಲ



---

**ನಿಮ್ಮ ಮನೆಯಲ್ಲಿ ಸೋಲಾರ್ ಹೀಟರ್ ಅಳವಡಿಸಿದ್ದೀರಾ?**

☐ ಹೌದು ☐ ಇಲ್ಲ



---

**ಟ್ರಾಫಿಕ್ ಕಂಬದಲ್ಲಿ ಕೆಂಪು ದೀಪವಿದ್ದಾಗ, ನಿಮ್ಮ ವಾಹನದ ಇಂಜಿನನ್ನು ಆಫ್ ಮಾಡುತ್ತೀರಾ?**

☐ ಹೌದು ☐ ಇಲ್ಲ



---

**ನೀವು ಹಲ್ಲು ಉಜ್ಜುವಾಗ ನಲ್ಲಿಯಿಂದ ನೀರು ಹರಿಯುವುದನ್ನು ನಿಲ್ಲಿಸುತ್ತೀರಾ?**

☐ ಹೌದು ☐ ಇಲ್ಲ





**ನೀವು ಮನೆಯಲ್ಲಿ ಯಾವುದೇ ನಳ, ಫ್ಲಶ್ ಅಥವಾ ಪೈಪ್ ಸೋರಿಕೆಯನ್ನು ತ್ವರಿತವಾಗಿ ಸರಿಪಡಿಸುತ್ತೀರಾ?**

☐ ಹೌದು ☐ ಇಲ್ಲ



**ಪಾತ್ರೆ ತೊಳೆದ ನೀರನ್ನು ಮನೆಯ ಸಸ್ಯಗಳಿಗೆ ಹಾಯಿಸಲು ಮತ್ತು ನಿಮ್ಮ AC/RO ವ್ಯವಸ್ಥೆಗಳಿಂದ ಬರುವ ನೀರನ್ನು ಮರುಬಳಕೆ ಮಾಡುತ್ತೀರಾ?**

☐ ಹೌದು ☐ ಇಲ್ಲ



**ನಿಮ್ಮ ಮನೆ ಅಥವಾ ಸಮುದಾಯದಲ್ಲಿ ನೀವು ಮಳೆನೀರು ಕೊಯ್ಲು ವ್ಯವಸ್ಥೆಯನ್ನು ಹೊಂದಿದ್ದೀರಾ?**

☐ ಹೌದು ☐ ಇಲ್ಲ



**ನೀವು ಮನೆಯಲ್ಲಿ ತ್ಯಾಜ್ಯವನ್ನು ಗೊಬ್ಬರ ಮಾಡುತ್ತೀರಾ?**

☐ ಹೌದು ☐ ಇಲ್ಲ




**ನೀವು ಟಿವಿಯನ್ನು ವೀಕ್ಷಿಸದಿದ್ದಾಗ ಅದನ್ನು ಆಫ್ ಮಾಡುತ್ತೀರಾ?**

☐ ಹೌದು ☐ ಇಲ್ಲ



**ಬಳಕೆಯಲ್ಲಿ ಇಲ್ಲದಿದ್ದಾಗ ನೀವು ಉಪಕರಣಗಳು/ಚಾರ್ಜರ್‌ಗಳನ್ನು ಅನ್ಪ್ಲಗ್ ಮಾಡುತ್ತೀರಾ?**

☐ ಹೌದು ☐ ಇಲ್ಲ




**ನೀವು ಕೊಠಡಿಯಿಂದ ಹೊರಬಂದಾಗ ನೀವು ಲೈಟ್ ಗಳನ್ನು ಆಫ್ ಮಾಡುತ್ತೀರಾ?**

☐ ಹೌದು ☐ ಇಲ್ಲ

ಈ ಮೇಲ್ಕಂಡ ಹೆಚ್ಚಿನ ಪ್ರಶ್ನೆಗಳಿಗೆ ನಿಮ್ಮ ಉತ್ತರ 'ಹೌದು' ಎಂದಾದರೆ, ನಿಮ್ಮ ಬೆನ್ನು ತಟ್ಟಿಕೊಳ್ಳಿ! ನೀವು ಪರಿಸರ ಪ್ರಜ್ಞೆಯನ್ನು ಹೊಂದಿದ್ದೀರಿ ಮತ್ತು ನಿಮ್ಮ ನಿರ್ಧಾರಗಳು ನೆರೆಹೊರೆ, ಸಮುದಾಯ ಮತ್ತು ಪರಿಸರಕ್ಕೆ ಉತ್ತಮವಾಗಿದೆ ಎಂದು ಖಚಿತಪಡಿಸಿಕೊಳ್ಳಲು ಸಂಘಟಿತ ಪ್ರಯತ್ನವನ್ನು ಮಾಡಿ.

ಈ ಮೇಲ್ಕಂಡ ಹೆಚ್ಚಿನ ಪ್ರಶ್ನೆಗಳಿಗೆ ನಿಮ್ಮ ಉತ್ತರ 'ಇಲ್ಲ' ಎಂದಾದರೆ, ಇನ್ನೂ ಸಮಯವಿದೆ! ಹಸಿರು ಜೀವನ ಶೈಲಿಯನ್ನು ಅಳವಡಿಸಿಕೊಳ್ಳಲು ಮತ್ತು ಪರಿಸರಕ್ಕಾಗಿ ನಿಮ್ಮ ಕೈಲಾದಷ್ಟನ್ನು ಮಾಡಲು ಇನ್ನೂ ತಡವಾಗಿಲ್ಲ.

ಹೆಚ್ಚು ಜಾಗೃತ ಜೀವನವನ್ನು ನಡೆಸಲು ನೀವು ಮತ್ತಷ್ಟು ಆಸಕ್ತಿ ಹೊಂದಿದ್ದರೆ, ದಯವಿಟ್ಟು ಇಲ್ಲಿ ಮಾಡಬಹುದಾದ ಚಟುವಟಿಕೆಗಳನ್ನು ಇದೀಗಲೇ ಪ್ರಾರಂಭಿಸಿಲು ಈ QR ಕೋಡ್ ಅನ್ನು ಸ್ಕ್ಯಾನ್ ಮಾಡಿ!

---

ಸರಳ ಚಟುವಟಿಕೆಗಳೊಂದಿಗೆ ನೀವು ಯಾವಾಗಲೂ ಪ್ರಾರಂಭಿಸಬಹುದು, ನಿಮ್ಮ ಮನೆ ಕಸವನ್ನು ಬೇರ್ಪಡಿಸುವುದು ಅಥವಾ ಒಳಚರಂಡಿಗೆ ಎಸೆಯದಿರುವಂತಹದು. ಕಸದ ಗುಡ್ಡೆಗಳು ನಿರ್ಮಾಣವಾಗದಂತೆ ಮತ್ತು ಪ್ರವಾಹದ ಕಾರಣಗಳನ್ನು ತಗ್ಗಿಸಲು ಇದು ಸ್ಥಳೀಯ ಸರ್ಕಾರಕ್ಕೆ ಸಹಾಯ ಮಾಡುತ್ತದೆ. ಆರೋಗ್ಯಕರ ಮತ್ತು ಸುಸ್ಥಿರ ನೆರೆಹೊರೆಗಳನ್ನು ನಿರ್ಮಿಸುವಲ್ಲಿ ನಮ್ಮ ಸ್ಥಳೀಯ ಸರ್ಕಾರದೊಂದಿಗೆ ಸಂಪರ್ಕ ಸಾಧಿಸುವುದು ನಮಗೆ ಮುಖ್ಯವಾಗಿದೆ. ಇದಕ್ಕಾಗಿ ನಾವು ವಾರ್ಡ್ ಸಮಿತಿಗಳನ್ನು ಸಹ ಬಳಸಿಕೊಳ್ಳಬಹುದು.

# 5.17 ಚಟುವಟಿಕೆಯ ಮನೆ






## ಮುಂದಿನ ಕ್ರಮ ತೆಗೆದುಕೊಳ್ಳಲು

ನಿಮ್ಮ ನಗರದಲ್ಲಿನ ವಾರ್ಡ್ ಸಮಿತಿಗಳ ಸ್ಥಿತಿ.

ದೇಶಾದ್ಯಂತ ವಾರ್ಡ್ ಸಮಿತಿಗಳು ಇನ್ನೂ ಕ್ರಮಬದ್ಧವಾಗಬೇಕಿದೆ.

ನಿಮ್ಮ ನಗರವು ವಾರ್ಡ್ ಸಮಿತಿಗಳನ್ನು ಹೊಂದಿದ್ದರೆ, ನಿಮ್ಮ ನಗರ ಸರ್ಕಾರದ ಮೂಲಕ ನೀವು ಅವುಗಳ ಬಗ್ಗೆ ಇನ್ನಷ್ಟು ತಿಳಿದುಕೊಳ್ಳಬಹುದು. ಮತ್ತು ನಿಮ್ಮ ನಗರದಲ್ಲಿ ವಾರ್ಡ್ ಸಮಿತಿಗಳು ರಚನೆಗೊಳ್ಳದಿದ್ದಲ್ಲಿ, ಈ ಬದಲಾವಣೆಯನ್ನು ಮುನ್ನೆಡಸಲು ನಿಮಗೆ ಇದು ಪರಿಪೂರ್ಣ ಅವಕಾಶವಾಗಿದೆ!

## ಮಾಡಬೇಕಾದದ್ದು:

ನಿಮ್ಮ ನಗರಾಡಳಿತವನ್ನು ಸಂಪರ್ಕಿಸಿ ಮತ್ತು ವಾರ್ಡ್ ಸಮಿತಿಗಳ ರಚನೆಗೆ ಒತ್ತಾಯಿಸಿ. ಏಕೆಂದರೆ, ಇದರಿಂದ ನಗರವು ಒಂದು ವಾರ್ಡ್,  ಒಂದು ಬೀದಿ, ಒಂದು ನೆರೆಹೊರೆ ಕ್ರಮವಾಗಿ ಒಂದೊಂದಾಗಿಯೇ ಪ್ರಗತಿಯತ್ತ ಸಾಗುತ್ತದೆ.



# 06

# ನಿಮ್ಮ ವಾರ್ಡಿನ ಮೂಲಕ ನಿಮ್ಮ ನಗರವನ್ನು ಪರಿವರ್ತಿಸಲು ಈ ಮಾರ್ಗದರ್ಶಿ ಅನುಕೂಲವಾಗಲಿದೆ

## ಏಕೆಂದರೆ ನಗರಗಳು ಒಂದೊಂದಾಗಿ ವಾರ್ಡಗಳನ್ನು ಬದಲಾಯಿಸುತ್ತವೆ

**ವಾರ್ಡ್ ಗಳು ಪರಿವರ್ತನೆಯ ಮೊಟ್ಟ ಮೊದಲ, ಮೂಲಭೂತ ಘಟಕಗಳಾಗಿವೆ.**

ಕಾಲುದಾರಿಗಳು ಮತ್ತು ರಸ್ತೆಗಳಿಂದ, ಬೀದಿದೀಪಗಳು ಮತ್ತು ಉದ್ಯಾನವನಗಳು, ಕುಡಿಯುವ ನೀರಿನಿಂದ ತ್ಯಾಜ್ಯ ನಿರ್ವಹಣೆಯವರೆಗೆ - ವಾರ್ಡಗಳು ನಾಗರಿಕರ ದೈನಂದಿನ ಜೀವನದ ಮೇಲೆ ಪರಿಣಾಮ ಬೀರುತ್ತವೆ. ಹಾಗಾಗಿ ಇಲ್ಲಿಯೇ ನೀತಿ ನಿಯಮಗಳು ಅನುಷ್ಠಾನಗೊಳ್ಳುತ್ತವೆ ಮತ್ತು ನಾಗರಿಕರು ಪ್ರಜಾಪ್ರಭುತ್ವದ ಪ್ರಾಯೋಗಿಕ ಪ್ರಾತ್ಯಕ್ಷತೆಗಳನ್ನು ಮತ್ತು ಏರಿಳಿತಗಳನ್ನು ಇಲ್ಲಿಯೇ ನೇರವಾಗಿ ಅನುಭವಿಸುತ್ತಾರೆ.

ನಿಮ್ಮ ಪ್ರದೇಶದಲ್ಲಿನ ವಾರ್ಡ್ ಸಮಿತಿಗಳ ಸದ್ಯದ ಪರಿಸ್ಥಿತಿ ಹೇಗೇ ಇರಲಿ, ನಿಮ್ಮ ವಾರ್ಡನ್ನು ಸುಧಾರಿಸಲು ನಿಮಗೆ ಸಹಾಯ ಮಾಡಲು ಹಂತ-ಹಂತದ ಮಾರ್ಗದರ್ಶಿಯನ್ನು ಈ ಕೆಳಗಿನ ವಿಭಾಗವು ಹೊಂದಿದೆ.






# 6.1 ಆದರ್ಶವಾದ ಮತ್ತು ಸಂಪೂರ್ಣ ಕ್ರಿಯಾತ್ಮಕವಾದ ವಾರ್ಡ್ ಸಮಿತಿಯು ಹೇಗಿರುತ್ತದೆ?

**ಸಕ್ರಿಯ ವಾರ್ಡ್ ಸಮಿತಿಗಳು ಹೆಚ್ಚುತ್ತಿರುವ ನಾಗರಿಕ ಭಾಗವಹಿಸುವಿಕೆಯನ್ನು ಸೂಚಿಸುತ್ತವೆ, ಇದು ಸ್ಥಳೀಯ ನಗರ ಆಡಳಿತದ ಸುಧಾರಿತ ಪ್ರಾತಿನಿಧ್ಯ ಮತ್ತು ಉನ್ನತ ಕಾರ್ಯಕ್ಷಮತೆಗೆ ಕಾರಣವಾಗುತ್ತದೆ.**

**ಮಾದರಿ ವಾರ್ಡ್ ಸಮಿತಿಯ ಲಕ್ಷಣಗಳು ಇಲ್ಲಿವೆ:**

- ಸಮಾಜದ ಎಲ್ಲಾ ವರ್ಗಗಳ ನಾಗರಿಕರು (ಮಹಿಳೆಯರು ಮತ್ತು ನಗರ ಪ್ರದೇಶಗಳ ಬಡವರು ಸೇರಿದಂತೆ) ಸಮರ್ಪಕವಾಗಿ ಪ್ರತಿನಿಧಿಸುತ್ತಾರೆ ಮತ್ತು ಸಮಿತಿಯಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಾರೆ.
- ನಗರಾಡಳಿತದ ನಿಯಮಗಳ ಮತ್ತು ನಿಬಂಧನೆಗಳ ಆಧಾರದ ಮೇಲೆ ವಾರ್ಡ್ ಸಮಿತಿಯ ಸದಸ್ಯರನ್ನು ನ್ಯಾಯಯುತವಾಗಿ (ಯಾವುದೇ ಒಲವು ಅಥವಾ ಪಕ್ಷಪಾತವಿಲ್ಲದೆ) ಆಯ್ಕೆ ಮಾಡಲಾಗುತ್ತದೆ.
- ಎಲ್ಲ ವಾರ್ಡ್ ಗಳಿಗೆ ಕೂಡಲೇ ವಾರ್ಡ್ ಕಾರ್ಯದರ್ಶಿಗಳನ್ನು ನೇಮಕ ಮಾಡುವಲ್ಲಿ ನಗರಸಭೆ ಕಾರ್ಯೋನ್ಮುಖವಾಗಿರುತ್ತದೆ.
- ಸಭೆಯ ಕಾರ್ಯಸೂಚಿಯನ್ನು ನಾಗರಿಕರೊಂದಿಗೆ ಸಮಾಲೋಚಿಸಿ ತಯಾರಿಸಲಾಗುತ್ತದೆ ಮತ್ತು ಸಭೆಯ ಸೂಚನೆಯನ್ನು ನಾಗರಿಕರಿಗೆ ಮುಂಚಿತವಾಗಿ ವಿತರಿಸಲಾಗುತ್ತದೆ.
- ಸಭೆಗಳು ನಿಯಮಿತವಾಗಿ ನಿಗದಿತ ಸಮಯಕ್ಕೆ ನಡೆಯುತ್ತವೆ (ಉದಾ: ಪ್ರತಿ 1 ನೇ ಶನಿವಾರ ) ಮತ್ತು ನಿಗದಿತ ಸ್ಥಳದಲ್ಲಿ, (ಉದಾ: ವಾರ್ಡ್ ಕಚೇರಿಯಲ್ಲಿ)
- ವಾರ್ಡ್ ಕೌನ್ಸಿಲರ್ ಮತ್ತು ವಾರ್ಡ್ ಸಮಿತಿ ಕಾರ್ಯದರ್ಶಿ ಎಲ್ಲಾ ಸಭೆಗಳಲ್ಲಿ ಹಾಜರಿರುತ್ತಾರೆ.
- ಸಭೆಗಳ ನಿರ್ಣಯಗಳನ್ನು ದಾಖಲಿಸಲಾಗುತ್ತದೆ ಮತ್ತು ನಡಾವಳಿಗಳನ್ನು ನಗರ ಸರ್ಕಾರದ ಅಂತರ್ಜಾಲದಲ್ಲಿ ಅಪ್ಲೋಡ್ ಮಾಡಲಾಗುತ್ತದೆ.
- ಕ್ರಮ ತೆಗೆದುಕೊಂಡ ವರದಿಗಳನ್ನು (ATRs) ಹಿಂದಿನ ನಡಾವಳಿಗಳ ಆಧಾರದ ಮೇಲೆ ವಾರ್ಡ್ ಸಮಿತಿ ಕಾರ್ಯದರ್ಶಿ ಸಿದ್ಧಪಡಿಸಿದ್ದಾರೆ ಮತ್ತು ಅವುಗಳನ್ನು ಸಭೆಗಳಲ್ಲಿ ಚರ್ಚಿಸಲ್ಪಡುತ್ತದೆ
- ವಾರ್ಡ್ ಬಜೆಟ್, ಟೆಂಡರ್ ಮತ್ತು ಗುತ್ತಿಗೆ ಒಪ್ಪಂದಗಳನ್ನು ಚರ್ಚಿಸಲಾಗುತ್ತದೆ.
- ನಾಗರಿಕರ ಅಭಿಪ್ರಾಯಗಳು ಮತ್ತು ಯಾವುದೆ ನೀತಿ ಅಥವಾ ಕೆಲಸಗಳ ಕುರಿತು ಇರುವ ಅನುಮಾನಗಳನ್ನು ಪರಿಗಣನೆಗೆ ತೆಗೆದುಕೊಳ್ಳಲಾಗುತ್ತದೆ.
- ವಾರ್ಡ್ ಸಮಿತಿಗಳು ವಾರ್ಡಿನ ವಾರ್ಷಿಕ ಅಭಿವೃದ್ಧಿ ಯೋಜನೆಗಳನ್ನು ಸಿದ್ಧಪಡಿಸುತ್ತವೆ






## ಕೆಲವು ನಿದರ್ಶನಗಳು

**01**



**ಬಹುಶಃ ಸದಸ್ಯರಿಗೆ ತಮ್ಮ ಪಾತ್ರಗಳ ಮತ್ತು ಜವಾಬ್ದಾರಿಗಳ ಬಗ್ಗೆ ತಿಳಿದಿರುವುದಿಲ್ಲ.**

**ಅಥವಾ ವಾರ್ಡ್ ಸಮಿತಿಗಳು ಹೇಗೆ ಕಾರ್ಯನಿರ್ವಹಿಸುತ್ತವೆ ಎಂದು ನಾಗರಿಕರಿಗೆ ತಿಳಿದಿಲ್ಲ ಮತ್ತು ಹಾಗಾಗಿ ಅವರಿಗೆ ಅದರ ಪ್ರಯೋಜನಗಳನ್ನು ಅರಿತುಕೊಳ್ಳಲು ಸಾಧ್ಯವಾಗುತ್ತಿಲ್ಲ.**

**02**



**03**



**ಕೆಲವು ಸಂದರ್ಭಗಳಲ್ಲಿ, ಸಭೆಗಳನ್ನು ನಿಯಮಿತವಾಗಿ ನಡೆಸಲಾಗುವುದಿಲ್ಲ. ಅಥವಾ ಸಭೆಯ ಕಾರ್ಯವಿಧಾನಗಳ ಬಗ್ಗೆ ಸದಸ್ಯರಿಗೆ ತಿಳಿದಿರುವುದಿಲ್ಲ.**

**ಸಂಬಂಧಿಸಿದ ಇಲಾಖೆಗಳು ಮತ್ತು ಅಧಿಕಾರಿಗಳೊಂದಿಗೆ ಪರಸ್ಪರ ಸಮನ್ವಯದ ಅನುಸರಣೆಯ ಕೊರತೆಯಿಂದಾಗಿ ಅಸಮರ್ಪಕ ದೂರುಗಳ ಪರಿಹಾರ ದೂರುಗಳ ಪರಿಹಾರ ಮತ್ತು ಇದರಿಂದಾಗಿ ಏನೂ ಮಾಡಲಾಗುತ್ತಿಲ್ಲ ಎಂಬ ಭಾವನೆಗೆ ಕಾರಣವಾಗಬಹುದು.**

**04**

ನಿಮ್ಮ ವಾರ್ಡ್ ಸಮಿತಿಯೊಂದಿಗೆ ಸಮಸ್ಯೆಗಳನ್ನು ಕೂಲಂಕುಶವಾಗಿ ಪರಿಶೀಲಿಸಲು ಮತ್ತು ತದನಂತರ ಅವುಗಳನ್ನು ಪರಿಹರಿಸಲು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲು ನಾವು ಶಿಫಾರಸು ಮಾಡುತ್ತೇವೆ.

# 6.2 ಭಾರತದ ರಾಜ್ಯಗಳಲ್ಲಿ ವಾರ್ಡ್ ಸಮಿತಿಗಳ ಸ್ಥಿತಿಗಳು ಏನಾಗಿದೆ?

- ವಾರ್ಡ್ ಸಮಿತಿಗಳ ಸ್ಥಾಪನೆಗೆ ಶಾಸನದಲ್ಲಿ ಯಾವುದೇ ನಿಬಂಧನೆಗಳು ಇಲ್ಲ
- ವಾರ್ಡ್ ಸಮಿತಿಗಳ ಸ್ಥಾಪನೆಗೆ ಶಾಸನದಲ್ಲಿ ನಿಬಂಧನೆಗಳು ಇದೆ ಆದರೆ ನಿಯಮಗಳು ರಚಿಸಲಾಗಿಲ್ಲ
- ವಾರ್ಡ್ ಸಮಿತಿಗಳ ಸ್ಥಾಪನೆಗೆ ಶಾಸನದಲ್ಲಿ ನಿಬಂಧನೆಗಳು ಮತ್ತು ನಿಯಮಗಳನ್ನು ರಚಿಸಲಾಗಿದೆ

ನ- ನಗರಸಭೆಗಳು ಮ - ಮಹಾನಗರ ಪಾಲಿಕೆ NMDC - ನವ ದೆಹಲಿ ಮುನಿಸಿಪಲ್ ಕೌನ್ಸಿಲ್




**ಈ ನಕ್ಷೆಯು ನಿಮ್ಮ ರಾಜ್ಯದಲ್ಲಿನ ವಾರ್ಡ್ ಸಮಿತಿಗಳ ಸ್ಥಿತಿಗತಿಯನ್ನು ಪ್ರತಿನಿಧಿಸುತ್ತದೆ. ಹೆಚ್ಚಿನ ಮಾಹಿತಿಗಾಗಿ ಅಥವಾ ನಿಮ್ಮ ನಗರದಲ್ಲಿ ವಾರ್ಡ್ ಸಮಿತಿಗಳು ಸಂಪೂರ್ಣವಾಗಿ ಕಾರ್ಯನಿರ್ವಹಿಸುವಂತೆ ಮಾಡಲು ದಯವಿಟ್ಟು ನಿಮ್ಮ ನಗರ ಸರ್ಕಾರವನ್ನು ಸಂಪರ್ಕಿಸಿ.**

**ಈಗ ನಿಮ್ಮ ರಾಜ್ಯದಲ್ಲಿ ವಾರ್ಡ್ ಸಮಿತಿಗಳ ಬಗ್ಗೆ ನಿಮಗೆ ಕಲ್ಪನೆ ಇದೆ, ನಿಮ್ಮ ನಗರದಲ್ಲಿನ ವಾರ್ಡ್ ಸಮಿತಿಗಳ ಸ್ಥಿತಿಗತಿಯನ್ನು ಕಂಡುಹಿಡಿಯಿರಿ ಮತ್ತು ಅದನ್ನು ನಕ್ಷೆಯಲ್ಲಿ ಪತ್ತೆ ಮಾಡಿ**

*ಮೂಲ: ಜನಾಗ್ರಹದ ಅನ್ಯುವಲ್ ಸರ್ವೇ ಆಫ್ ಇಂಡಿಯಾಸ್ ಸಿಟಿ ಸಿಸ್ಟಮ್ 2023, 35 ರಾಜ್ಯಗಳ/ಕೇಂದ್ರಾಡಳಿತ ಪ್ರದೇಶಗಳಲ್ಲಿ 82 ಸ್ಥಳೀಯ ನಗರ ಸಂಸ್ಥೆಗಳ ಶಾಶನಗಳು ಮತ್ತು ಸಂಬಂಧಪಟ್ಟ ಸಮುದಾಯ ಭಾಗವಹಿಸುವಿಕೆ ಕಾನೂನು ಶಾಸನಗಳ ಮೌಲ್ಯಮಾಪನವನ್ನು ಆಧರಿಸಿದೆ.*

ನೀವು ವಾರ್ಡ್ ಸಮಿತಿಗಳನ್ನು ತಂಡಗಳೆಂದು ಭಾವಿಸಿದರೆ, ನಿಮ್ಮ ನಗರದಲ್ಲಿನ ವಾರ್ಡ್ ಸಮಿತಿಗಳು ತಂಡದ ಸಂಯೋಜನೆಯ ಕೆಳಗಿನ ಹಂತಗಳಲ್ಲಿ ಒಂದನ್ನು ಹೆಚ್ಚಾಗಿ ಕಾಣಬಹುದು:

### ಹಂತ 1: ರಚಿಸಬೇಕಾಗಿದೆ

**ನಿಮ್ಮ ನಗರದಲ್ಲಿ ವಾರ್ಡ್ ಸಮಿತಿಗಳು ಇನ್ನೂ ರಚನೆಯಾಗಿಲ್ಲ.**

## ನಿಮ್ಮ ನಗರವು 1 ನೇ ಹಂತದಲ್ಲಿದ್ದರೆ, ಕರ್ನಾಟಕದ ಹುಬ್ಬಳ್ಳಿ-ಧಾರವಾಡದ ನಾಗರಿಕರಿಂದ ಸ್ಫೂರ್ತಿ ಪಡೆಯಿರಿ.



ವಾರ್ಡ್ ಸಮಿತಿಗಳ ತುರ್ತು ಅಗತ್ಯವನ್ನು ಮನಗಂಡ ಹುಬ್ಬಳ್ಳಿ-ಧಾರವಾಡ ನಿವಾಸಿಗಳು ಒಂದೇ ಒಂದು ಸ್ಪಷ್ಟ ಗುರಿಯೊಂದಿಗೆ ಒಗ್ಗೂಡಿದರು: ಅದು ಸರ್ಕಾರವು ವಾರ್ಡ್ ಸಮಿತಿಗಳನ್ನು ರಚಿಸುವಂತೆ ಮಾಡುವುದು.

ವಾಟ್ಸಾಪ್ ಮತ್ತು ಟೆಲಿಗ್ರಾಮ್ನಂತಹ ವೇದಿಕೆಗಳಲ್ಲಿ ನಾಗರಿಕರು ಸಜ್ಜುಗೊಂಡರು. ಜನಾಗ್ರಹ ಜೊತೆ ಸೇರಿ ಜನರಿಗೆ ಸಕ್ರಿಯವಾಗಿ ವಾರ್ಡ್ ಸಮಿತಿಗಳ ಮಹತ್ವದ ಬಗ್ಗೆ ಜಾಗೃತಿ ಮೂಡಿಸುತ್ತಿದ್ದಾರೆ. ಮತ್ತು ಈ ವಿಷಯದ ಬಗ್ಗೆ ತಮ್ಮ ನಗರ ಸರ್ಕಾರದೊಂದಿಗೆ ನಿಯಮಿತವಾಗಿ ತೊಡಗಿಸಿಕೊಂಡಿದ್ದಾರೆ. ಅವರ ಈ ಸತತ ಪ್ರಯತ್ನಗಳಿಂದ ವಾರ್ಡ್ ಸಮಿತಿಗಳಿಗೆ ದಿನೆ ದಿನೆ ಬೇಡಿಕೆ ಹೆಚ್ಚುತ್ತಿದೆ. ಇದೆಲ್ಲದರ ಪರಿಣಾಮವಾಗಿ, ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯು (ಹೆಚ್ ಡಿ ಎಂ ಸಿ ) ನಾಗರಿಕರಿಂದ ವಾರ್ಡ್ ಸಮಿತಿಗೆ ಅರ್ಜಿಗಳನ್ನು ಆಹ್ವಾನಿಸುವ ಮೂಲಕ ವಾರ್ಡ್ ಸಮಿತಿಗಳನ್ನು ರಚಿಸುವ ಪ್ರಕ್ರಿಯೆಯನ್ನು ಪ್ರಾರಂಭಿಸಿದೆ.

ನಾಗರಿಕರನ್ನು ಸಜ್ಜುಗೊಳಿಸುವ ಮಾರ್ಗಗಳಿಗಾಗಿ ಆಲೋಚಿಸುತ್ತಿದ್ದೀರಾ? ಕೆಲವು ಉಪಯುಕ್ತ ಸಲಹೆಗಳಿಗಾಗಿ ಪುಟ 84 ಅನ್ನು ಪರಿಶೀಲಿಸಿ.

### ಹಂತ 2: ರಚಿಸಲ್ಪಟ್ಟಿದೆ

**ನಗರಾಡಳಿತ ವಾರ್ಡ್ ಸಮಿತಿಗಳನ್ನು ರಚಿಸುವಂತೆ ಸೂಚಿಸಿದೆ ಆದರೆ ಅವು ಇನ್ನೂ ಕಾರ್ಯರೂಪಕ್ಕೆ ಬಂದಿಲ್ಲ.**




## ಹಂತ 2 ದಲ್ಲಿದ್ದಿರಾ ಮತ್ತು ನಿರಾಶೆಗೊಂಡಿದ್ದೀರಾ? ಚೆನ್ನೈ, ತಮಿಳುನಾಡಿನ ನಾಗರಿಕರತ್ತ ನೋಡಿ!

ಪಟ್ಟುಬಿಡದ ಚೆನ್ನೈನ ಸಕ್ರಿಯ ನಾಗರಿಕರ ಬಗ್ಗೆ ಹೇಳುವುದಾದರೆ! ಅವರ ಅವಿರತ ಅಭಿಯಾನದ ಹಿನ್ನೆಲೆಯಲ್ಲಿ, ನಗರಾಡಳಿತವು ನಗರದಲ್ಲಿ ಏರಿಯಾ ಸಭೆಗಳು ಮತ್ತು ವಾರ್ಡ್ ಸಮಿತಿಗಳನ್ನು ರಚಿಸುವ ನಿರ್ಣಯವನ್ನು ಅಂಗೀಕರಿಸಿತು. ನಗರದ ಕೆಲವೆಡೆ ಏರಿಯಾ ಸಭೆಗಳು ಕಾರ್ಯ ನಿರ್ವಹಿಸುತ್ತಿದ್ದರೂ ವಾರ್ಡ್ ಸಮಿತಿಗಳು ಇನ್ನೂ ಪೂರ್ಣ ಪ್ರಮಾಣದಲ್ಲಿ ಕಾರ್ಯ ನಿರ್ವಹಿಸುತ್ತಿಲ್ಲ.

### ಹಂತ 3: ಚಾಲ್ತಿಯಲ್ಲಿದೆ

**ನಿಮ್ಮ ನಗರದಲ್ಲಿ ವಾರ್ಡ್ ಸಮಿತಿಗಳು ಅಸ್ತಿತ್ವದಲ್ಲಿವೆ ಆದರೆ ನಾಗರಿಕರ ಕುಂದುಕೊರತೆಗಳನ್ನು ಪರಿಹರಿಸಲು ಇನ್ನೂ ಪ್ರಾರಂಭಿಸಿಲ್ಲ.**



## ಬೆಂಗಳೂರು ಮತ್ತು ಮಂಗಳೂರು ನಗರದ ವಾರ್ಡ್ ಸಮಿತಿಗಳು ಸುರಂಗದ ಕೊನೆಯಲ್ಲಿ ನಮಗೆ ಬೆಳಕನ್ನು ತೋರಿಸುತ್ತವೆ!

ನಾಗರಿಕರು ಮತ್ತು ಸಮೂಹಗಳ ವರ್ಷಗಳ ಕಠಿಣ ಪರಿಶ್ರಮಕ್ಕೆ ಧನ್ಯವಾದಗಳು, ಎರಡೂ ನಗರಗಳು ವಾರ್ಡ್ ಸಮಿತಿಗಳನ್ನು ಹೊಂದಿವೆ. ನಾಗರಿಕರ ಕುಂದುಕೊರತೆಗಳನ್ನು ಪರಿಹರಿಸಲು ಅವುಗಳನ್ನು ಬಲಪಡಿಸುವ ಪ್ರಯತ್ನಗಳು ಈಗ ನಡೆಯುತ್ತಿವೆ.

ಬೆಂಗಳೂರು ಸಕ್ರಿಯ ಚುನಾಯಿತ ಕೌನ್ಸಿಲ್ ಹೊಂದಿಲ್ಲದಿದ್ದರೂ, ಅದರ ವಾರ್ಡ್ ಸಮಿತಿಗಳು ಪ್ರಸ್ತುತ ನೋಡಲ್ ಅಧಿಕಾರಿಗಳ ನೇತೃತ್ವದಲ್ಲಿ ಕಾರ್ಯನಿರ್ವಹಿಸುತ್ತಿವೆ. ಮತ್ತೊಂದೆಡೆ, ಮಂಗಳೂರು ಸಕ್ರಿಯ ಚುನಾಯಿತ ಕೌನ್ಸಿಲ್ ಹೊಂದಿದೆ ಮತ್ತು ಅಲ್ಲಿ ಎಲ್ಲಾ ವಾರ್ಡಗಳಲ್ಲಿ ವಾರ್ಡ್ ಸಮಿತಿಗಳನ್ನು ಸ್ಥಾಪಿಸಲಾಗಿದೆ. ಎರಡೂ ನಗರಗಳು ನಿಯಮಿತವಾಗಿ ತಿಂಗಳ ನಿಗದಿತ ದಿನಗಳಂದು ಸಭೆಗಳನ್ನು ಕಡ್ಡಾಯಗೊಳಿಸಿವೆ.

ಬೆಂಗಳೂರಿನಲ್ಲಿ 'ವಾರ್ಡ್ ಸಮಿತಿ ಬಳಗ' ಎಂಬ ನಾಗರಿಕ ಒಕ್ಕೂಟವು ನಗರದಾದ್ಯಂತ ವಾರ್ಡ್ ಸಮಿತಿಗಳನ್ನು ಬಲಪಡಿಸುವ ನಿಟ್ಟಿನಲ್ಲಿ ಕೆಲಸ ಮಾಡುತ್ತಿದೆ. ಅವರ ಶಿಫಾರಸುಗಳ ಆಧಾರದ ಮೇಲೆ, ಬೆಂಗಳೂರು ನಗರ ಆಯುಕ್ತರಿಂದ ವಾರ್ಡ್ ಸಮಿತಿ ಸಭೆಗಳ ಮೇಲ್ವಿಚಾರಣೆಗೆ ಹಿರಿಯ ಅಧಿಕಾರಿಗಳನ್ನು ನೇಮಿಸಲಾಗಿತ್ತು.



## ಹಂತ 4: ರೂಪಾಂತರ

**ನಿಮ್ಮ ನಗರದಲ್ಲಿ ವಾರ್ಡ್ ಸಮಿತಿಗಳು ಸಂಪೂರ್ಣವಾಗಿ ಕಾರ್ಯನಿರ್ವಹಿಸುತ್ತಿವೆ ಮತ್ತು ಅವು ವಾರ್ಡಗಳ ಪ್ರಗತಿಯನ್ನು ನಿಕಟವಾಗಿ ಮೇಲ್ವಿಚಾರಣೆ ಮಾಡುತ್ತವೆ.**

ಸಫಲ ಆಡಳಿತವನ್ನು ಖಚಿತಪಡಿಸಿಕೊಳ್ಳಲು ಸ್ಥಿರತೆ, ನಿರಂತರ ಪ್ರಯತ್ನ ಮತ್ತು ಸಹಯೋಗವು ಪ್ರಮುಖವಾಗಿವೆ. ನಗರಾಡಳಿತ ಮತ್ತು ಅದರ ಕಾರ್ಯವೈಖರಿಯ ಬಗ್ಗೆ ತಿಳುವಳಿಕೆಯೊಂದಿಗೆ, ಹೆಚ್ಚಿನ ವಾರ್ಡ್ ಸಮಿತಿಗಳು ಈ ಹಂತವನ್ನು ತಲುಪುತ್ತವೆ ಎಂದು ನಾವು ಪ್ರಾಮಾಣಿಕವಾಗಿ ನಂಬಿದ್ದೇವೆ. ಮತ್ತು ದಣಿವಿಲ್ಲದೆ ಶ್ರಮಿಸಿದ ನಾಗರಿಕರ ಪ್ರಯತ್ನವೇ ಇದಕ್ಕೆ ಸಾಕ್ಷಿಯಾಗಲಿದೆ. .



# 6.3 ಸರಿ, ನನ್ನ ವಾರ್ಡ್ ಸಮಿತಿ ಯಾವ ಹಂತದಲ್ಲಿದೆ ಎಂದು ನಾನು ತಿಳಿದುಕೊಂಡಿದ್ದೇನೆ ಈಗ ಏನು ಮಾಡುವುದು?

**ಈಗ, ನೀವು ಕೆಳಗೆ ನೀಡಿರುವ ಸಮಗ್ರ ಚಟುವಟಿಕೆಗಳ ಪಟ್ಟಿಯನ್ನು ಅನುಸರಿಸಿ ನಿಮ್ಮ ವಾರ್ಡ್ ಅನ್ನು ಸುಧಾರಿಸಬಹುದು**

ಕೆಳಗೆ ನೀಡಿರುವ ಚಾರ್ಟ್ , ನಿಮ್ಮ ವಾರ್ಡ್ ಸಮಿತಿಯ ಅಭಿವೃದ್ಧಿಯ ಪ್ರತಿಯೊಂದು ಹಂತದ ಬಗ್ಗೆ ಮಾರ್ಗದರ್ಶನ ನೀಡುತ್ತದೆ, ಅಂದರೆ ವಾರ್ಡ್ ಸಮಿತಿಯ ರಚನೆಯಿಂದ ಹಿಡಿದು ಅದರ ಸಂಪೂರ್ಣ ಸಾಮರ್ಥ್ಯವನ್ನು ಸಾಧಿಸುವ ಉಪಕ್ರಮಗಳ ಬಗ್ಗೆ ಹೇಳುತ್ತದೆ.

**ಎಲ್ಲರನ್ನು ಅನ್ವಯಿಸುವಂತೆ ನಾವು ಚಟುವಟಿಗಳ ವಿನ್ಯಾಸ ಮಾಡಿದ್ದೇವೆ. ಹಾಗಾದರೆ ಶುರು ಮಾಡೋಣ ಬನ್ನಿ**

ಸಂಕ್ಷಿಪ್ತ ರೂಪಗಳು

RWA - ನಿವಾಸಿಗಳ ಕ್ಷೇಮಾಭಿವೃದಿ ಸಂಘ

CSO - ನಾಗರಿಕ ಸಮಾಜ ಸಂಸ್ಥೆ

NGO -ಸರ್ಕಾರೇತರ ಸಂಘ

➡ ಈ ಬಾಣಗಳು ವಿವಿಧ ಹಂತದ ಕ್ರಿಯೆಯ ಹರಿವನ್ನು ಸೂಚಿಸುತ್ತವೆ

ಸೂಚಿಸಿದ ಹಂತಗಳನ್ನು ಅನುಸರಿಸಿದ ನಂತರ ನೀವು ಸಾಧಿಸಿದ ಮೈಲಿಗಲ್ಲುಗಳನ್ನು ಸೂಚಿಸುತ್ತದೆ

⟶ ಓದುವ ದಿಕ್ಕನ್ನು ಸೂಚಿಸುತ್ತದೆ



## ಅಭಿವೃದ್ಧಿ

- ಬಗೆಹರಿಯದ ಸಮಸ್ಯೆಗಳನ್ನು ನಿಮ್ಮ ಕೌನ್ಸಿಲರ್ ಮತ್ತು ಇತರೆ ಉನ್ನತ ಅಧಿಕಾರಿಗಳ ಗಮನಕ್ಕೆ ತನ್ನಿ ➡
- ಸಭೆಗಳಲ್ಲಿ ಬಗೆಹರಿಯದ ಸಮಸ್ಯೆಗಳನ್ನು ಚರ್ಚಿಸುವುದನ್ನು ಖಚಿತಪಡಿಸಿಕೊಳ್ಳಿ ➡
- ಮುಂದಿನ ಸಭೆಯಲ್ಲಿ ಹಿಂದಿನ ನಡಾವಳಿಗಳ ಆಧಾರದ ಮೇಲೆ ಕ್ರಮ ತೆಗೆದುಕೊಂಡ ವರದಿಯ (ATR) ಬಗ್ಗೆ ಚರ್ಚಿಸಿ ➡
- ಸಭೆಯ ನಡಾವಳಿಗಳನ್ನು ನಿಮ್ಮ ವಾರ್ಡ್ ಕಾರ್ಯದರ್ಶಿಯು, ನಗರ ಸರ್ಕಾರದ ವೆಬ್ಸೈಟಿನಲ್ಲಿ ಹಾಕುವಂತೆ ನೋಡಿಕೊಳ್ಳಿ ➡
- ವಾರ್ಡ್ ಸಮಿತಿ ಸಭೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಲು ಎಲ್ಲಾ ನಾಗರಿಕರನ್ನು ಪ್ರೋತ್ಸಾಹಿಸಿ ➡
- ವಾರ್ಡ್ ಸಮಿತಿ ಸಭೆಗಳ ವಿವರಗಳನ್ನು ಪ್ರಸಾರ ಮಾಡಲು ನಿಮ್ಮ ವಾರ್ಡ್ ಕಾರ್ಯದರ್ಶಿಯೊಂದಿಗೆ ಜೊತೆಗೂಡಿ ಕೆಲಸ ಮಾಡಿ ➡



## ರಚನೆ

### ಆ ವಾರ್ಡ್ ಸಮಿತಿಗಳನ್ನು ಸ್ಥಾಪಿಸಲು ಸರ್ಕಾರ ಅಧಿಸೂಚನೆ ಹೊರಡಿಸುತ್ತದೆ

- ನಿಮ್ಮ ನಗರ ಸರ್ಕಾರದಿಂದ ನಿಯಮಿತವಾಗಿ ಮಾಹಿತಿಗಳನ್ನು ಪಡೆಯಿರಿ
- ನಿಮ್ಮ ನಗರ ಆಯುಕ್ತರಿಗೆ ವಾರ್ಡ್ ಸಮಿತಿಯನ್ನು ರಚಿಸುವ ಮನವಿ ಪಾತ್ರವನ್ನು ಸಲ್ಲಿಸಿ
- ಆವೇಗವನ್ನು ಪಡೆಯಲು ಮುಖ್ಯವಾಹಿನಿಯ ಮಾಧ್ಯಮ/ ಸಾಮಾಜಿಕ ಮಾಧ್ಯಮವನ್ನು ಬಳಸಿಕೊಳ್ಳಿ
- ವಾರ್ಡ್ ಸಮಿತಿಗಳಾಗಿ ವಿಕಸನಗೊಳ್ಳುವ ಅಗತ್ಯತೆಯನ್ನು ಚರ್ಚಿಸಿ
- ಸಕ್ರಿಯ ನಾಗರಿಕರ ಸಮುದಾಯದೊಂದಿಗೆ ಸೇರಿ ನಿರಂತರವಾಗಿ ಕಾರ್ಯಕ್ರಮಗಳನ್ನು ಮಾಡುತ್ತ ಬನ್ನಿ
- ಸ್ವಯಂಸೇವಕ ಚಟುವಟಿಕೆಯನ್ನು ಆಯೋಜಿಸಿ ಮತ್ತು ಸಾಮಾಜಿಕ ಮಾಧ್ಯಮ ಗುಂಪನ್ನು ಸ್ಥಾಪಿಸಿ

### ಇ ವಾರ್ಡ್ ಸಮಿತಿ ಸಭೆಗಳನ್ನು ಆರಂಭಿಸಲಾಗಿದೆ

- ವಾರ್ಡ್ ಸಮಿತಿ ಸದಸ್ಯರನ್ನು ನೇಮಿಸಲಾಗಿದೆಯೇ ಇಲವೇ ಎಂದು ಖಚಿತಪಡಿಸಿಕೊಳ್ಳಲು ನಗರಾಡಳಿತದಿಂದ ಮಾಹಿತಿಯನ್ನು ಪಡೆದುಕೊಳ್ಳಿರಿ
- ವಾರ್ಡ್ ಸಮಿತಿ ಸದಸ್ಯ ಸ್ಥಾನಕ್ಕೆ ಅರ್ಜಿ ಸಲ್ಲಿಸಲು ನಿಮ್ಮ ಸಹ ನಾಗರಿಕರನ್ನು ಪ್ರೋತ್ಸಾಹಿಸಿ
- ನಿಮ್ಮ ವಾರ್ಡ್ ಸಮಿತಿ ಕಾರ್ಯದರ್ಶಿಯನ್ನು, ನಿಮ್ಮ ವಾರ್ಡ್‌ನ ಸಾಮಾಜಿಕ ಮಾಧ್ಯಮ ಗುಂಪಿಗೆ ಸೇರಿಸಿ
- ವಾರ್ಡ್ ಮಾರ್ಗದರ್ಶಕಗಳನ್ನು, ಸಾಮಾಜಿಕ ಜಾಲತಾಣ ಮತ್ತು ಕರಪತ್ರ ಇತ್ಯಾದಿಗಳ ಮೂಲಕ ಪ್ರಸಾರ ಮಾಡಿ ➡
- ನಿಮ್ಮ ಸಾಮಾಜಿಕ ಮಾಧ್ಯಮ ಗುಂಪಿನ ಮೂಲಕ ವಾರ್ಡ್ ಸಮಿತಿಗಳು ಹೇಗೆ ಕಾರ್ಯನಿರ್ವಹಿಸುತ್ತವೆ ಎಂಬುದರ ಕುರಿತು ನಾಗರಿಕರಿಗೆ ಶಿಕ್ಷಣ ನೀಡಿ ➡

- ನಿಮ್ಮ ಪ್ರದೇಶದಲ್ಲಿರುವ RWAs/CSOs/NGOಗಳೊಂದಿಗೆ ಸಂಪರ್ಕ ಬೆಳೆಸಿ ➡

### ಅ ನಿಮ್ಮ ನಗರದಲ್ಲಿ ವಾರ್ಡ್ ಸಮಿತಿಗಳನ್ನು ರಚಿಸಿಸಲು ಬೇಡಿಕೆಯನ್ನು ನಿರ್ಮಿಸಿ

**ವಾರ್ಡ್ ಸಮಿತಿ ಇಲ್ಲವೇ? ಇಲ್ಲಿಂದ ಪ್ರಾರಂಭಿಸಿ**





## ರೂಪಾಂತರ

ಶುಭಸುದ್ದಿ!!! ನಿಮ್ಮ ನಗರದಲ್ಲಿ ನಾಗರಿಕರ ಭಾಗವಹಿಸುವಿಕೆಗಾಗಿ ಸಾಂಸ್ಥಿಕ ವೇದಿಕೆಯನ್ನು ಸ್ಥಾಪಿಸುವಲ್ಲಿ ನೀವು ಯಶಸ್ವಿಯಾಗಿದ್ದೀರಿ

## ರೂಢಿ

- ಮುಂದಿನ ವಾರ್ಡ್ ಸಮಿತಿ ಸಭೆಯಲ್ಲಿ ಅನುಷ್ಠಾನದ ಮೇಲ್ವಿಚಾರಣೆ ಮತ್ತು ಪ್ರಗತಿಯನ್ನು ಚರ್ಚಿಸಿ.
- ಯೋಜಿತ ಕಾರ್ಯಗಳು ನಿಮ್ಮ ವಾರ್ಡ್‌ನಲ್ಲಿ ಎದುರಿಸುತ್ತಿರುವ ಸಮಸ್ಯೆಗಳೊಂದಿಗೆ ಪರಸ್ಪರ ಸಂಬಂಧ ಹೊಂದಿವೆ ಎಂಬುದರ ಬಗ್ಗೆ ಪರಿಶೀಲನೆ ಮಾಡಿ
- ಯೋಜಿತ ಮತ್ತು ಪ್ರಗತಿಯಲ್ಲಿರುವ ಕಾಮಗಾರಿಗಳ ಮಾಹಿತಿಯನ್ನು ಸಂಗ್ರಹಿಸಿ (ವರ್ಕ್ ಆರ್ಡರ್‌ಗಳು ಮತ್ತು ಟೆಂಡರ್‌ಗಳು)
- ವಾರ್ಡ್‌ನ ಬಜೆಟ್ ಹಂಚಿಕೆಯ ಕುರಿತು ನಿಮ್ಮ ವಾರ್ಡಿನ ಕೌನ್ಸಿಲರ್ ಮತ್ತು ವಾರ್ಡ್ ಕಾರ್ಯದರ್ಶಿಯೊಂದಿಗೆ ಚರ್ಚೆಯನ್ನು ಪ್ರಾರಂಭಿಸಿ

**ಈ** **ನಾಗರಿಕರ ಕುಂದುಕೊರತೆಗಳನ್ನು ವಾರ್ಡ್ ಸಮಿತಿಗಳ ಮೂಲಕ ಪರಿಹರಿಸಲಾಗುತ್ತಿದೆ**

- ವಾರ್ಡ್‌ಗಳಾದ್ಯಂತ ಸಹಯೋಗವನ್ನು ಉತ್ತೇಜಿಸಲು ವಾರ್ಡ್ ಸಮಿತಿಯ ಒಕ್ಕೂಟವನ್ನು ರಚಿಸಿ
- ಸಾಮಾಜಿಕ ಮಾಧ್ಯಮ, ಎಲೆಕ್ಟ್ರಾನಿಕ್ ಮಾಧ್ಯಮ ಮತ್ತು ಮುದ್ರಣ ಮಾಧ್ಯಮದ ಮೂಲಕ ವಾರ್ಡ್ ಸಮಿತಿ ಸಭೆಗಳ ಯಶಸ್ಸಿನ ಕಥೆಗಳನ್ನು ಹಂಚಿಕೊಳ್ಳಿ

**ಉ** ವಾರ್ಡ್ ಸಮಿತಿ ಸಭೆಗಳು, ವಾರ್ಡ್ ಯೋಜನೆ ಮತ್ತು ಅಭಿವೃದ್ಧಿಯತ್ತ ಕೇಂದ್ರಿತವಾಗಿರುತ್ತದೆ

**ಊ** ವಾರ್ಡ್ ಅಭಿವೃದ್ಧಿ ಯೋಜನೆಗಳು ಮತ್ತು ವಾರ್ಡ್ ಬಜೆಟ್‌ಗಳನ್ನು ರಚಿಸಿ



## ಸಕ್ರಿಯ ನಾಗರಿಕ ಶಿವ ಹೇಳುತ್ತಾರೆ

ನಿಮ್ಮ ವಾರ್ಡಗೆ ಅಗತ್ಯವಿರುವ ಸಕ್ರಿಯ ನಾಗರಿಕರಾಗುವ ಮೊದಲು, ಈ ಕೆಳಗಿನ ಮಾಹಿತಿಯನ್ನು ನಿಮ್ಮ ಬಳಿ ಇಟ್ಟುಕೊಳ್ಳಲು ಮರೆಯದಿರಿ:

1. **ವಾರ್ಡ್ ಹೆಸರು ಮತ್ತು ಸಂಖ್ಯೆ**
2. **ವಾರ್ಡ್ ಕೌನ್ಸಿಲರ್ ಹೆಸರು ಮತ್ತು ಸಂಪರ್ಕ ಮಾಹಿತಿ**
3. **ವಾರ್ಡ್ ಸಮಿತಿ ಕಾರ್ಯದರ್ಶಿಯ ಹೆಸರು ಮತ್ತು ಸಂಪರ್ಕ ಮಾಹಿತಿ**
4. **ನಿಮ್ಮ ಪ್ರದೇಶದಲ್ಲಿ ವಾರ್ಡ್ ಸಮಿತಿಯ ಸ್ಥಿತಿ**

ಇದು ಪೌರ ಸಂಸ್ಥೆಗಳೊಂದಿಗೆ ನೀವು ನಡೆಸುವ ಪ್ರತಿಯೊಂದು ಸಂವಾದದಲ್ಲಿ ನಿಮಗೆ ಬೇಕಾಗುವ ಮಾಹಿತಿಯಾಗಿದೆ.

ಇವುಗಳಲ್ಲಿ ಯಾವುದಾದರು ಬಗ್ಗೆ ನಿಮಗೆ ಅನುಮಾನವಿದ್ದರೆ ಅಧ್ಯಾಯಗಳನ್ನು ಮತ್ತೊಮ್ಮೆ ಓದಿಕೊಳ್ಳಿ.

# 6.4 ಚಟುವಟಿಕೆಯ ಮನೆ




**ನೀವು ಪ್ರಾರಂಭಗೊಳ್ಳಲು ಮೇಲಿನ ನಕ್ಷೆ ಅಲ್ಲದೆ, ನಿಮಗೆ ನೆರವಾಗಲಿರುವ ವಿಷಯಗಳು ಇಲ್ಲಿವೆ:**

01 ಹತ್ತಿರದ RWAಗಳೊಂದಿಗೆ ಸಂಪರ್ಕ ಸಾಧಿಸಿ ಮತ್ತು ಸಮಾನ ಮನಸ್ಕ ನಾಗರಿಕರಿಗಾಗಿ ಕಾರ್ಯಕ್ರಮಗಳನ್ನು ಆಯೋಜಿಸಿ (ಪುಟ 84 ಇದನ್ನು ಹೇಗೆ ಮಾಡಬೇಕೆಂಬುದರ ಕುರಿತು ಸೂಕ್ತ ಮಾರ್ಗಸೂಚಿಯನ್ನು ಹೊಂದಿದೆ).



**02** ನಿಮ್ಮ ನೆರೆಹೊರೆಯಲ್ಲಿರುವ ಆಸಕ್ತ ನಾಗರಿಕರೊಂದಿಗೆ ವಾಟ್ಸಪ್ಪ್ ಗುಂಪನ್ನು ರಚಿಸಿ (ಪುಟ 95 ರಲ್ಲಿ ಅಂಶಗಳು ಲಭ್ಯ ಇವೆ). ಕಾಲಾನಂತರದಲ್ಲಿ, ಇದು ಸಕ್ರಿಯ ನಾಗರಿಕ ಸಮೂಹವಾಗಿ ವಿಕಸನಗೊಳ್ಳಬಹುದು!



---

**03** ನಿಮ್ಮ ವಾರ್ಡ್ ಸಮಿತಿಗಳ ಬಗ್ಗೆ ಚಿಂತೆ ವ್ಯಕ್ತಪಡಿಸಲು ನಿಮ್ಮ ನಗರ ಸರ್ಕಾರದ ಮುಖ್ಯಸ್ಥರನ್ನು ಸಂಪರ್ಕಿಸಿ (ಪೌರ ಅಧಿಕಾರಿಗಳು ಮತ್ತು ನಗರ ಆಯುಕ್ತರನ್ನು ಹೇಗೆ ಸಂಪರ್ಕಿಸುವುದು ಎಂಬುದರ ಕುರಿತು ಸಲಹೆಗಳು ಪುಟ 91 ಮತ್ತು ಪುಟ 92 ರಲ್ಲಿ ಲಭ್ಯ ಇವೆ).



---

**04** ನಿಮ್ಮ ನೆರೆಹೊರೆಯಲ್ಲಿನ ನಾಗರಿಕ ಸಮಸ್ಯೆಗಳ ಕುರಿತು ಪತ್ರಿಕಾ ಪ್ರಕಟಣೆಯನ್ನು ಸಿದ್ಧಪಡಿಸಿ ಮತ್ತು ಸ್ಥಳೀಯ ಮಾಧ್ಯಮವನ್ನು ಸಂಪರ್ಕಿಸಿ ಮಾಧ್ಯಮಗಳೊಂದಿಗೆ ಹೇಗೆ ತೊಡಗಿಸಿ ಕೊಳ್ಳುವುದು ಮತ್ತು ಸರಳವಾಗಿ ಪತ್ರಿಕಾ ಪ್ರಕಟಣೆಯ ಕರಡನ್ನು ಹೇಗೆ ಸಿದ್ದಪಡಿಸುವುದೆಂದು ಪುಟ 87 ಮತ್ತು 88 ರಲ್ಲಿ ತಿಳಿದುಕೊಳ್ಳಿ.



# 07

# ಮುಂದೆ ಸಾಗುವ ದಾರಿ



ಭಾರತದ ಸಾಮಾಜಿಕ ಮತ್ತು ಆರ್ಥಿಕ ಪ್ರಗತಿಯು ಅದರ ನಗರಗಳಲ್ಲಿನ ಜೀವನದ ಗುಣಮಟ್ಟದೊಂದಿಗೆ ಹತ್ತಿರದ ಸಂಬಂಧ ಹೊಂದಿದೆ. ಹಾಗು ಜೀವನಗುಣಮಟ್ಟವು ಸರ್ಕಾರಗಳ ಮೇಲೆ ಎಷ್ಟು ಅವಲಂಬಿತವಾಗಿದೆಯೋ ಅಷ್ಟೇ ನಾಗರಿಕರ ಮೇಲೆಯೇ ಅವಲಂಬಿತವಾಗಿದೆ.

ವಾರ್ಡ್ ಸಮಿತಿಗಳು ಧನಾತ್ಮಕವಾಗಿ ಬದಲಾವಣೆಯನ್ನು ತರಲು ನಾಗರಿಕರಿಗೆ ಅತ್ಯಂತ ಪರಿಣಾಮಕಾರಿ ವೇದಿಕೆಯನ್ನು ನೀಡುತ್ತದೆ. ಅವು ಸಾಂವಿಧಾನಿಕ ಸಿಂಧುತ್ವವನ್ನು ಹೊಂದಿವೆ ಮತ್ತು ಒಳಗೊಳ್ಳುವಿಕೆಯ ವಿನ್ಯಾಸವನ್ನು ಕೂಡ ಹೊಂದಿವೆ. ಆದರೂ ನಮ್ಮ ಹೆಚ್ಚಿನ ನಗರಗಳಲ್ಲಿ ಮತ್ತು ಪಟ್ಟಣಗಳಲ್ಲಿ ಇನ್ನೂ ವಾರ್ಡ್ ಸಮಿತಿಗಳನ್ನು ರಚಿಸಬೇಕಾಗಿದೆ.

## ಆದರೆ ಇನ್ನೂ ಭರವಸೆ ಇದೆ!

ಪ್ರಜಾಪ್ರಭುತ್ವದಲ್ಲಿ ನಾಗರಿಕರ ಭಾಗವಹಿಸುವಿಕೆಯನ್ನು ಗಾಢವಾಗಿಸುವ ಆಂದೋಲನವು ಕಾಲದಿಂದಲೂ ಬಲವಾಗಿಲ್ಲ. ಹಾಗಾಗಿ, ನಾಗರಿಕರಲ್ಲಿ ಹೆಚ್ಚುತ್ತಿರುವ ಜಾಗೃತಿಯನ್ನು ನಾವು ನೋಡುತ್ತಿದ್ದೇವೆ. ದೇಶದ ವಿವಿಧ ಮೂಲೆಗಳಿಂದ ಬದಲಾವಣೆ ಮತ್ತು ಯಶಸ್ಸಿನ ಕಥೆಗಳು ಆತ್ಮವಿಶ್ವಾಸವನ್ನು ನವೀಕರಿಸುತ್ತಿವೆ ಮತ್ತು ಹೊಸಸಾಧ್ಯತೆಗಳನ್ನು ತೆರೆಯುತ್ತಿವೆ. ಇಂದು, ನಾಗರಿಕರಲ್ಲಿ ತಮ್ಮ ನಗರಕ್ಕಾಗಿ ತಮ್ಮ ಕೆಲಸವನ್ನು ಮಾಡಲು ಹೆಚ್ಚಿನ ಇಚ್ಛೆ ಮತ್ತು ಉತ್ಸಾಹವಿದೆ.

ಬಹುಶಃ ಪ್ರತಿಯೊಬ್ಬ ನಾಗರಿಕನಿಗೂ ವಾರ್ಡ್ ಸಮಿತಿಗಳನ್ನು ಪ್ರವೇಶಿಸಲು ದಾರಿ ಸಿಗುವ ದಿನ ಇನ್ನೇನು ತುಂಬಾ ದೂರವಿಲ್ಲ; ಅವರ ತಮ್ಮ ಸಮಸ್ಯೆಗಳನ್ನು ವರದಿ ಮಾಡಲು ಮಾತ್ರವಲ್ಲದೆ ಉತ್ತಮ ನಾಳೆಯನ್ನು ನಿರ್ಮಿಸಲು ಈ ಸಮಿತಿಗಳನ್ನು ಬಳಸಲಾರಂಭಿಸುತ್ತಾರೆ.



# ಅನುಬಂಧ

## ಒಂದು ಉದ್ದೇಶಕ್ಕಾಗಿ ನಾಗರಿಕರನ್ನು ಸಜ್ಜುಗೊಳಿಸಲು ಅಭಿಯಾನವನ್ನು ಹೇಗೆ ನಡೆಸುವುದು



### ಅಭಿಯಾನ ಕಾರ್ಯಕ್ರಮದ ಮೊದಲು:

- ಕುತೂಹಲವನ್ನು ಹುಟ್ಟುಹಾಕಲು ಮತ್ತು ಹೆಚ್ಚಿನ ನಾಗರಿಕರನ್ನು ಆಕರ್ಷಿಸಲು ನಿಮ್ಮ ಉದ್ದೇಶಕ್ಕೆ ಆಕರ್ಷಕ ಹೆಸರನ್ನು ನೀಡಿ ಬೆಂಗಳೂರು, ಮಂಗಳೂರು ಮತ್ತು ಕಲಬುರಗಿ ನಿವಾಸಿಗಳು ನಗರದ ಬಜೆಟ್ಗಳಲ್ಲಿ ನಾಗರಿಕರ ಸಲಹೆಗಳನ್ನು ಒಳಗೊಂಡಿರುವ ನನ್ನ ನಗರ ನನ್ನ ಬಜೆಟ್ ಅಭಿಯಾನದ ಬಗ್ಗೆ ತಿಳಿದಿರಬಹುದು



- ಸಾಮಾಜಿಕ ಮಾಧ್ಯಮದ ಮೂಲಕ ಕಾರಣ ಮತ್ತು ಕಾರ್ಯಕ್ರಮದ ವಿವರಗಳನ್ನು ಪ್ರಚೂರ ಪಡಿಸಿ



- ಸಮಾನ ಮನಸ್ಕ ನಾಗರಿಕರೊಂದಿಗೆ ಗುಂಪುಗಳನ್ನು ರಚಿಸಲು ಮತ್ತು ನಾಗರಿಕರ ಡೈರೆಕ್ಟರಿಯನ್ನು ರಚಿಸಲು (ಅವರ ಒಪ್ಪಿಗೆಯೊಂದಿಗೆ) ಸಾಮಾಜಿಕ ಮಾಧ್ಯಮವನ್ನು ಬಳಸಿ.

- ಗುಂಪನ್ನು ಸಕ್ರಿಯವಾಗಿರಿಸಿ ಮತ್ತು ಭವಿಷ್ಯದ ಕಾರ್ಯಕ್ರಮಗಳನ್ನು ಪ್ರಚಾರ ಮಾಡಲು ಅದನ್ನು ಬಳಸಿ. ಒಮ್ಮೆ ನೀವು ಗುಂಪಿನಲ್ಲಿ ಗರಿಷ್ಠ ಸಂಖ್ಯೆಯ ಸದಸ್ಯರನ್ನು ತಲುಪಿದ ನಂತರ, ನೀವು ಅದೇ ಹೆಸರಿನೊಂದಿಗೆ ಹೆಚ್ಚುವರಿ ಗುಂಪುಗಳನ್ನು ರಚಿಸಬಹುದು (ಉದಾಹರಣೆಗೆ, MyCityMyBudget ಗುಂಪು 1, MyCityMyBudget ಗುಂಪು 2).



❖ ಕಾರ್ಯಕ್ರಮ ಕುರಿತು ನಿಯಮಿತ ಸುದ್ದಿ/ಮಾಹಿತಿಗಳನ್ನು ಪೋಸ್ಟ್ ಮಾಡಲು ಮತ್ತು ಕೆಳಗಿನ ಮಾಹಿತಿಯನ್ನು ಸೇರಿಸಲು ಮರೆಯದಿರಿ:

01 ದಿನಾಂಕ, ಸ್ಥಳ ಮತ್ತು ಸಮಯ

02 ಕಾರ್ಯಸೂಚಿ

03 ಕಾರ್ಯಕ್ರಮದಲ್ಲಿ ಏನು ನೀಡಲಾಗುವುದು

04 ನಾಗರಿಕರು ಏನನ್ನು ತರಬೇಕಾಗಬಹುದು



❖ ಕಾರ್ಯಕ್ರಮದ ಸಮಯದಲ್ಲಿ ನೀರು ಮತ್ತು ಇತರ ಅಗತ್ಯ ಅನುಕೂಲಗಳ ಲಭ್ಯತೆಗಾಗಿ ವ್ಯವಸ್ಥೆ ಮಾಡಿ.

❖ ಪೊಲೀಸ್, ಟ್ರಾಫಿಕ್, ಮುನ್ಸಿಪಾಲಿಟಿ ಮುಂತಾದ ಅಧಿಕಾರಿಗಳಿಂದ ಯಾವುದೇ ಅಗತ್ಯ ಅನುಮತಿಗಳನ್ನು ಪಡೆಯಲಾಗಿದೆಯೆ ಎಂದು ಖಚಿತಪಡಿಸಿಕೊಳ್ಳಿ.



## ಅಭಿಯಾನ ನಡೆಯುವ ಸಮಯದಲ್ಲಿ:

❖ ಎಲ್ಲಾ ಅಗತ್ಯ ಸುರಕ್ಷತಾ ಕ್ರಮಗಳನ್ನು ಒಳಪಡಿಸಲಾಗಿದೆಯೇ ಎಂದು ಖಚಿತಪಡಿಸಿಕೊಳ್ಳಿ.



❖ ಅಭಿಯಾನದ ಬೆಳವಣಿಗೆ ಮತ್ತು ಪ್ರಗತಿಯನ್ನು ಪತ್ತೆಹಚ್ಚಲು ಹಾಜರಾತಿಯನ್ನು ತೆಗೆದುಕೊಳ್ಳಿ.



❖ ಹಾಜರಾಗುವ ನಾಗರಿಕರನ್ನು ಸಂಭಾಷಣೆಯಲ್ಲಿ ತೊಡಗಿಸಿಕೊಳ್ಳಿ ಅವರ ಆಸಕ್ತಿಗಳನ್ನು ಅರ್ಥಮಾಡಿಕೊಳ್ಳಲು, ಕಾರ್ಯಕ್ರಮದಿಂದ ಅವರು ಏನು ಪಡೆಯಲು ಆಶಿಸುತ್ತಾರೆ ಮತ್ತು ಅವರು ಉದ್ದೇಶಕ್ಕೆ ಹೇಗೆ ಕೊಡುಗೆ ನೀಡಬಹುದು ಎಂಬುದನ್ನು ಅರ್ಥಮಾಡಿಕೊಳ್ಳಿ.



❖ ಹಾಜರಾಗುವ ನಾಗರಿಕರನ್ನು ಅಸ್ತಿತ್ವದಲ್ಲಿರುವ ಸಾಮಾಜಿಕ ಮಾಧ್ಯಮ ಗುಂಪುಗಳಿಗೆ ಸೇರಿಸಲು ಅವರಿಂದ ಸಮ್ಮತಿಯನ್ನು ಪಡೆಯಿರಿ.



❖ ನಾಗರಿಕರ ಡೈರೆಕ್ಟರಿಗಾಗಿ ಸೇರಲು ಒಪ್ಪಿಗೆ ನೀಡುವ ನಾಗರಿಕರಿಂದ ಈ ಕೆಳಗಿನ ಮಾಹಿತಿಯನ್ನು ಸಂಗ್ರಹಿಸಿ ಮತ್ತು ಸೇರಿಸಿ:

01 ಹೆಸರು

02 ದೂರವಾಣಿ ಸಂಖ್ಯೆ

03 ವಾರ್ಡ್ ಹೆಸರು ಮತ್ತು ಸಂಖ್ಯೆ

04 ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ ವಿವರಗಳು.

❖ ಕಾರ್ಯಕ್ರಮದ ಫೋಟೋಗಳನ್ನು ಕ್ಲಿಕ್ ಮಾಡಿ ಮತ್ತು ಅದನ್ನು ದಾಖಲಿಸಲು ಮರೆಯದಿರಿ.



❖ ನಿಮ್ಮ ಅವಲೋಕನಗಳನ್ನು ದಾಖಲೆ/ರೆಕಾರ್ಡ್ ಮಾಡಿ.



## ಅಭಿಯಾನದ ನಂತರ:

❖ ನಿಮ್ಮ ಕಾರ್ಯಕ್ರಮದ ಫೋಟೋಗಳನ್ನು ಸಾಮಾಜಿಕ ಮಾಧ್ಯಮ ಮತ್ತು ಇತರ ಕಾರ್ಯಕ್ರಮದ ಪ್ರಸಾರ ವೇದಿಕೆಗಳಲ್ಲಿ ಪೋಸ್ಟ್ ಮಾಡಿ.



❖ ಯಶಸ್ಸಿನ ಕಥೆಗಳನ್ನು ವಿವರಿಸುವ ವರದಿಯನ್ನು ಸಂಗ್ರಹಿಸಿ ಮತ್ತು ಕರಡು ಮಾಡಿ.



❖ ನಿಮ್ಮ ಕಾರ್ಯಕ್ರಮವನ್ನು ಪ್ರಚಾರ ಮಾಡಲು ಮತ್ತು ಯಶಸ್ಸಿನ ಕಥೆಗಳನ್ನು ಹಂಚಿಕೊಳ್ಳಲು ಪತ್ರಿಕಾ ಮತ್ತು ಡಿಜಿಟಲ್ ಮಾಧ್ಯಮ ಸಂಸ್ಥೆಗಳನ್ನು ಸಂಪರ್ಕಿಸಿ.



❖ ಸಮುದಾಯದಾದ್ಯಂತ ವಿವಿಧ ನಾಗರಿಕ ಗುಂಪುಗಳೊಂದಿಗೆ ಕಾರ್ಯಕ್ರಮದ ವರದಿಗಳನ್ನು ಹಂಚಿಕೊಳ್ಳಿ.



❖ ಸಕ್ರಿಯ ನಾಗರಿಕ ಸಮುದಾಯವನ್ನು ಬೆಳೆಸಲು ಇದೇ ರೀತಿಯ ಕಾರ್ಯಕ್ರಮಗಳನ್ನು ನಡೆಸಿ ಮತ್ತು ಹಂಚಿಕೊಳ್ಳಿ.



❖ ವಾರ್ಡ್ ಸಮಿತಿಗಳು ಮತ್ತು ಅವುಗಳ ಬದಲಾವಣೆಯ ಸಾಮರ್ಥ್ಯದ ಬಗ್ಗೆ ಜಾಗೃತಿ ಮೂಡಿಸಿ.



# ಮಾಧ್ಯಮದೊಂದಿಗೆ ಹೇಗೆ ತೊಡಗಿಸಿಕೊಳ್ಳುವುದು



## ಸಾಂಪ್ರದಾಯಿಕ/ಪತ್ರಿಕಾ ಮಾಧ್ಯಮ

ಪತ್ರಿಕಾ ಮಾಧ್ಯಮವು ಸಮಾಜದಲ್ಲಿ ಧನಾತ್ಮಕ ಬದಲಾವಣೆಯನ್ನು ತರುವ ಅತ್ಯಂತ ಪ್ರಮುಖ ಸಂಸ್ಥೆಗಳಲ್ಲಿ ಒಂದಾಗಿದೆ. ನಿಮ್ಮ ಕೆಲಸ, ಪೋಸ್ಟ್ ಗಳು, ವೀಡಿಯೊಗಳು ಮತ್ತು ಸಂಪಾದಕರಿಗೆ ಬರೆದ ಪತ್ರಗಳ ಮೂಲಕ ನೀವು ಸಾಂಪ್ರದಾಯಿಕ ಮಾಧ್ಯಮ ಸಂಸ್ಥೆಗಳ ಗಮನವನ್ನು ಸೆಳೆಯಬಹುದು.

**ಪತ್ರಿಕಾ ಮಾಧ್ಯಮದೊಂದಿಗೆ ತೊಡಗಿಸಿಕೊಳ್ಳುವಾಗ ನೆನಪಿನಲ್ಲಿಡಬೇಕಾದ ಕೆಲವು ವಿಷಯಗಳು ಇಲ್ಲಿವೆ:**

- ವಾರ್ಡ್ ಸಮಿತಿಗಳಿಗೆ ಬೆಂಬಲವನ್ನು ಕ್ರೂಡೀಕರಿಸಿ ಮತ್ತು ನಾಗರಿಕ ಸಾಮೂಹಿಕವಾಗಿ ಸಂಘಟಿತ ವೇದಿಕೆಯನ್ನು ಪ್ರಸ್ತುತಪಡಿಸಿ.[3]
- ನಿಮ್ಮ ಸಮೂಹದ ವಕ್ತಾರರನ್ನು ಗುರುತಿಸಿ ಮತ್ತು ಅವರಿಗೆ ಪತ್ರಿಕಾ ಸಂವಹನ ಮತ್ತು ಪತ್ರಿಕಾ ಹೇಳಿಕೆಗಳನ್ನು ಬಿಡುಗಡೆ ಮಾಡುವ ಜವಾಬ್ದಾರಿಯನ್ನು ನೀಡಿ.
- ಸ್ಥಳೀಯ ಪ್ರೆಸ್ ಕ್ಲಬ್ ಅನ್ನು ಗುರುತಿಸಿ ಮತ್ತು ಅವರೊಂದಿಗೆ ಸಂಪರ್ಕದಲ್ಲಿರಿ.
- ನಿಮ್ಮ ನಗರದಲ್ಲಿ ನಾಗರಿಕ ಸಮಸ್ಯೆಗಳ ಕುರಿತು ಬರೆಯುವ ಸ್ಥಳೀಯ ವರದಿಗಾರರನ್ನು ಗುರುತಿಸಲು ನಿಯಮಿತವಾಗಿ ಪತ್ರಿಕಾ ಮಾಧ್ಯಮವನ್ನು ಅನುಸರಿಸಿ.
- ಅಂತಹ ವರದಿಗಾರರೊಂದಿಗೆ ಸಂಬಂಧವನ್ನು ಬೆಳೆಸಿಕೊಳ್ಳಿ ಮತ್ತು ಕಾಪಾಡಿಕೊಳ್ಳಿ.
- ಪತ್ರಿಕೆಯ ಗಮನ ಸೆಳೆಯಲು ನೀವು ಪತ್ರಿಕೆಯ ಸಾಮಾಜಿಕ ಮಾಧ್ಯಮ ಪೋಸ್ಟ್ಗಳಲ್ಲಿ ಕಾಮೆಂಟ್ ಮಾಡಬಹುದು.
- ನೀವು ವೃತ್ತಪತ್ರಿಕೆ ಕಚೇರಿಗೆ ಭೇಟಿ ನೀಡಿ, ನಿಮ್ಮನ್ನು ಪರಿಚಯಿಸಿಕೊಳ್ಳಬಹುದು ಮತ್ತು ನಿಮ್ಮ ಉದ್ದೇಶದ ಬಗ್ಗೆ ಅವರೊಂದಿಗೆ ಹಂಚಿಕೊಳ್ಳಬಹುದು.
- ನಾಗರಿಕ ಸಾಮೂಹಿಕವಾಗಿ ನಿಮ್ಮ ಉದ್ದೇಶಗಳು ಮತ್ತು ಕಾಳಜಿಗಳನ್ನು ಸ್ಪಷ್ಟವಾಗಿ ತಿಳಿಸುವ ಪತ್ರಿಕಾ ಪ್ರಕಟಣೆಯನ್ನು ನೀಡಿ (ಪತ್ರಿಕಾ ಪ್ರಕಟಣೆಯನ್ನು ಹೇಗೆ ಬರೆಯುವುದು ಎಂಬುದರ ಕುರಿತು ಸಲಹೆಗಳಿಗಾಗಿ ಮುಂದಿನ ಅಧ್ಯಾಯವನ್ನು ನೋಡಿ).
- ಪ್ರಚಾರದ ಪ್ರಮುಖ ಅಂಶಗಳ ಬಗ್ಗೆ ಮಾಧ್ಯಮಗಳಿಗೆ ತಿಳಿಸಲು ಪತ್ರಿಕಾಗೋಷ್ಠಿಯನ್ನು ನಡೆಸಿ. ನಿಮ್ಮ ಉದ್ದೇಶದ ಬಗ್ಗೆ ಜಾಗೃತಿ ಮೂಡಿಸಲು ನೀವು ಪತ್ರಿಕೆಗಳ ಸಂಪಾದಕರಿಗೆ ಪತ್ರಗಳನ್ನು ಬರೆಯಬಹುದು.
- ಸಾಮಾಜಿಕ ಮಾಧ್ಯಮದಲ್ಲಿ ನಿಮ್ಮ ಪತ್ರಿಕಾ ಪ್ರಕಟಣೆಗಳು ಮತ್ತು ಸಂಪಾದಕೀಯಗಳನ್ನು ಮರುಪೋಸ್ಟ್ ಮಾಡಲು ಮತ್ತು ಹಂಚಿಕೊಳ್ಳಲು ಮತ್ತು ನಿಮ್ಮ ನಾಗರಿಕ ಸಾಮೂಹಿಕ ಮತ್ತು ಸಂಬಂಧಿತ ನಗರ ಅಧಿಕಾರಿಗಳನ್ನು ಟ್ಯಾಗ್ ಮಾಡಲು ಮರೆಯದಿರಿ.



3 ನಾಗರಿಕ ಸಮೂಹಗಳ ಕುರಿತು ಇನ್ನಷ್ಟು ತಿಳಿದುಕೊಳ್ಳಲು, ಪರಿವರ್ತನೆಯ ಹಂತಗಳನ್ನು, ಅಧ್ಯಾಯ 6 ರಲ್ಲಿ ನೋಡಿ

## ಡಿಜಿಟಲ್ / ಎಲೆಕ್ಟ್ರಾನಿಕ್ ಮಾಧ್ಯಮ (ಟಿವಿ, ವೆಬ್, ಎಫ್‌ಎಂ ರೇಡಿಯೋ, ಸುದ್ದಿ ಅಪ್ಲಿಕೇಶನ್ಗಳು, ವ್ಲಾಗ್ ಗಳು, ಬ್ಲಾಗ್ ಗಳು, ಇತ್ಯಾದಿ)

ಡಿಜಿಟಲ್ ಮಾಧ್ಯಮದ ಗಮನ ಸೆಳೆಯಲು ಪ್ರಮುಖ ಅಂಶವೆಂದರೆ ಜನರ ಭಾಗವಹಿಸುವಿಕೆ, ಪ್ರಸ್ತುತ ಸಂದರ್ಭದಲ್ಲಿ ಸಮಸ್ಯೆಯ ಪ್ರಸ್ತುತತೆ ಮತ್ತು ಅದನ್ನು ಬಿಂಬಿಸುವ ಸೃಜನಶೀಲತೆ, ನಾವೀನ್ಯತೆ ಅಥವಾ ವಿಶಿಷ್ಟತೆ (ಜನಸಮೂಹ, ಮಾನವ ಸರಪಳಿಗಳು, ಇತ್ಯಾದಿಯಂತಹ ನವೀನ ವಿಧಾನದ ಅಭಿಯಾನಗಳನ್ನು ಯೋಚಿಸಿ).

**ಸಕ್ರಿಯ ನಾಗರಿಕರಾಗಿ ಡಿಜಿಟಲ್ ಮಾಧ್ಯಮವನ್ನು ಬಳಸಿಕೊಳ್ಳಲು ಕೆಲವು ಸಲಹೆಗಳು ಇಲ್ಲಿವೆ:**

- ❖ ನಾಗರಿಕ ಸಮಸ್ಯೆಗಳ ಮೇಲೆ ಕೇಂದ್ರೀಕರಿಸುವ ಮತ್ತು ನಿಮ್ಮ ನಗರದಲ್ಲಿ ಈ ವಿಷಯಗಳ ಕುರಿತು ಚರ್ಚೆಗಳು ಅಥವಾ ಚರ್ಚೆಗಳನ್ನು ನಡೆಸುವ ಸಾಮಾಜಿಕ ಮಾಧ್ಯಮ ಚಾನಲ್ಗಳೊಂದಿಗೆ ಸಂಪರ್ಕ ಸಾಧಿಸಿ.
- ❖ ನೀವು ಕೆಲಸ ಮಾಡುತ್ತಿರುವ ಉದ್ದೇಶ ಮತ್ತು ನೀವು ಭಾಗವಾಗಿರುವ ನಾಗರಿಕ ಸಮೂಹದ ಪ್ರಾಮುಖ್ಯತೆ ಮತ್ತು ಪರಿಣಾಮವನ್ನು ವಿವರಿಸಿ.
- ❖ ಅವರೊಂದಿಗೆ ಸಂಪರ್ಕ ಮಾಹಿತಿಯನ್ನು ವಿನಿಮಯ ಮಾಡಿಕೊಳ್ಳಿ ಮತ್ತು ಸಂಪರ್ಕದಲ್ಲಿರಿ.
- ❖ ಕಾರ್ಯಕ್ರಮಗಳು ಮತ್ತು ಪ್ರಚಾರಗಳ ಸಮಯದಲ್ಲಿ ಅವರನ್ನು ಭೇಟಿ ಮಾಡಿ ಮತ್ತು ನಿಮ್ಮ ಅಭಿಯಾನದ ಕುರಿತು ಪ್ರಚಾರ/ ಪ್ರಸಾರಕ್ಕಾಗಿ ಅವರ ಸಹಾಯವನ್ನು ಪಡೆಯಿರಿ.

# ಪತ್ರಿಕಾ ಪ್ರಕಟಣೆಯನ್ನು ಹೇಗೆ ರಚಿಸುವುದು



ಪತ್ರಿಕಾ ಪ್ರಕಟಣೆಗಳು ಮಾಧ್ಯಮದೊಂದಿಗೆ ತೊಡಗಿಸಿಕೊಳ್ಳಲು ಮತ್ತು ಅವರ ಗಮನವನ್ನು ಸೆಳೆಯಲು ಪ್ರಮುಖ ಮಾರ್ಗವಾಗಿದೆ.

**ನೀವು ಪ್ರಾರಂಭಿಸಲು ಸಹಾಯ ಮಾಡಲು ಕೆಲವು ಸಲಹಾ ಅಂಶಗಳು ಇಲ್ಲಿವೆ:**

- ❖ ಮೇಲ್ಭಾಗದಲ್ಲಿ ನಿಮ್ಮ ನಾಗರಿಕ ಸಮೂಹದ ಲಾಂಛನ (ಲೋಗೋ) ಸೇರಿಸಿ. ನೀವು ಲೋಗೋ ಹೊಂದಿಲ್ಲದಿದ್ದರೆ, ಸಮೂಹದ ಸಂಪರ್ಕ ಮಾಹಿತಿಯೊಂದಿಗೆ ನಿಮ್ಮ ಸಮೂಹದ ಹೆಸರನ್ನು ಸೇರಿಸಿ. ಪತ್ರಿಕಾ ಪ್ರಕಟಣೆಗಾಗಿ ಸಮೂಹದ ಲೆಟರ್‌ಹೆಡ್ ಅನ್ನು ಸಹ ನೀವು ವಿನ್ಯಾಸ ಮಾಡಿಕೊಂಡು ಅದನ್ನು ಬಳಸಬಹುದು.
- ❖ ಪತ್ರಿಕಾ ಪ್ರಕಟಣೆಯ ವಿಷಯವನ್ನು ನಿಮ್ಮ ಪ್ರಕಟಣೆಯ ಪತ್ರದ ವಿಷಯದಲ್ಲಿ ದಪ್ಪಕ್ಷರಗಳಲ್ಲಿ ದಲ್ಲಿ ಸೇರಿಸಿ. ಉದಾಹರಣೆಗೆ, ನೀವು ಅಭಿಯಾನಕ್ಕೆ ಪತ್ರಿಕಾಗೋಷ್ಠಿಯನ್ನು ಆಹ್ವಾನಿಸುತ್ತಿದ್ದರೆ, ನೀವು "<date> ರಂದು <ಅಭಿಯಾನದ ಹೆಸರು> ಗೆ ಆಹ್ವಾನ" ನಂತಹದನ್ನು ಬಳಸಬಹುದು. ನಿಮ್ಮ ಪತ್ರಿಕಾ ಪ್ರಕಟಣೆಯು ಪ್ರಚಾರದ ಬಗ್ಗೆ ಇದ್ದರೆ, ನೀವು ವಿಷಯದ ಬಗ್ಗೆ ಗಮನ ಸೆಳೆಯುವ ಮಾಹಿತಿಯನ್ನು ಸೇರಿಸಬಹುದು.
- ❖ ಅಭಿಯಾನದ ಉದ್ದೇಶ ಅಥವಾ ಅಭಿಯಾನದ ಹೆಸರನ್ನು ಸೇರಿಸಲು ಮರೆಯದಿರಿ ಜೊತೆಗೆ ನೀವು ಇದಕ್ಕಾಗಿ ಬಳಸುತ್ತಿರುವ ಯಾವುದೇ ಸಾಮಾಜಿಕ ಮಾಧ್ಯಮ ಹ್ಯಾಂಡಲ್ಗಳು ಮತ್ತು ಹ್ಯಾಶ್ಟ್ಯಾಗ್ಗಳನ್ನು ಸೇರಿಸಿ.
- ❖ ಪತ್ರಿಕಾ ಪ್ರಕಟಣೆಯ ಸಂದರ್ಭದಲ್ಲಿ ಉದ್ದೇಶವನ್ನು ಎದ್ದು ಕಾಣುವಂತೆ ಬರೆಯಿರಿ

- ಕಾರ್ಯಕ್ರಮದ ಪ್ರಾಮುಖ್ಯತೆ ಮತ್ತು ಅದು ಮಾಧ್ಯಮಕ್ಕೆ ಏಕೆ ಯೋಗ್ಯವಾಗಿದೆ ಎಂಬುದರ ಕುರಿತು 2 ಅಥವಾ 3 ಪ್ಯಾರಾಗಳನ್ನು ಸೇರಿಸಿ. ವಾಸ್ತವಾಂಶಗಳು ಮತ್ತು ಅಂಕಿಅಂಶಗಳು ಮತ್ತು ಉಲ್ಲೇಖಗಳನ್ನು ಸೇರಿಸಲು ನೀವು ಈ ಅವಕಾಶವನ್ನು ಬಳಸಬಹುದು.

- ಪತ್ರಿಕಾ ಪ್ರಕಟಣೆಯು ನವೀಕೃತ ಮತ್ತು ನಿಖರವಾದ ಮಾಹಿತಿಯನ್ನು ಹೊಂದಿದೆ ಎಂದು ಖಚಿತಪಡಿಸಿಕೊಳ್ಳಿ. ನಾಗರಿಕ ಸಮೂಹ ತೆಗೆದುಕೊಳ್ಳುವ ಕ್ರಮಗಳ ಕುರಿತು ಒತ್ತಿಹೇಳಿ.

- ಅಧಿಕೃತ ಸಹಿ ಮತ್ತು ಸಂಪರ್ಕ ಮಾಹಿತಿಯೊಂದಿಗೆ ಅದನ್ನು ಪೂರ್ಣಗೊಳಿಸಿ (ಹೆಸರು, ಮೊಬೈಲ್ ಸಂಖ್ಯೆ, ಇಮೇಲ್ ಐಡಿ, ಇತ್ಯಾದಿ).

**ನಿಮ್ಮ ಅನುಸರಣೆಗಾಗಿ ಪತ್ರಿಕಾ ಪ್ರಕಟಣೆಯ ಒಂದು ಉದಾಹರಣೆ ಇಲ್ಲಿದೆ**

<ನಾಗರಿಕರ ಸಮೂಹದ ಲೋಗೋ ಸೇರಿಸಿ>

**ಪತ್ರಿಕಾ ಪ್ರಕಟಣೆ** **25/ಜುಲೈ/2023**

# ವಾರ್ಡ್ ಸಮಿತಿಗಳನ್ನು ಮತ್ತೆ ಹಳಿ ಹತ್ತಿಸಲು ಶೀಘ್ರ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದ ಮಹಾಪೌರರು

ವಾರ್ಡ್ ಗಳು ನಗರದ ಆಡಳಿತದ ಮೂಲ ಘಟಕಗಳಾಗಿವೆ. ವಾರ್ಡಗಳ ಕೇಂದ್ರಿತ ಮತ್ತು ಯೋಜಿತ ಅಭಿವೃದ್ಧಿಯು ನಗರದ ಒಟ್ಟಾರೆ ಬೆಳವಣಿಗೆಯ ಮೇಲೆ ಸಮಗ್ರ ಪರಿಣಾಮವನ್ನು ಬೀರುತ್ತದೆ. ಭಾರತದ ಸಂವಿಧಾನದ ಅನುಚ್ಛೇದ 243s ವಾರ್ಡ್ ಮಟ್ಟದಲ್ಲಿ ವಾರ್ಡ್ ಸಮಿತಿಗಳನ್ನು ರಚಿಸಿ, ಚುನಾಯಿತ ಪ್ರತಿನಿಧಿಗಳಿಗೆ (ವಾರ್ಡ್ ಕೌನ್ಸಿಲರ್ ಗಳು) ಮತ್ತು ನಗರ ಸರ್ಕಾರದ ಆಡಳಿತಕ್ಕೆ (ಅಧಿಕಾರಿಗಳು) ಸಾಂಸ್ಥಿಕ ವೇದಿಕೆಗಳಾಗಿ ಕಾರ್ಯನಿರ್ವಹಿಸಲು ನಗರ ಮತ್ತು ನೆರೆಹೊರೆಗಳ ಆಡಳಿತ ಮತ್ತು ಅಭಿವೃದ್ಧಿ ಅಂಶಗಳ ಬಗ್ಗೆ ನಾಗರಿಕರೊಂದಿಗೆ ನಿರಂತರವಾಗಿ ತೊಡಗಿಸಿಕೊಳ್ಳಲು ಅವಕಾಶ ಮಾಡಿಕೊಡುತ್ತದೆ.

ವಾರ್ಡ್ ಸಮಿತಿಗಳು ವಾರ್ಡ್ ಕೌನ್ಸಿಲರ್ ಗಳು , ಅಧಿಕಾರಿಗಳು ಮತ್ತು ನಾಗರಿಕರು ಒಟ್ಟಾಗಿ ಸೇರಿ ನಗರವಾಸಿಗಳ ಅಭಿವೃದ್ಧಿಗೆ ಸಹಕಾರಿಯಾಗಿ ಯೋಜನೆ ಮತ್ತು ಕೆಲಸ ಮಾಡಲು ಅನುವು ಮಾಡಿಕೊಡುವುದಲ್ಲದೆ, ಸ್ಥಳೀಯ ಮಟ್ಟದಲ್ಲಿ ವಿವಿಧ ಪೌರ ಸಂಸ್ಥೆಗಳ ನಡುವೆ ಅಗತ್ಯವಿರುವ ಸಮನ್ವಯವನ್ನು ಸುಗಮಗೊಳಿಸುತ್ತದೆ. ಉದಾ, ನಗರ ಪಾಲಿಕೆ ಇಲಾಖೆಗಳು (ಘನ ತ್ಯಾಜ್ಯ ನಿರ್ವಹಣೆ, ತೋಟಗಾರಿಕೆ, ಸಾರ್ವಜನಿಕ ಆರೋಗ್ಯ, ಪಟ್ಟಣ ಯೋಜನೆ, ಇತ್ಯಾದಿ), ನೀರು ಸರಬರಾಜು ಮತ್ತು ಒಳಚರಂಡಿ ನಿರ್ವಹಣಾ ಏಜೆನ್ಸಿಗಳು, ಸಾರ್ವಜನಿಕ ಸಾರಿಗೆ ಸಂಸ್ಥೆಗಳು (ಸಿಟಿ ಬಸ್, BRTS, ಉಪ-ನಗರ ರೈಲ್ವೆ), ಸಂಚಾರ ನಿರ್ವಹಣೆ, ನಾಗರಿಕ ರಕ್ಷಣೆ ಮತ್ತು ಪೊಲೀಸ್, ಅರಣ್ಯ ಇಲಾಖೆ, ಅಗ್ನಿಶಾಮಕ ಸೇವೆಗಳು, ಮಾಲಿನ್ಯ ನಿಯಂತ್ರಣ ಮಂಡಳಿ, ಇತ್ಯಾದಿ.

ಸಿಟಿಜನ್ಸ್ ಯುನೈಟೆಡ್, ನಾಗರಿಕ ಸಮಾಜ ಸಂಘಟನೆಗಳು, ನಿವಾಸಿಗಳ ಕ್ಷೇಮಾಭಿರುದ್ಧಿ ಸಂಘಗಳು (RWAs) ಮತ್ತು ನಾಗರಿಕರ ಒಕ್ಕೂಟವು 2022 ರಲ್ಲಿ ನಗರದಲ್ಲಿ ವಾರ್ಡ್ ಸಮಿತಿ ಸಭೆಗಳ ಸ್ಥಿತಿಗತಿ ಕುರಿತು ಸಮೀಕ್ಷೆಯನ್ನು ನಡೆಸಿತು.. ಹರಿನಗರ ಮುನ್ಸಿಪಲ್ ಕಾರ್ಪೊರೇಷನ್ನಲ್ಲಿ ವಾರ್ಡ್ ಸಮಿತಿ ಸಭೆಗಳನ್ನು ಪ್ರತಿ ತಿಂಗಳ ಮೊದಲ ಶನಿವಾರ ನಿಯಮಿತವಾಗಿ ನಡೆಸುವುದು ಕಡ್ಡಾಯವಾಗಿದೆ. ಇನ್ನುಳಿದಂತೆ ನಗರದಲ್ಲಿ ಶೇ.50ಕ್ಕೂ ಹೆಚ್ಚು ವಾರ್ಡ್ ಗಳು ಕಳೆದ ವರ್ಷ ಒಂದು ಸಭೆಯನ್ನೂ ಸಹ ನಡೆಸಿಲ್ಲ ಎಂದು ಅಧ್ಯಯನದಿಂದ ತಿಳಿದುಬಂದಿದೆ. ನಡೆಸಿದ ಸಭೆಗಳ ನಡಾವಳಿಗಳು ನಗರ ಪಾಲಿಕೆಯ ಜಾಲತಾಣದಲ್ಲಿ ಲಭ್ಯವಿರುವುದಿಲ್ಲ ಎಂದು ಅಧ್ಯಯನದಲ್ಲಿ ಹೊರಬಂದಿದೆ.

ನಮ್ಮ ಒಕ್ಕೂಟವು ಪೌರಾಯುಕ್ತರನ್ನು ಮತ್ತು ಗೌರವಾನ್ವಿತ ಮೇಯರ್ ಅವರನ್ನು ಇಂದು ಭೇಟಿ ಮಾಡಿತು. ಮತ್ತು ನಗರದ ಪ್ರತಿ ವಾರ್ಡಗಳಲ್ಲಿ ವಾರ್ಡ್ ಸಮಿತಿಗಳ ಸಭೆಗಳನ್ನು ನಿಯಮಿತವಾಗಿ ನಡೆಸುವಂತೆ ಖಚಿತಪಡಿಸಿಕೊಳ್ಳಲು

ಮಹಾನಗರ ಪಾಲಿಕೆಯು ಕೈಗೊಳ್ಳಬೇಕಾದ ಕ್ರಮಗಳ ವಿವರದೊಂದಿದೆ ಅಧ್ಯಯನದ ವರದಿಯನ್ನು ಸಲ್ಲಿಸಿದರು. ನಿಯೋಗಕ್ಕೆ ಪ್ರತಿಕ್ರಿಯಿಸಿದ ಮೇಯರ್ ಶ್ರೀಮತಿ. ಕಮಲಾ ಪ್ರಸಾದ್  ಆಯುಕ್ತರಿಂದ ಎಲ್ಲ ವಿವರಗಳನ್ನು ಪಡೆದು ಸೂಕ್ತ ಕ್ರಮ ಕೈಗೊಳ್ಳುವುದಾಗಿ  ಭರವಸೆ ನೀಡಿದ್ದಾರೆ. ಈ ವಾರಾಂತ್ಯದಲ್ಲಿ ನಡೆಯಲಿರುವ ನಗರಸಭೆಯ ಸಾಮಾನ್ಯ ಸಭೆಯಲ್ಲಿ ಪಾಲಿಕೆ ಸದಸ್ಯರಿಗೆ ಸರ್ಕಾರದ ಅಭಿವೃದ್ಧಿ ಮತ್ತು ಕಲ್ಯಾಣ ಕ್ರಮಗಳಲ್ಲಿ ಜನರ ಸಹಭಾಗಿತ್ವದ ಮಹತ್ವವನ್ನು ತಿಳಿಸಿ, ವಾರ್ಡ್ ಸಮಿತಿ ಸಭೆಗಳನ್ನು ನಿಯಮಿತವಾಗಿ ನಡೆಸಲು ಪ್ರೋತ್ಸಾಹಿಸುವುದಾಗಿ ಅವರು ಭರವಸೆ ನೀಡಿದರು. ಕಮಿಷನರ್, ಶ್ರೀ ಗುರುದೀಪ್ ಎಸ್., ನಿಯಮಿತವಾಗಿ ವಾರ್ಡ್ ಸಮಿತಿಗಳ ಸೂಚನೆಗಳು ಮತ್ತು ಸಭೆಯ ನಡಾವಳಿಗಳೊಂದಿಗೆ ವೆಬ್ಸೈಟ್ ಅನ್ನು ನವೀಕರಿಸಲು ತ್ವರಿತ ಕ್ರಮದ ಭರವಸೆ ನೀಡಿದ್ದಾರೆ. ಸಿಟಿಜನ್ಸ್ ಯುನೈಟೆಡ್ ಒಕ್ಕೂಟವು ವಾರ್ಡ್ ಸಮಿತಿಗಳ ಪ್ರಗತಿಯ ಮೇಲ್ವಿಚಾರಣೆ ಮತ್ತು ಅಧಿಕಾರಿಗಳೊಂದಿಗೆ ನಿರಂತರವಾಗಿ ಅನುಸರಣೆಯನ್ನು ಮುಂದುವರಿಸುತ್ತದೆ ಎಂದು ಮೇಯರ್ ಮತ್ತು ಮಾನ್ಯ ಆಯುಕ್ತರಿಗೆ ತಿಳಿಸಿದೆ.

ಅಧ್ಯಯನ ವರದಿ, ಮಾನ್ಯ ಮೇಯರ್ ಮತ್ತು ಆಯುಕ್ತರಿಗೆ ಸಲ್ಲಿಸಿದ ಪತ್ರಗಳು ಮತ್ತು ಸಿಟಿಜನ್ಸ್ ಯುನೈಟೆಡ್ ನಿಯೋಗ ಮೇಯರ್ ಮತ್ತು ಆಯುಕ್ತರನ್ನು ಭೇಟಿಯಾದ ಸಿಟಿಜನ್ಸ್ ಯುನೈಟೆಡ್ ನಿಯೋಗದ ಚಿತ್ರಗಳನ್ನು ನಿಮ್ಮ ಮಾಧ್ಯಮ ಸಂಸ್ಥೆಗಳ ಮೂಲಕ ವ್ಯಾಪಕ ಪ್ರಕಟಣೆಗಾಗಿ ಲಗತ್ತಿಸಲಾಗಿದೆ.

ಹೆಚ್ಚಿನ ವಿವರಗಳಿಗಾಗಿ, ದಯವಿಟ್ಟು ಸಂಪರ್ಕಿಸಿ:
ವಿಮಲಾ ಡಿಸೋಜಾ, ಸಂಯೋಜಕಿ (ಸಂವಹನ)
Ph No: 1010101010
ಇಮೇಲ್ ಐಡಿ: contact@citizensunited.in

Sd/-
(ಪಿಬಿ ಆಜಾದ್)
ಸಂಚಾಲಕ,
ಸಿಟಿಜನ್ಸ್ ಯುನೈಟೆಡ್

# ಪೌರ ಅಧಿಕಾರಿಗಳಿಗೆ ಸಮಸ್ಯೆಯನ್ನು ಹೇಗೆ ವರದಿ ಮಾಡುವುದು



ವಿವಿಧ ವಿಧಾನದ ಮೂಲಕ ದೂರುಗಳನ್ನು ತಲುಪಿಸಲು ಹಂತ-ಹಂತದ ಮಾರ್ಗದರ್ಶಿಗಾಗಿ ದಯವಿಟ್ಟು ಈ ಕೈಪಿಡಿಯ/ಅಧ್ಯಾಯ 4 ಅನ್ನು ನೋಡಿ.

## ಸಮುದಾಯವಾಗಿ ಸಮಸ್ಯೆಗಳನ್ನು ಪರಿಹರಿಸುವುದು



01

ಸಮಸ್ಯೆಯ ಕೆಲವು ಚಿತ್ರಗಳನ್ನು ತೆಗೆದುಕೊಳ್ಳಿ

02



ನೀವು ಸಮಸ್ಯೆಯನ್ನು ಹೇಗೆ ಪರಿಹರಿಸಬಹುದು ಎಂಬುದನ್ನು ಚರ್ಚಿಸಲು ನಿಮ್ಮ ಕುಟುಂಬ, ಸ್ನೇಹಿತರು, ನೆರೆಹೊರೆಯವರು ಮತ್ತು/ಅಥವಾ ಸಹೋದ್ಯೋಗಿಗಳಿಗೆ ಕರೆ ಮಾಡಿ ಮಾತನಾಡಿ

03

ನಿಮ್ಮ ಕಾರ್ಪೊರೇಟರ್ ಮತ್ತು ವಾರ್ಡ್ ಅಧಿಕಾರಿಗಳನ್ನು ಸಂಪರ್ಕಿಸಿ ಅವರೊಂದಿಗೆ ತೊಡಗಿಸಿಕೊಳ್ಳಿ



04



ನಿಮ್ಮ ನೆರೆಹೊರೆಯಲ್ಲಿ ಇದನ್ನು ಚರ್ಚಿಸಲು ನಿಮಗೆ ಸಹಾಯ ಮಾಡಲು ನಿಮ್ಮ ನಗರ ಸರ್ಕಾರದ ಮೊಬೈಲ್ ಅಪ್ಲಿಕೇಶನ್ಗಳು ಅಥವಾ ವೆಬ್ ಪ್ಲಾಟ್ಫಾರ್ಮ್ಗಳನ್ನು (ಅಂತರ್ಜಾಲ ವೇದಿಕೆಗಳನ್ನು) ಬಳಸಿ. ಹೆಚ್ಚಿನ ನಾಗರಿಕ ಸ್ವಯಂಸೇವಕರು ಭಾಗವಹಿಸಲು ಎಲ್ಲಾ ಸಂಬಂಧಿತ ವಿವರಗಳೊಂದಿಗೆ ನಿಮ್ಮ ಕಾಲ್--ಟು-ಆಕ್ಷನ್ (ಕರೆ) ಅನ್ನು ಪೋಸ್ಟ್ ಮಾಡಿ. ಬೆಂಗಳೂರಿನಲ್ಲಿ, ನೀವು ನಾಗರಿಕ ಕಾರ್ಯಕ್ರಮವನ್ನು ರಚಿಸಬಹುದಾದ ವೇದಿಕೆ

*www.ichangemycity.com*

05



ನಿಮ್ಮ ನಗರದಲ್ಲಿ ಅಸ್ತಿತ್ವದಲ್ಲಿರುವ ನಾಗರಿಕ ಪಾಲ್ಗೊಳ್ಳುವಿಕೆಯ ವೇದಿಕೆಗಳ ಕುರಿತು ನಿಮ್ಮ ಕಾರ್ಪೊರೇಟರ್ನಿಂದ ನೀವು ಕಂಡುಹಿಡಿಯಬಹುದು. ಉದಾಹರಣೆಗೆ, ಬೆಂಗಳೂರಿನಲ್ಲಿ ವಾರ್ಡ್ ಸಮಿತಿಗಳು ಕಾರ್ಯನಿರ್ವಹಿಸುವಂತೆ ಮತ್ತು ಪ್ರತಿ ತಿಂಗಳ 1 ಮತ್ತು 3 ನೇ ಶನಿವಾರದಂದು ತಮ್ಮ ಸಭೆಗಳನ್ನು ನಡೆಸುವಂತೆ ಆದೇಶವಿದೆ.

ನಾಗರಿಕರು ತಮ್ಮ ಕಾರ್ಪೊರೇಟರ್ಗಳೊಂದಿಗೆ ವಾರ್ಡ್ ಮಟ್ಟದ ಸಮಸ್ಯೆಗಳನ್ನು ಚರ್ಚಿಸುವ ವೇದಿಕೆ ಇದಾಗಿದೆ. ನಿಮ್ಮ ವಾರ್ಡ್‌ನಲ್ಲಿ ನಡೆಯುತ್ತಿರುವ ಅಭಿವೃದ್ಧಿ ಕಾರ್ಯಗಳು ಮತ್ತು ಬಜೆಟ್ ಹಂಚಿಕೆ ಮತ್ತು ವೆಚ್ಚದ ಬಗ್ಗೆಯೂ ನೀವು ತಿಳಿದುಕೊಳ್ಳಬಹುದು www.bbmp.gov.in. ನಿಮ್ಮ ವಾರ್ಡಿನಲ್ಲಿ ವಾರ್ಡ್ ಸಮಿತಿ ಇಲ್ಲದಿದ್ದರೆ, ನಿಮ್ಮ ಕಾರ್ಪೊರೇಟರ್ ರವರೊಂದಿಗೆ ಮಾತನಾಡಿ ಅದನ್ನು ರಚನೆ ಮಾಡಲು ಆಗ್ರಹಿಸಿ.

# ನಗರ ಆಯುಕ್ತರು/ಮಹಾಪೌರರಿಗೆ ಪತ್ರ ಬರೆಯುವುದು ಹೇಗೆ?



ನಿಮ್ಮ ನಗರ ಆಯುಕ್ತರು /ಮಹಾಪೌರರಿಗೆ ಪತ್ರವನ್ನು ಬರೆಯುವುದು ಮುಖ್ಯವಾಗಿದೆ ಏಕೆಂದರೆ ಅದು ನಿಮ್ಮ ಉದ್ದೇಶಗಳನ್ನು/ಬೇಡಿಕೆಗಳನ್ನು ಮುಂದಿಡಲು ಮತ್ತು ಅವರೊಂದಿಗೆ ಸಭೆಯನ್ನು ಏರ್ಪಡಿಸಲು ಔಪಚಾರಿಕ ಅವಕಾಶ ಒದಗಿಸುತ್ತದೆ. ನಿಮ್ಮ ನಾಗರೀಕ ಸಮೂಹ ಲೆಟರ್ ಹೆಡ್ ಹೊಂದಿದ್ದರೆ, ನೀವು ಅದನ್ನು ಬಳಸಬಹುದು.

**ಪತ್ರದ ಟೆಂಪ್ಲೇಟ್ / ಮಾದರಿಯನ್ನು ಕೆಳಗೆ ನೀಡಲಾಗಿದೆ:**

ನಿಮ್ಮ ನಾಗರೀಕ ಸಮೂಹ ಲೋಗೋ (ಲಭ್ಯವಿದ್ದರೆ)

ನಿಮ್ಮ ನಾಗರಿಕ ಸಮೂಹದ ವಿಳಾಸ
(ಫೋನ್ ಸಂಖ್ಯೆ ಮತ್ತು ವೆಬ್ಸೈಟ್ ಜೊತೆಗೆ ಲಭ್ಯವಿದ್ದಲ್ಲಿ)

ಗೆ

<ಆಯುಕ್ತರ ಹೆಸರು>/<ಮೇಯರ್ ಹೆಸರು>/<ಇತರ ಯಾವುದೇ ಅಧಿಕಾರಿಗಳ ಹೆಸರು>,
< ಹುದ್ದೆಯನ್ನು ನಮೂದಿಸಿ>
<ಇಲಾಖೆಯ ಹೆಸರು>
<ನಗರದ ಹೆಸರು>

<ದಿನಾಂಕ ನಮೂದಿಸಿ>

ವಿಷಯ: ವಾರ್ಡ್ ಸಮಿತಿಯ ಮುಂದಿನ ಹಂತಗಳ ಅನುಷ್ಠಾನ ಕುರಿತು ಸಭೆಯನ್ನು ಏರ್ಪಡಿಸಲು ವಿನಂತಿ

ಮಾನ್ಯ ಆಯುಕ್ತರ / ಮಹಾಪೌರರೆ,

ವಾರ್ಡ್ ಸಮಿತಿಗಳ ಕಾರ್ಯಚಟುವಟಿಕೆಗೆ ಸಂಬಂಧಿಸಿದಂತೆ ನಮ್ಮ ನಗರದಲ್ಲಿ ಇತ್ತೀಚಿನ ಬೆಳವಣಿಗೆಗಳು ಕುರಿತು ನಿಮಗೆ ತಿಳಿಸಲು ನಾವು ನಿಮಗೆ ಪತ್ರ ಬರೆಯುತ್ತಿದ್ದೇವೆ. ನಗರದಲ್ಲಿ ವಾರ್ಡ್ ಸಮಿತಿಗಳ ರಚನೆಗಾಗಿ ನಾವು ನಿರಂತರವಾಗಿ ಕೆಲಸ ಮಾಡುತ್ತಿದ್ದೇವೆ ಮತ್ತು ನಮ್ಮ ನಾಗರಿಕ ಗುಂಪುಗಳು ನಗರದ ವಿವಿಧ ಭಾಗಗಳಲ್ಲಿ ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತಿವೆ.
74 ನೇ ಸಾಂವಿಧಾನಿಕ ತಿದ್ದುಪಡಿ ಕಾಯಿದೆ ಪ್ರಕಾರ ನಾವು ನಗರದಲ್ಲಿ ಸಕ್ರಿಯ ಚುನಾಯಿತ ಪರಿಷತ್ ಹೊಂದಿರುವುದರಿಂದ, ವಾರ್ಡ್ ಸಮಿತಿಗಳನ್ನು ಕಾರ್ಯಗತಗೊಳಿಸಲು ಇದು ಸರಿಯಾದ ಸಮಯ. ಈ ಪ್ರಕ್ರಿಯೆಯನ್ನು ಮುಂದಕ್ಕೆ ಕೊಂಡೊಯ್ಯಲು ನಾವು ಪಾಲಿಕೆಗೆ ಯಾವ ರೀತಿಯಲ್ಲಿ ಸಹಕಾರ ನೀಡಬಹುದು ಎಂಬುದರ ಕುರಿತು ನಿಮ್ಮೊಂದಿಗೆ ಚರ್ಚೆ ನಡೆಸಲು ನಾವು ಬಯಸುತ್ತೇವೆ. ಮೊದಲ ಹಂತವಾಗಿ, ನಗರದ ವಿವಿಧ ಭಾಗಗಳಿಂದ ವಾರ್ಡ್ ಸಮಿತಿ ಸದಸ್ಯತ್ವಕ್ಕಾಗಿ ಅರ್ಜಿಗಳನ್ನು ಕರೆಯಲು ನಾವು ವಿನಂತಿಸುತ್ತೇವೆ.
ನಾಗರಿಕರ ಅನುಕೂಲಕ್ಕಾಗಿ ನಮ್ಮ ನಗರದಲ್ಲಿ ವಾರ್ಡ್ ಸಮಿತಿಗಳನ್ನು ಸಕ್ರಿಯಗೊಳಿಸುವ ಬಗ್ಗೆ ನಿಮ್ಮೊಂದಿಗೆ ಮತ್ತು ನಿಮ್ಮನ್ನು ಭೇಟಿ ಮಾಡಿ ಚರ್ಚೆಯನ್ನು ಮಾಡಲು ನಾವು ಎದುರು ನೋಡುತ್ತಿದ್ದೇವೆ.

ಧನ್ಯವಾದಗಳು ಮತ್ತು ವಂದನೆಗಳು,
<ಅಧಿಕೃತ ವ್ಯಕ್ತಿಯ ಹೆಸರು>
< ಹುದ್ದೆ >
<ಫೋನ್ ಸಂಖ್ಯೆ>
<ಇ-ಮೇಲ್ ಐಡಿ>

(ಸಹಿ ಮತ್ತು ಮುದ್ರೆಯೊಂದಿಗೆ ಲಭ್ಯವಿದ್ದಲ್ಲಿ)

ಅನುಬಂಧಗಳು:
1: ನಾಗರೀಕ ಸಮೂಹದಿಂದ ನಮ್ಮ ನಗರದಲ್ಲಿ ವಾರ್ಡ್ ಸಮಿತಿಗಳನ್ನು ಸಕ್ರಿಯಗೊಳಿಸುವ ಪ್ರಯತ್ನಗಳ ಕುರಿತು ಸಂಕ್ಷಿಪ್ತ ವರದಿ
2: ನಮ್ಮ ನಾಗರಿಕ ಸಾಮೂಹದ ಬಗ್ಗೆ ಸಂಕ್ಷಿಪ್ತ ಮಾಹಿತಿ

# ನಗರ ಸರ್ಕಾರವನ್ನು ಹೇಗೆ ಅನುಸರಿಸುವುದು



## ನಿಮ್ಮ ನಗರವು ವಾರ್ಡ್ ಸಮಿತಿಗಳನ್ನು ಹೊಂದಿರುವಾಗ

- ವಾರ್ಡ್ ಸಮಿತಿ ಸಭೆಗಳಲ್ಲಿ ನಿಮ್ಮ ಸಮಸ್ಯೆಯನ್ನು ಪ್ರಸ್ತಾಪಿಸಿ.
- ನಿಮ್ಮ ಸಮಸ್ಯೆ ಬಗೆಹರಿಯದಿದ್ದರೆ ಅಥವಾ ದೀರ್ಘಾವಧಿಯವರೆಗೆ ಬಾಕಿ ಉಳಿದಿದ್ದರೆ, ನಿಮ್ಮ ವಾರ್ಡ್ ಸಮಿತಿ ಸದಸ್ಯರೊಂದಿಗೆ ಮಾತನಾಡಿ.
- ನೀವು ಏಕಕಾಲದಲ್ಲಿ ನಿಮ್ಮ ವಾರ್ಡ್ ಸಮಿತಿಯ ಕಾರ್ಯದರ್ಶಿಯನ್ನು[4], ವಾರ್ಡ್ ಇಂಜಿನಿಯರ್ ಅಥವಾ ಯಾವುದೇ ಇತರ ಜವಾಬ್ದಾರಿಯುತ ಸರ್ಕಾರಿ ಅಧಿಕಾರಿಯನ್ನು ಸಂಪರ್ಕಿಸಬಹುದು.
- ನಿಮ್ಮ ಸಮಸ್ಯೆ ಇನ್ನೂ ಬಗೆಹರಿಯದೆ ಉಳಿದಿದ್ದರೆ, ನೀವು ನಿಮ್ಮ ವಾರ್ಡ್ ಕೌನ್ಸಿಲರ್ ರವರನ್ನು ಸಂಪರ್ಕಿಸಿ ಪರಿಹಾರಕ್ಕಾಗಿ ಒತ್ತಾಯಿಸಬಹುದು.
- ಮುಂದಿನ ಹಂತವೆಂದರೆ ನೀವು ನಾಗರಿಕ ಗುಂಪಿನ ಭಾಗವಾಗಿ ನಿಮ್ಮ ವಲಯ ಆಯುಕ್ತರನ್ನು[5] ಭೇಟಿ ಮಾಡಲು ಅಪಾಯಿಂಟ್ಮೆಂಟ್ ತೆಗೆದುಕೊಳ್ಳಿ ಮತ್ತು ನಿಮ್ಮ ಸಮಸ್ಯೆಯನ್ನು ಅವರ ಗಮನಕ್ಕೆ ತನ್ನಿ.
- ನಿಮ್ಮ ವಲಯ ಆಯುಕ್ತರು ನಿಮ್ಮ ಆಯಾ ವಾರ್ಡ್ ಕೌನ್ಸಿಲರ್ ಜೊತೆ ಮಾತನಾಡುತ್ತಾರೆ.
- ಮೇಲ್ಮನವಿಯ ಅಂತಿಮ ಹಂತವೆಂದರೆ ನಿಮ್ಮ ಮುಖ್ಯ ಆಯುಕ್ತರು/ಅಧ್ಯಕ್ಷರು/ಮೇಯರ್ ರವರಿಗೆ ದೂರು ಸಲ್ಲಿಸುವುದು. ಅವರ ಗಮನವನ್ನು ಸೆಳೆಯಲು ಅಥವಾ ಅವರೊಂದಿಗೆ ಅಪಾಯಿಂಟ್ಮೆಂಟ್ ಕಾಯ್ದಿರಿಸಲು, ನಾಗರಿಕ ಸಮೂಹದ ಭಾಗವಾಗಿ ಅವರನ್ನು ಸಂಪರ್ಕಿಸಿ.
- ಸಮಸ್ಯೆಯನ್ನು ನಿಮ್ಮ ಆಯುಕ್ತರಿಗೆ ವಿವರಿಸಿ.
- ಅದು ಇನ್ನೂ ಬಗೆಹರಿಯದಿದ್ದರೆ, ನಿಮ್ಮ ಸಮಸ್ಯೆಯ ಬಗ್ಗೆ ಜಾಗೃತಿ ಮೂಡಿಸಿ. ನಿಮ್ಮ ನಗರ ಸರ್ಕಾರದ ಗಮನವನ್ನು ಸೆಳೆಯಲು ಮತ್ತು ನಿಮ್ಮ ಸಮಸ್ಯೆಯನ್ನು ಪರಿಹರಿಸಲು ಸಾಂಪ್ರದಾಯಿಕ ಮಾಧ್ಯಮ ಮತ್ತು ಸಾಮಾಜಿಕ ಮಾಧ್ಯಮವನ್ನು ಬಳಸಿ.

---

4 ನಿಮ್ಮ ವಾರ್ಡ್ ಇಂಜಿನಿಯರ್, ವಾರ್ಡ್ ಸಮಿತಿ ಸದಸ್ಯರು, ಕೌನ್ಸಿಲರ್, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್, ಕಾರ್ಯನಿರ್ವಾಹಕ ಇಂಜಿನಿಯರ್, ವಲಯ ಆಯುಕ್ತರು ಮತ್ತು ಮುಖ್ಯ ಆಯುಕ್ತರು/ಕಮಿಷನರ್/ಅಧ್ಯಕ್ಷರ ಹೆಸರುಗಳನ್ನು ಒಳಗೊಂಡಿರುವ ಪೌರ ಡೈರೆಕ್ಟರಿಯನ್ನು ನೀವು ನಿರ್ವಹಿಸಬೇಕು.

5 ನಿಮ್ಮ ನಗರವು ವಲಯ ಆಯುಕ್ತರನ್ನು ಹೊಂದಿಲ್ಲದಿದ್ದರೆ, ನೀವು ನಿಮ್ಮ ಆಯುಕ್ತರು/ಮುಖ್ಯ ಆಯುಕ್ತರು/ಅಧ್ಯಕ್ಷರನ್ನು ಸಂಪರ್ಕಿಸಬಹುದು

## ನಿಮ್ಮ ನಗರದಲ್ಲಿ ವಾರ್ಡ್ ಸಮಿತಿಗಳು ಇಲ್ಲದಿದ್ದಾಗ

- ನಾಗರಿಕ ಸಮೂಹದ ಭಾಗವಾಗಿ ನಿಮ್ಮ ವಾರ್ಡ್ ಎಂಜಿನಿಯರ್ನೊಂದಿಗೆ ನಿಮ್ಮ ಸಮಸ್ಯೆಯನ್ನು ಚರ್ಚಿಸಿ. ನೀವು ವಾರ್ಡ್ ಕಚೇರಿಯಲ್ಲಿ ನಿಮ್ಮ ವಾರ್ಡ್ ಎಂಜಿನಿಯರ್ ಅನ್ನು ಸಂಪರ್ಕಿಸಬಹುದು.
- ನಿಮ್ಮ ಸಮಸ್ಯೆಯನ್ನು ಪರಿಗಣಿಸಿ ಅನುಗುಣವಾಗಿ, ನಿಮ್ಮ ವಾರ್ಡ್ ಇಂಜಿನಿಯರವರು ಜವಾಬ್ದಾರಿಯನ್ನು ತೆಗೆದುಕೊಳ್ಳಬಹುದು ಅಥವಾ ಸಂಬಂಧಿತ ಅಧಿಕಾರಿಗೆ ಭೇಟಿಮಾಡಲು ನಿಮಗೆ ಸಲಹೆ ನೀಡಬಹುದು.
- ನಿಮ್ಮ ಸಮಸ್ಯೆಯನ್ನು ಪರಿಹರಿಸಲಾಗದಿದ್ದರೆ, ಸಾಮಾನ್ಯವಾಗಿ ಮುಂದಿನ ಸಂಪರ್ಕ ಬಿಂದು ನಿಮ್ಮ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (AEE) ಮತ್ತು ಕಾರ್ಯನಿರ್ವಾಹಕ ಇಂಜಿನಿಯರ್ (EE). ಆಗಿರುತ್ತಾರೆ ವಿಭಾಗೀಯ ಕಛೇರಿಯಲ್ಲಿ ನಿಮ್ಮ AEE ಮತ್ತು EE ಯನ್ನು ನೀವು ಭೇಟಿ ಮಾಡಬಹುದು.
- ಮೇಲ್ಮನವಿಯ  ಮುಂದಿನ ಹಂತವೆಂದರೆ ನಿಮ್ಮ ಮುಖ್ಯ ಇಂಜಿನಿಯರ್ (CE) ಅಥವಾ ವಲಯ ಆಯುಕ್ತರು (ZC). ಸಮಸ್ಯೆಯನ್ನು ಪರಿಹರಿಸಲು ನಿಮ್ಮ CE/ZC ನಿಮ್ಮ ವಾರ್ಡ್ ಇಂಜಿನಿಯರ್ ಅಥವಾ ಸಂಬಂಧಿತ ಅಧಿಕಾರಿಯನ್ನು ನಿರ್ದೇಶಿಸುತ್ತಾರೆ.
- ನಿಮ್ಮ ಸಮಸ್ಯೆಯನ್ನು ಇನ್ನೂ ಪರಿಹರಿಸಲಾಗದಿದ್ದರೆ, ನಿಮ್ಮ ನಗರ ಸರ್ಕಾರದ ಗಮನವನ್ನು ಸೆಳೆಯಲು ಸಾಂಪ್ರದಾಯಿಕ ಮತ್ತು ಸಾಮಾಜಿಕ ಮಾಧ್ಯಮದ ಸಹಾಯವನ್ನು ಪಡೆಯಿರಿ. ನೀವು ನೇರವಾಗಿ ಆಯುಕ್ತರು/ ಮೇಯರ್ ರವರನ್ನು ಸಹ ಸಂಪರ್ಕಿಸಬಹುದು

# ಸಾಮಾಜಿಕ ಮಾಧ್ಯಮವನ್ನು ಹೇಗೆ ಬಳಸುವುದು

ಸರ್ಕಾರದ ಹೊಣೆಗಾರಿಕೆಯನ್ನು ಸುನಿಶ್ಚಿತಗೊಳಿಸಲು ಸಾಮಾಜಿಕ ಮಾಧ್ಯಮವು ಪ್ರಬಲ ಸಾಧನವನ್ನು ನಿಮಗೆ ನೀಡುತ್ತದೆ.

**ನೀವು ಸಾಮಾಜಿಕ ಮಾಧ್ಯಮವನ್ನು ಪರಿಣಾಮಕಾರಿಯಾಗಿ ಬಳಸಬಹುದಾದ ಕೆಲವು ಮಾರ್ಗಗಳು ಇಲ್ಲಿವೆ:**

## X.com (ಈ ಮೊದಲು ಟ್ವಿಟರ್)

- ಖಾತೆಯನ್ನು ರಚಿಸಿ (ನಿಮಗಾಗಿ ಅಥವಾ ನೀವು ಭಾಗವಾಗಿರುವ ನಾಗರಿಕ ಸಮೂಹಕ್ಕಾಗಿ).
- ಇದು ವೈಯಕ್ತಿಕ ಖಾತೆಯಾಗಿದ್ದರೆ, ಪ್ರೊಫೈಲ್ ಚಿತ್ರವಾಗಿ ನಿಮ್ಮ ಔಪಚಾರಿಕ ಛಾಯಾಚಿತ್ರವನ್ನು ಬಳಸಿ.
- ನಿಮ್ಮ ನಾಗರಿಕ ಸಮೂಹವನ್ನು ನೀವು ಪ್ರತಿನಿಧಿಸಿದರೆ, ಸಮೂಹದ ಲಾಂಛನವನ್ನು ಪ್ರೊಫೈಲ್ ಚಿತ್ರವಾಗಿ ಬಳಸಿ.
- ನಿಮ್ಮ ಬಯೋ ಅನ್ನು ಭರ್ತಿ ಮಾಡಿ.<br>ನಿಮ್ಮ ಬಯೋ ಅನ್ನು ಟ್ಯಾಗ್ಲೈನ್ ಎಂದು ಭಾವಿಸಿ - ಅದು, ಸರಳ ಮತ್ತು ಆಕರ್ಷಕವಾಗಿರಬೇಕು. ನೀವು ಪರಿಹರಿಸಲು ಬಯಸುವ ನಾಗರಿಕ ಸಮಸ್ಯೆಗಳು, ಯಾವುದೇ ಪ್ರಚಾರ ಟ್ಯಾಗ್ಗಳು ಮತ್ತು ಹ್ಯಾಶ್ಟ್ಯಾಗ್ಗಳು ಮತ್ತು ಖಾತೆಯನ್ನು ರಚಿಸುವ ಹಿಂದಿನ ನಿಮ್ಮ ಉದ್ದೇಶವನ್ನು ಇದು ಒಳಗೊಂಡಿದೆ ಎಂದು ಖಚಿತಪಡಿಸಿಕೊಳ್ಳಿ.
- ನಿಮ್ಮ ಬಯೋ ಅನ್ನು  ಆಗಾಗ್ಗೆ ಬದಲಾಯಿಸುವುದನ್ನು ತಪ್ಪಿಸಿ. ಇದು ಸ್ಥಿರವಾಗಿರಬೇಕು.
- ನಗರದ ಅಧಿಕಾರಿಗಳ X ಹ್ಯಾಂಡಲ್ಗಳ ಬಂಡಾರವು ನಿಮ್ಮ ಬಳಿ ಇರಲಿ. ಕೆಳಗಿನ ಕೀವರ್ಡ್ಗಳನ್ನು ಬಳಸಿಕೊಂಡು ನೀವು ಸರಳವಾದ Google ಹುಡುಕಾಟವನ್ನು ಮಾಡಬಹುದು: <ನಿಮ್ಮ ನಗರ> + <ನಗರಪಾಲಿಕೆ ಆಯುಕ್ತರು/ ನಿಮ್ಮ ಸಮಸ್ಯೆಯನ್ನು ಆಧರಿಸಿ ಸಂಬಂಧಿಸಿದ ಅಧಿಕಾರಿಗಳು> + <X ಹ್ಯಾಂಡಲ್>. ಒಂದೇ ಸಮಸ್ಯೆಗೆ ಒಂದಕ್ಕಿಂತ ಹೆಚ್ಚು ಅಧಿಕೃತ X ಹ್ಯಾಂಡಲ್ ಇರಬಹುದು.

❖ ನಿಮ್ಮ ಸಮಸ್ಯೆಗಳ ಬಗ್ಗೆ ಪೋಸ್ಟ್ ಮಾಡಿ. ಸಂಬಂಧಿತ ಅಧಿಕಾರಿಗಳನ್ನು ಟ್ಯಾಗ್ ಮಾಡಲು ಟ್ಯಾಗ್ ಸೌಲಭ್ಯವನ್ನು ಬಳಸಿ. ಉದಾಹರಣೆಗೆ, ಬೆಂಗಳೂರಿನಲ್ಲಿ ಘನತ್ಯಾಜ್ಯ ನಿರ್ವಹಣೆ ಸಮಸ್ಯೆಗಳಿಗೆ, @BBMP_SWM ವಿಶೇಷ ಆಯುಕ್ತರನ್ನು ಟ್ಯಾಗ್ ಮಾಡಬೇಕಾದ ಖಾತೆ.

❖ ಸಂಬಂಧಿತ ಫೋಟೋಗಳು ಮತ್ತು ವೀಡಿಯೊಗಳೊಂದಿಗೆ ನಿಮ್ಮ ಪೋಸ್ಟ್ ಅನ್ನು ಹೆಚ್ಚು ಆಕರ್ಷಕ ಗೊಳಿಸಿ.

❖ ನಿಮ್ಮ ಸಮಸ್ಯೆಗಳಿಗೆ ಸಂಬಂಧಿಸಿದ ಹ್ಯಾಶ್ಟ್ಯಾಗ್ಗಳನ್ನು ಬಳಸಿ. # ಚಿಹ್ನೆಯೊಂದಿಗೆ ಹ್ಯಾಶ್ಟ್ಯಾಗ್ಗಳನ್ನು ರಚಿಸಲಾಗುತ್ತದೆ. ಉದಾಹರಣೆಗೆ, #ಕಸ #ಘನತ್ಯಾಜ್ಯ #ನೀರುನಿಲ್ಲುವಿಕೆ. ನಿಮಗೆ ಬೇಕಾದಷ್ಟು ಹ್ಯಾಶ್ಟ್ಯಾಗ್ಗಳನ್ನು ನೀವು ರಚಿಸಬಹುದು.

❖ ನಿಮ್ಮ ಪೋಸ್ಟ್ ಅನ್ನು ನಿಮ್ಮ ಸ್ನೇಹಿತರು ಮತ್ತು ಕುಟುಂಬದೊಂದಿಗೆ ಹಂಚಿಕೊಳ್ಳಿ. ನಿಮ್ಮ ಸಮಸ್ಯೆಯ ವೇಗವನ್ನು ಪಡೆಯಲು ಮರುಹಂಚಿಕೊಳ್ಳಲು ಅವರನ್ನು ವಿನಂತಿಸಿ.

❖ ನೀವು ನಾಗರಿಕ ಸಮೂಹದ ಭಾಗವಾಗಿದ್ದರೆ, ಸಾಮಾಜಿಕ ಮಾಧ್ಯಮವನ್ನು ನಿರ್ವಹಿಸಲು ಸ್ವಯಂಸೇವಕ ತಂಡವನ್ನು ರಚಿಸಿ.

## ವಾಟ್ಸಪ್ಪ್

‘ಕ್ರಿಯೇಟ್ ಗ್ರೂಪ್’ ವೈಶಿಷ್ಟ್ಯವನ್ನು ಬಳಸಿಕೊಂಡು ನಿಮ್ಮ ವಾರ್ಡಗಾಗಿ ವಾಟ್ಸಾಪ್ ಗುಂಪನ್ನು ರಚಿಸಿ. ನಿಮ್ಮ ವಾರ್ಡಿನ ನಾಗರಿಕರನ್ನು ಮತ್ತು ನಿಮ್ಮ ವಾರ್ಡ್ ಎಂಜಿನಿಯರ್ ಅನ್ನು ಗುಂಪಿಗೆ ಸೇರಿಸಿ.

❖ ‘ಕ್ರಿಯೇಟ್ ಗ್ರೂಪ್’ ವೈಶಿಷ್ಟ್ಯವನ್ನು ಬಳಸಿಕೊಂಡು ನಿಮ್ಮ ವಾರ್ಡಗಾಗಿ ವಾಟ್ಸಾಪ್ ಗುಂಪನ್ನು ರಚಿಸಿ. ನಿಮ್ಮ ವಾರ್ಡಿನ ನಾಗರಿಕರನ್ನು ಮತ್ತು ನಿಮ್ಮ ವಾರ್ಡ್ ಎಂಜಿನಿಯರ್ ಅನ್ನು ಗುಂಪಿಗೆ ಸೇರಿಸಿ.

❖ ನೆರೆಹೊರೆಯ ಸಮಸ್ಯೆಗಳು ಮತ್ತು ಗುಂಪಿನ ಪ್ರಮುಖ ನವೀಕರಣಗಳನ್ನು ಚರ್ಚಿಸಿ.

❖ ನಿರ್ವಾಹಕರು ಗುಂಪಿನಿಂದ ಸದಸ್ಯರನ್ನು ಸೇರಿಸಬಹುದು ಮತ್ತು ತೆಗೆದುಹಾಕಬಹುದು ಎಂಬ ಕಾರಣಕ್ಕೆ ಸಂಬಂಧಿತ ಜವಾಬ್ದಾರಿಯುತ ವ್ಯಕ್ತಿಗಳನ್ನು ಮಾತ್ರ ಗುಂಪು ನಿರ್ವಾಹಕರನ್ನಾಗಿ ಮಾಡಲಾಗಿದೆ ಎಂದು ಖಚಿತಪಡಿಸಿಕೊಳ್ಳಿ.

❖ ಗುಂಪು ನಿರ್ವಾಹಕರು ಮಾಡರೇಟರ್ಗಳಾಗಿ ಸಮನ್ವಕರಾಗಿ ಕಾರ್ಯನಿರ್ವಹಿಸಬೇಕು ಮತ್ತು ಚರ್ಚೆಗಳಿಗೆ ಮಾರ್ಗದರ್ಶನ ನೀಡಬೇಕು ಮತ್ತು ಸದಸ್ಯರಿಗೆ ಸಲಹೆ ನೀಡಬೇಕು.

❖ ರಾಜಕೀಯ, ಅನಗತ್ಯ ವಾಡಿಕೆಯ ಫಾರ್ವರ್ಡ್ಗಳು ಮತ್ತು ಜಾಹೀರಾತುಗಳನ್ನು ಗುಂಪಿನಿಂದ ಹೊರಗಿಡಲು ಮರೆಯದಿರಿ.

❖ ನಿಮ್ಮ ಗುಂಪಿಗೆ ಸೇರಲು ಬಯಸುವ ಆಸಕ್ತ ನಾಗರಿಕರೊಂದಿಗೆ ಲಿಂಕ್ ಅನ್ನು ಹಂಚಿಕೊಳ್ಳಲು ನೀವು ಗುಂಪು ಲಿಂಕ್ ಸೌಲಭ್ಯವನ್ನು ಬಳಸಬಹುದು.

❖ ನಿಮ್ಮ ಆಲೋಚನೆಗಳನ್ನು ಹಂಚಿಕೊಳ್ಳಲು ಮತ್ತು ನಿಮ್ಮ ಸಮಸ್ಯೆಯತ್ತ ಗಮನ ಸೆಳೆಯಲು ನೀವು ‘ಪ್ರಸಾರ ಪಟ್ಟಿ’( Broadcast List) ಸೌಲಭ್ಯವನ್ನು ಸಹ ಬಳಸಬಹುದು. ಪ್ರತ್ಯೇಕ ಗುಂಪನ್ನು ರಚಿಸದೆ ಜನರೊಂದಿಗೆ ಸಂಪರ್ಕ ಸಾಧಿಸಲು ಬ್ರಾಡ್ಕಾಸ್ಟ್ ಪಟ್ಟಿ ನಿಮಗೆ ಅನುವು ಮಾಡಿಕೊಡುತ್ತದೆ.

## ಫೇಸ್ಬುಕ್ ಮತ್ತು ಇನ್ಸ್ಟಾಗ್ರಾಮ್

- ಫೇಸ್ಬುಕ್ ಬಳಕೆದಾರರು ಫೇಸ್ಬುಕ್ನಲ್ಲಿ ಪುಟಗಳು/ಖಾತೆಗಳನ್ನು ರಚಿಸಬಹುದು ಮತ್ತು ತಮ್ಮ ಆಲೋಚನೆಗಳನ್ನು ಹಂಚಿಕೊಳ್ಳಲು ಫೇಸ್ಬುಕ್ ಲೈವ್ ಸೌಲಭ್ಯವನ್ನು ಬಳಸಬಹುದು.
- ಹೆಚ್ಚುವರಿಯಾಗಿ, ನಿಮ್ಮ ಸಮಸ್ಯೆಗಳ ಬಗ್ಗೆ ಜಾಗೃತಿ ಮೂಡಿಸಲು ನೀವು ಇನ್ಸ್ಟಾಗ್ರಾಮ್ ರಿಲ್ಸ್ ಗಳನ್ನು, ಕಥೆಗಳನ್ನು ಮತ್ತು ಪೋಸ್ಟ್ ಳನ್ನು ಸಹ ಬಳಸಬಹುದು.
- ಫೇಸ್ಬುಕ್ ಮತ್ತು ಇನ್ಸ್ಟಾಗ್ರಾಮ್ ಕೂಡ X ಗೆ ಹೋಲುವ ಟ್ಯಾಗಿಂಗ್ ಸೌಲಭ್ಯಗಳನ್ನು ಹೊಂದಿದೆ.
- ಪೌರತ್ವದ ಅರಿವಿಗಾಗಿ ಸಾಮಾಜಿಕ ಮಾಧ್ಯಮವನ್ನು ಬಳಸುವಾಗ, ನಿಮ್ಮ ಸಂವಹನಗಳಲ್ಲಿ ವೃತ್ತಿಪರತೆ ಮತ್ತು ಸಭ್ಯತೆಯನ್ನು ಖಾತ್ರಿಪಡಿಸಿಕೊಳ್ಳುವುದರ ಜೊತೆಗೆ ನಿಮ್ಮ ಪ್ರೊಫೈಲ್ ಚಿತ್ರ, ಗುಂಪಿನ ಹೆಸರು, ಗುಂಪು ವಿವರಣೆ ಇತ್ಯಾದಿಗಳನ್ನು ಖಚಿತಪಡಿಸಿಕೊಳ್ಳಿ.ಗುಂಪು ವಿವರಣೆ ಇತ್ಯಾದಿಗಳನ್ನು ಖಚಿತಪಡಿಸಿಕೊಳ್ಳಿ.

# ಕೃತಜ್ಞತೆಗಳು

ಈ ಕೈಪಿಡಿಯು ನಾಗರಿಕ ಭಾಗವಹಿಸುವಿಕೆಯನ್ನು ಗಾಢವಾಗಿಸುವ ನಿಟ್ಟಿನಲ್ಲಿ ಜನಾಗ್ರಹದ ಎಲ್ಲಾ ಸ್ವಯಂಸೇವಕರ (Volunteer) ಮತ್ತು ನಾಗರಿಕರ ಸಾಮೂಹಿಕ ಅನುಭವ ಮತ್ತು ಪರಿಣಿತಿಯನ್ನು ಪ್ರಸ್ತುತಪಡಿಸುವ ಪ್ರಯತ್ನವಾಗಿದೆ. ತನಿಮಾ ದುಬೆ, ವ್ಯವಸ್ಥಾಪಕರು, ಸಿಟಿ ಫೈನಾನ್ಸ್, ಜನಾಗ್ರಹದ ಮತ್ತು ಸುವಶಿಕಾ ಕೆ, ಹಿರಿಯ ಸಂಯೋಜಕರು, ನಾಗರಿಕರ ಸಹಭಾಗಿತ್ವ ಕಾರ್ಯಕ್ರಮ, ಜನಾಗ್ರಹದ ಅವರು ವಿಷಯವನ್ನು ಸೂಕ್ಷ್ಮವಾಗಿ ಅಭಿವೃದ್ಧಿಪಡಿಸಿದ್ದಾರೆ ಮತ್ತು ಸಂಯೋಜಿಸಿದ್ದಾರೆ.

ನಮ್ಮ ಸಾಮೂಹಿಕ ತಿಳುವಳಿಕೆಗೆ ಒಂದು ನಿರ್ದಿಷ್ಟ ಅಭಿವ್ಯಕ್ತಿ ಕಲ್ಪಿಸಿ ಅದನ್ನು ನಾಗರಿಕರಿಗೆ ಮತ್ತು ವೃತ್ತಿ ಪರರಿಗೆ ಪ್ರಜಾಪ್ರಭುತ್ವವು ದೈನಂದಿನದ ಅಭ್ಯಾಸವನ್ನಾಗಿ ಬೆಳೆಸಿಕೊಳ್ಳಲು ಒಂದು ಮಾರ್ಗದರ್ಶಿಯಾಗಿ ಈ ಕೈಪಿಡಿಯನ್ನು ಸಿದ್ಧಪಡಿಸಲು ಪ್ರೇರಿಪಿಸಿದಕ್ಕೆ ನಾವು ನಮ್ಮ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಶ್ರೀ ಶ್ರೀಕಾಂತ್ ವಿಶ್ವನಾಥನ್ ರವರಿಗೆ ನಾವು ಧನ್ಯವಾದಗಳನ್ನು ತಿಳಿಸುತ್ತೇವೆ. ನಾಗರೀಕ ಸಹಭಾಗಿತ್ವದ ಕ್ಷೇತ್ರದಲ್ಲಿ ಜನಾಗ್ರಹ ಸಮೂಹ ಸಂಸ್ಥೆಗಳ ಸಂಸ್ಥಾಪಕರಾದ ಶ್ರೀಮತಿ ಸ್ವಾತಿ ರಾಮನಾಥನ್ ಮತ್ತು ಶ್ರೀ ರಮೇಶ್ ರಾಮನಾಥನ್ ರವರ ಮುಂಚೂಣಿಯ ಕೊಡುಗೆಯಿಂದ ಈ ಕೈಪಿಡಿಯನ್ನು ಸಿದ್ಧಪಡಿಸಲು ನಾವು ಅಪಾರ ಪ್ರೇರಣೆಯನ್ನು ಪಡೆದಿದ್ದೇವೆ. ಕೊನೆಯದಾಗಿ, ನಾಗರಿಕತ್ವ, ಪ್ರಜಾಪ್ರಭುತ್ವ ಮತ್ತು ಪರಿಸರ ಸಂರಕ್ಷಣೆಯ ಕ್ಷೇತ್ರಗಳಲ್ಲಿ ಪರಿಣಾಮಕಾರಿ ಧನಾತ್ಮಕ ಬದಲಾವಣೆಯನ್ನು ತರುವ ಮಹತ್ತರ ದೂರದೃಷ್ಟಿಯನ್ನು ಹೊಂದಿದ ರೈನ್ ಮ್ಯಾಟರ್ ಫೌಂಡೇಶನ್ ರವರ ಉದಾರ ಬೆಂಬಲವಿಲ್ಲದೆ ಈ ಕೈಪಿಡಿಯನ್ನು ಈ ರೂಪದಲ್ಲಿ ಪ್ರಸ್ತುತ ಪಡಿಸಲು ಸಾದ್ಯವಿರಲಿಲ್ಲ.

ಈ ಕೈಪಿಡಿಯನ್ನು ತಯಾರಿಸಲು ಸಹಕರಿಸಿದ ಎಲ್ಲಾ ಸಕ್ರಿಯ ನಾಗರಿಕರಿಗೆ ನಾವು ನಮ್ಮ ಹೃದ್ಪೂರ್ವಕ ಧನ್ಯವಾದಗಳನ್ನು ಅರ್ಪಿಸುತ್ತೇವೆ. ಇಲ್ಲಿ ಹಂಚಿಕೊಂಡ ಯಶಸ್ಸಿನ ಕಥೆಗಳು, ಉದಾಹರಣೆಗಳು ಮತ್ತು ವಿವರಣೆಗಳು ಸಕ್ರಿಯ ಪೌರತ್ವದ ಹಾದಿಯಲ್ಲಿ ಹೆಚ್ಚಿನ ನಾಗರಿಕರನ್ನು ಉತ್ತೇಜಿಸುತ್ತದೆ ಮತ್ತು ಪ್ರೇರೇಪಿಸುತ್ತದೆ ಎಂದು ನಮಗೆ ವಿಶ್ವಾಸವಿದೆ. ಈ ಕೈಪಿಡಿಯನ್ನು ತಯಾರಿಸಲು ನಾವು ಪಡೆದ ಅಭಿಪ್ರಾಯಗಳು ಮತ್ತು ಅನುಭವವು ಅಸಂಖ್ಯಾತ ಜನರದ್ದಿದ್ದರೂ ಪ್ರಮುಖವಾಗಿ ಈ ಕೆಳಗಿನ ವ್ಯಕ್ತಿಗಳಿಗೆ ನಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಲು ನಾವು ಬಯಸುತ್ತೇವೆ, ಅವರ ಸಕ್ರಿಯ ಕೊಡುಗೆ ಇಲ್ಲದೆ ಈ ಪ್ರಯತ್ನವು ಸಾಧ್ಯವಾಗುತ್ತಿರಲಿಲ್ಲ (ವರ್ಣಮಾಲೆಯ ಕ್ರಮದಲ್ಲಿ - A to Z).

- ಆದಿತ್ಯ ವರ್ಗೀಸ್, ಅಸೋಸಿಯೇಟ್ ಮ್ಯಾನೇಜರ್, ಸಾರ್ವಜನಿಕ ಹಣಕಾಸು ನಿರ್ವಹಣೆ, ಜನಾಗ್ರಹ
- ಅಮರೇಶ ಬೆಳಗಲ್, ಹಿರಿಯ ಸಹಾಯಕರು, ಪರಿಸರ ನಗರ-ವ್ಯವಸ್ಥೆಗಳು, ಜನಾಗ್ರಹ
- ಅಮಿತ್ ನಿಗ್ಲಿ, ನಾಗರಿಕ ನಾಯಕರು, ಬಾಣಸವಾಡಿ, ಬೆಂಗಳೂರು
- ಕ್ಷಿತಿಜ್ ಸಿಂಗ್, ಮಾಜಿ ಸಿಬ್ಬಂದಿ ಜನಾಗ್ರಹ
- ಕರ್ನಾಟಕ ವಾರ್ಡ್ ಸಮಿತಿ ಬಳಗ ಮತ್ತು ಅದರ ನಗರ ಘಟಕಗಳ ಮುಖಂಡರು
- ಮೈತ್ರೇಯಿ ಮುಕುಂದನ್, ಹಿರಿಯ ಸಂಯೋಜಕರು, ವಕಾಲತ್ತು ಮತ್ತು ಸುಧಾರಣೆಗಳು, ಜನಾಗ್ರಹ
- ಮಂಜುನಾಥ ಹಂಪಾಪುರ ಎಲ್, ಕಾರ್ಯಕ್ರಮ ವ್ಯವಸ್ಥಾಪಕರು, ನಾಗರಿಕ ಸಹಭಾಗಿತ್ವ - ಕರ್ನಾಟಕ, ಜನಾಗ್ರಹ
- ಮಂಜುನಾಥ ಮೊಕಾಶಿ, ಹಿರಿಯ ಸಂಯೋಜಕರು, ನಾಗರಿಕ ಸಹಭಾಗಿತ್ವ, ಜನಾಗ್ರಹ

- ಪೂಂಗೊತ್ತೈ, ನಾಗರಿಕ ನಾಯಕರು, ಗೊಟ್ಟಿಗೆರೆ, ಬೆಂಗಳೂರು
- ಪ್ರಾರ್ಥನಾ ರಮೇಶ್, ಮುಖ್ಯಸ್ಥರು, ಪರಿಸರ ನಗರ-ವ್ಯವಸ್ಥೆಗಳು, ಜನಾಗ್ರಹ
- ಸಂಗೀತಾ ಆರ್ ನಾಯಕ್, ಕೌನ್ಸಿಲರ್, ಮಂಗಳೂರು ಮಹಾನಗರ ಪಾಲಿಕೆ
- ಸಂತೋಷ ನರಗುಂದ, ಮುಖ್ಯಸ್ಥರು, ನಾಗರಿಕ ಸಹಭಾಗಿತ್ವ ಕಾರ್ಯಕ್ರಮ, ಜನಾಗ್ರಹ
- ಸಪ್ನಾ ಕರೀಂ, ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಜನಾಗ್ರಹ
- ಶಿವಶಂಕರ ಐಹೊಳಿ, ಹಿರಿಯ ಸಂಯೋಜಕರು, ನಾಗರಿಕ ಸಹಭಾಗಿತ್ವ, ಜನಾಗ್ರಹ
- ಶ್ರೀನಿವಾಸ ಅಲವಿಲ್ಲಿ, ಮಾಜಿ ಸಿಬ್ಬಂದಿ ಜನಾಗ್ರಹ
- ವಿ. ಆರ್. ವಚನ, ಮುಖ್ಯಸ್ಥರು, ಮುನ್ಸಿಪಲ್ ಕಾನೂನು ಮತ್ತು ನೀತಿ, ಜನಾಗ್ರಹ
- ಎನ್ ಎಂ ವರ್ಚಸ್ವಿನಿ, ಸಂಯೋಜಕರು, ನಾಗರಿಕ ಸಹಭಾಗಿತ್ವ, ಜನಾಗ್ರಹ
- ಯಶವಂತ ಜೆ, ಮಾಜಿ ಸಿಬ್ಬಂದಿ ಜನಾಗ್ರಹ

ಈ ಕೈಪಿಡಿಯನ್ನು ಒಂದು ಉತ್ತಮವಾದ ವಿನ್ಯಾಸವನ್ನು ನೀಡಿದ ಸಂಸ್ಥೆ ಲಿಟ್ಮಸ್ ಇಂಕ್ ಮತ್ತು ಜನಾಗ್ರಹದ ಹಿರಿಯ ಸಂಯೋಜಕರು(ಸಂವಹನ) ಆನಂದಿತಾ ಜುಮ್ಡೆ ಅವರಿಗೆ ಮತ್ತು ನೇಸರ ಕೆ ಡಿ ರವರಿಗೆ ನಾವು ಧನ್ಯವಾದಗಳನ್ನು ಅರ್ಪಿಸುತ್ತೇವೆ.


ಈ ಪ್ರಕಾಶನೆಯಲ್ಲಿ ವ್ಯಕ್ತಪಡಿಸಿದ ಅಭಿಪ್ರಾಯಗಳು ನಿಯತಕಾಲಿಕಗಳ, ದಾಖಲೆಗಳ ಮತ್ತು ಜನಾಗ್ರಹದ ಅನುಭವಗಳ ಆಧಾರದ ಮೇಲೆ ರೂಪಗೊಂಡ ಲೇಖಕರ ಅಭಿಪ್ರಾಯಗಳಾಗಿವೆ.




**ಉಲ್ಲೇಖನ** - ದಯವಿಟ್ಟು ಈ ವರದಿಯನ್ನು ಈ ಉಲ್ಲೇಖದೊಂದಿಗೆ ಬಳಸಿ: ನನ್ನ ನಗರ ನನ್ನ ಜವಾಬ್ದಾರಿ, ಸಕ್ರಿಯ ನಾಗರಿಕತ್ವದ ಕೈಪಿಡಿ (2024); ಜನಾಗ್ರಹ ಸೆಂಟರ್ ಫಾರ್ ಸಿಟಿಝೆನ್ಷಿಪ್ ಅಂಡ್ ಡೆಮಾಕ್ರಸಿ.

JANAAGRAHA

Rainmatter Foundation


**ಜನಾಗ್ರಹ ಸೆಂಟರ್ ಫಾರ್ ಸಿಟಿಝೆನ್ಶಿಪ್ ಅಂಡ್ ಡೆಮಾಕ್ರಸಿ**

3 ನೇ ಮಹಡಿ, ಸ್ಟೈರ್ ಬಾಗ್, 19/4, ಕನ್ನಿಂಗ್ಹ್ಯಾಮ್ ರಸ್ತೆ, ಬೆಂಗಳೂರು,
ಕರ್ನಾಟಕ, ಭಾರತ – 560052
ದೂರವಾಣಿ: 080 41200844, 41500844

ಈ ಕೈಪಿಡಿಯ ಬಗ್ಗೆ ಹೆಚ್ಚಿನ ಮಾಹಿತಿ ಅಥವಾ ವಿವರಣೆಯನ್ನು ಪಡೆಯಲು/ತಿಳಿದುಕೊಳ್ಳಲು
ಇಮೇಲ್: activecitizen@janaagraha.org

**www.janaagraha.org**

/janaagraha @Janaagraha1 /janaagraha @Janaagraha /janaagraha-centre-for-citizenship-and-democracy



**ವಿನ್ಯಾಸಗೊಳಿಸಿದವರು**

litmus.ink

2024 ರಲ್ಲಿ ಪ್ರಕಟಿಸಲಾಗಿದೆ